ಸೊಫೋಕ್ಲಿಸ್ ಮಹಾಕವಿಯ

ದೊರೆ ಈಡಿಪಸ್

ಮತ್ತು

ಅಂತಿಗೊನೆ

ಅನುವಾದ :

ಪಿ. ಲಂಕೇಶ್

ಅಕ್ಷರ ಪ್ರಕಾಶನ ಸಾಗರ ಮೈಸೂರು ರಾಜ್ಯ

ಸೊಫೋಕ್ಲಿಸ್ ಮಹಾಕವಿಯ

ದೊರೆ ಈಡಿಪಸ್

ಮತ್ತು

ಅಂತಿಗೊನೆ

ಅನುವಾದ

ಪಿ. ಲಂಕೇಶ್

ಅಕ್ಷರ ಪ್ರಕಾಶನ   ಸಾಗರ   ಮೈಸೂರು ರಾಜ್ಯ

OEDIPUS MATTU ANTIGONE (Kannada): Translation of the two tragedies of Sophocles by P. Lankesh, M. A., Dept. of English, Bangalore University, Bangalore. Published by Akshara Prakashana, and Printed at Sagara Mudrana, both at Sagara, Mysore State. First impression: July 1972, 1000 Copies. 108 + 20 Pages.

Price Rs. 6 and 10.

ಬೆಲೆ : ಸಾದಾ ರೂ. ೬

ಉತ್ತಮ ರೂ. ೧೦

ಮುನ್ನುಡಿ

೧

'ದೊರೆ ಈಡಿಪಸ್' ನನ್ನ ಪ್ರಕಾರ ವಿನ್ಯಾಸ ಮತ್ತು ನಾಟಕತ್ವದ ದೃಷ್ಟಿಯಿಂದ ಜಗತ್ತಿನ ಅತ್ಯುತ್ತಮ ನಾಟಕ. ಎಲ್ಲ ದೃಷ್ಟಿಯಿಂದ ಅತ್ಯುತ್ತಮ ಎಂದು ಅರಿಸ್ಟಾಟಲ್ ಕೂಡ ಹೇಳಿರುವುದನ್ನು ಪಾಶ್ಚಿಮಾತ್ಯ ರಂಗಭೂಮಿ ಬಲ್ಲವರಿಗೆ ಜ್ಞಾಪಿಸಬೇಕಿಲ್ಲ. ಆದರೆ ಶೇಕ್ಸ್‌ಪಿಯರ್ ಸಾಧಿಸಿದ ದಿಗ್ವಿಜಯ ಅರಿಸ್ಟಾಟಲ್‌ಗೆ ಗೊತ್ತಿರಲು ಸಾಧ್ಯವಿರಲಿಲ್ಲ ವಾದ್ದರಿಂದ ನಾವು ಆತನನ್ನೂ ಸೇರಿಸಿಕೊಂಡು ಹೇಳುವಾಗ ಶೇಕ್ಸ್‌ಪಿಯರ್ ಮತ್ತು ಸಾಫೋಕ್ಲಿಸ್ ನಡುವಿನ ಕೆಲವು ವ್ಯತ್ಯಾಸಗಳನ್ನು ಗುರುತಿಸಬೇಕಾಗುತ್ತದೆ.

ರಂಗವನ್ನು ಮತ್ತು ಪಾತ್ರಗಳನ್ನು ಬದುಕಿಗೆ ಹತ್ತಿರ ತರುತ್ತಲೇ ಅವಕ್ಕೆ ನಿಲುಕಬಲ್ಲಷ್ಟು ಅರ್ಥವನ್ನೂ ಕನಸನ್ನೂ ದಕ್ಕಿಸಿದ ಶೇಕ್ಸ್‌ಪಿಯರಿಗೆ ಸಮಾನನಾದ ನಾಟಕಕಾರ ಜಗತ್ತಿನಲ್ಲಿಯೇ ಇರಲಾರ ; ಮೂರೂ ಐಕ್ಯಗಳನ್ನು ತೊರೆದು ಮುಖ್ಯವಾಗಿ ದೊರೆಗಳು ಮತ್ತು ಅವರಂಥವರ ಬದುಕಿಗೆ ಮೀಸಲಾಗಿದ್ದ ನಾಟಕದಲ್ಲಿ ಹಲವಾರು ಬಗೆಯ, ಅಂತಸ್ತಿನ ಜನರನ್ನು ಕಂಡು, ವಿವಿಧ ಬಗೆಯ ಮನಃಸ್ಥಿತಿಗಳನ್ನು ಮಂಡಿಸಿ, ಸಾಮಾಜಿಕ, ಧಾರ್ಮಿಕ, ವೈಯುಕ್ತಿಕ ಎಲ್ಲವನ್ನೂ ಒಟ್ಟಿಗೇ ಹೇಳಬಲ್ಲ, ಅತ್ಯಂತ ಆತ್ಮೀಯವಾಗಿಯೂ ಅತ್ಯಂತ ಸಾರ್ವಜನಿಕವಾಗಿಯೂ ಬರೆಯಬಲ್ಲ ಶೇಕ್ಸ್‌ಪಿಯರ್ ಒಂದು ದೊಡ್ಡ ಪವಾಡ. ಆದರೆ ನಾವು ಶೇಕ್ಸ್‌ಪಿಯರನ ಅನನ್ಯತೆ ಗಮನಿಸುವಾಗ ಸಾಫೋಕ್ಲಿಸ್ ಮತ್ತು ಅವನಂಥ ಕವಿಗಳನ್ನು ಮರೆಯುವಂತಿಲ್ಲ. ಶೇಕ್ಸ್‌ಪಿಯರ್ ಬ್ರಹ್ಮನ ಸೃಷ್ಟಿಯಲ್ಲಿ ನಡೆದಾಡುವಾಗ ಸಿಕ್ಕುವ ಜೀವನೋತ್ಸಾಹಕ್ಕೆ, ಜೀವನಾನುಭವಕ್ಕೆ ಸಮನಾದ ಜೀವನ ಸ್ಪಷ್ಟತೆ ಸಿಕ್ಕುವುದಿಲ್ಲ. 'ಪ್ರಕೃತಿಗೆ ಕನ್ನಡಿ ಹಿಡಿಯಲೆತ್ನಿಸುವ' ಶೇಕ್ಸ್‌ಪಿಯರ್, ನಿಸರ್ಗದ ಹಾಗೆಯೇ, ತಾತ್ವಿಕವಾಗಿ ಅಸ್ಪಷ್ಟ ; ಇದು ಬದುಕಿನ ಶಕ್ತಿಗಳಂತೆಯೇ, ಪದರಗಳಂತೆಯೇ ಎಂದು ಹೇಳಿ ತಪ್ಪಿಸಿಕೊಳ್ಳಲಾಗುವುದಿಲ್ಲ. ಬೇರೆ ಮಾತಲ್ಲಿ

ಹೇಳುವುದಾದರೆ, ತತ್ವಜ್ಞಾನದಿಂದ ಹೊರಡುವ ವಿಚಿತ್ರ ಸಂತೋಷ ಶೇಕ್ಸ್‌ಪಿಯರಲ್ಲಿ ಕಡಿಮೆ. ಶೇಕ್ಸ್‌ಪಿಯರಲ್ಲಿ ದೊರಕುವ ಸಂತೋಷದ ಬಹುಪಾಲು ನೋಡುವುದರಲ್ಲಿ, ತಿಳಿಯುವುದರಲ್ಲಿ ಇದೆಯೆಂದರೆ, ಸಾಫೋಕ್ಲಿಸ್ ನಾಟಕಗಳ ಸಂತೋಷ ಮುಖ್ಯವಾಗಿ ಬದುಕಿನ ಕ್ಲಿಷ್ಟತೆಯನ್ನು ಸ್ಪಷ್ಟಗೊಳಿಸಿಕೊಳ್ಳುವುದರಲ್ಲಿ ಇದೆ. ಇನ್ನೊಂದು ಅರ್ಥದಲ್ಲಿ, ಒಂದು ಗೊತ್ತಾದ ಧಾರ್ಮಿಕ ಪರಿಸರದಲ್ಲಿ ಬರೆಯುವ ಸಾಫೋಕ್ಲಿಸ್‌ಗೆ ಸ್ಪಷ್ಟತೆ ಮತ್ತು ವಿನ್ಯಾಸಸೌಷ್ಟವ ಸಾಧ್ಯವಾಯಿತು ; ಎಲ್ಲವನ್ನೂ ಹುಡುಕುತ್ತ ಸ್ಥಾಪಿಸಲೆಳಸುವ ಶೇಕ್ಸ್‌ಪಿಯರ್ ಮೂಲಭೂತವಾಗಿ ರೊಮ್ಯಾಂಟಿಕ್ ಆಗಿದ್ದುಕೊಂಡು, ಒಂದು ಬಗೆಯ ಸಮಯ ಸ್ಫೂರ್ತಿಯನ್ನು ನೆಚ್ಚಿಕೊಂಡಿದ್ದು ಕ್ಲಾಸಿಕಲ್ ಸ್ಥಿಮಿತದತ್ತ ಹೋರಾಡ ಬೇಕಾಯಿತು. ಆದ್ದರಿಂದಲೇ ಸಾಫೋಕ್ಲಿಸ್ ನಾಟಕಗಳ ಕಟ್ಟಡ ಮತ್ತು ಶೇಕ್ಸ್‌ಪಿಯರ್ ನಾಟಕಗಳ ತಹತಹ—ಎರಡೂ ಆಶ್ಚರ್ಯಕರ ಸಾಧನೆಗಳೆನಿಸುವುದು.

ಈಗಾಗಲೇ ಗ್ರೀಕ್ ನಾಟಕಗಳ ಬಗ್ಗೆ ಕನ್ನಡದಲ್ಲಿ ಬಿ. ಎಂ. ಶ್ರೀ, ಕ. ವೆಂ. ರಾಘವಾ ಚಾರ್ಯ ಅವರು ಸಾಕಷ್ಟು ವಿಸ್ತಾರವಾಗಿ ಮತ್ತು ಉಪಯುಕ್ತವಾಗಿ ಬರೆದಿರುವುದ ರಿಂದ ಈ ಎರಡು ನಾಟಕಗಳಲ್ಲಿ ನಿರ್ದೇಶಕರು ಗಮನಿಸಬೇಕೆಂದು ನಾನು ಬಯಸುವ ಕೆಲವು ಅಂಶಗಳನ್ನು ಮಾತ್ರ ಕಾಣಿಸುತ್ತೇನೆ ; ಥೀಬ್ಸ್ ಪುರಾಣ ಈ ನಾಟಕಗಳ ಅಭ್ಯಾ ಸಕ್ಕೆ ಉಪಯುಕ್ತವೆಂದು ಸಂಕ್ಷಿಪ್ತವಾಗಿ 'ಮುನ್ನುಡಿ' ಯಾದ ಮೇಲೆ ಕೊಟ್ಟಿದೆ.

'ದೊರೆ ಈಡಿಪಸ್' ಹಲವು ಬಗೆಯಲ್ಲಿ ವಿಸ್ಮಯಕರ ಕೃತಿಯಾಗಿದೆ. ಮೊದಲನೆಯದಾಗಿ, ಈ ನಾಟಕದ ರಚನೆ. ಕೆಲವೇ ಗಂಟೆಗಳ ಘಟನೆಗಳನ್ನು ಇದು ನಮ್ಮ ಮುಂದಿಡುತ್ತದೆ. ನಾವು ನಾಟಕದೊಂದಿಗೆ ಮುಂದೆ ಹೋದಂತೆಲ್ಲ ಈಡಿಪಸ್‌ನ ಹಿಂದಿನ ವರ್ಷಗಳು ನಮ್ಮೆದುರು ಹಾಸಿಕೊಳ್ಳುತ್ತ ಹೋಗುತ್ತವೆ ; ಆತನ ಅತ್ಯಂತ ರುದ್ರ ಗಳಿಗೆಗಳು ಅತ್ಯಂತ ಸ್ಪಷ್ಟ ಗಳಿಗೆಗಳಾಗುತ್ತ ಹೋಗುತ್ತವೆ. ಈ ವಿರೋಧಗಳನ್ನು ಗಮನಿಸಿದರೆ ಇಲ್ಲಿಯು ನಾಟಕತ್ವ ತಿಳಿಯುತ್ತದೆ. ಈಡಿಪಸ್ ರಾಜನಾದವನು ; ಈತ ತನ್ನ ಅಸಂಖ್ಯ ಪ್ರಜೆ ಗಳೊಂದಿಗೆ ವ್ಯವಹರಿಸಬೇಕಾಗಿರುವಂತೆಯೇ ತನ್ನ ವೈಯಕ್ತಿಕ ಕಷ್ಟಗಳೊಂದಿಗೆ ಸೆಣಸಬೇಕಾಗಿದೆ ; ಇದು ನಾಟಕದ ಧೋರಣೆಯ ವೈವಿಧ್ಯಕ್ಕೆ ಸಹಾಯಮಾಡುತ್ತದೆ. ಭಾಷಣ. ಸಂಭಾಷಣೆಯಿಂದ ಹಿಡಿದು ಅತ್ಯಂತ ಭಾವಗೀತಾತ್ಮಕ ವೈಯಕ್ತಿಕ ಅಭಿ ವ್ಯಕ್ತಿಯ ವರೆಗೆ ಈ ವೈವಿಧ್ಯ ಹಬ್ಬಿದೆ. ಸಹಸ್ರಾರು ಜನ ಪ್ರೇಕ್ಷಕರಿಗೆ, ಕುದುರೆಲಾಳದ ಆಕಾರದ ರಂಗಮಂದಿರದಲ್ಲಿ ಕೂರುತ್ತಿದ್ದ ಜನಸಾಮಾನ್ಯರಿಗೆ, ಮಾತುಗಳನ್ನು ತಲುಪಿಸಲೇ ಬೇಕಾಗಿದ್ದುದರಿಂದ ತುಂಬುಗಂಟಲಲ್ಲಿ ಮಾತಾಡುವ ಶೈಲಿ ಇಲ್ಲಿದೆ; ರಂಗಮಂದಿರದ ಆಕಾರ ಮತ್ತು ವೈಶಾಲ್ಯ ವಸ್ತುವಿಗೆ ವಿಶಿಷ್ಟ ಸರಳತೆಯನ್ನೂ ಹೇಳಿಕೆಗೆ ಸ್ಪಷ್ಟತೆಯನ್ನೂ ತರುವುದರೊಂದಿಗೆ ಅನುಪಮ ಗಾಂಭೀರ್ಯವನ್ನೂ ವಿಧ್ಯುಕ್ತ

ಕ್ರಿಯೆಯ ಗುಣವನ್ನೂ ತಂದಿದೆ. ಹೀಗೆ 'ದೊರೆ ಈಡಿಪಸ್' ನಾಟಕದ ಶ್ರವ್ಯಗುಣ ರಚನೆಯಲ್ಲಿಯೇ ಇದೆ: ಕಾಲ, ಘಟನೆಗಳನ್ನು ಸಂಘರ್ಷಿಸುವುದರ ಮೂಲಕ; ಸಂಭಾಷಣೆ, ಭಾಷಣ, ಭಾವಗೀತಾತ್ಮಕತೆಯನ್ನು ಹೊಂದಿಸಿ ಕಟ್ಟುವುದರ ಮೂಲಕ, ತಾತ್ವಿಕ ಜೀವನ ದೃಷ್ಟಿ ತಳೆಯುವುದರ ಮೂಲಕ (ತತ್ವ ಶಾಸ್ತ್ರದಲ್ಲಿ ಗ್ರಹಗಮನದ ಸಂಗೀತವಿದೆ ಅಂದದ್ದು ಪ್ಲೇಟೋ)—ಸೊಗಸಾದ ಲಯಬದ್ಧತೆ, ಗೇಯತೆ ಸಾಧಿಸಲಾಗಿದೆ. ಈ ಎಲ್ಲದರ ಪರಾಕಾಷ್ಠೆ ಮೇಳ: ಕೆಲವೊಮ್ಮೆ ನೇರವಾಗಿ, ಕೆಲವೊಮ್ಮೆ ಅಸ್ಪಷ್ಟವಾಗಿ ತಟ್ಟುವ ಲಯವನ್ನು ಒಂದು ರೂಪಕ್ಕೆ ತರುವ, ಇಡೀ ಘಟನೆಯನ್ನು ಸ್ವೀಕರಿಸುವುದರ ಮೂಲಕ ಪ್ರೇಕ್ಷಕರು ಮತ್ತಷ್ಟು ತೀವ್ರವಾಗಿ ಸ್ವೀಕರಿಸುವಂತೆ ಮಾಡುವ, ಶ್ರವ್ಯತ್ವವನ್ನು ದಟ್ಟಗೊಳಿಸುವ ಸಾಧನ ಮೇಳ. ಜನ ಹಾಡುವುದನ್ನು, ನರ್ತಿಸುವುದನ್ನು, ಆ ಮೂಲಕ ಸುಖದುಃಖ ತೋಡಿಕೊಳ್ಳುವುದನ್ನು ಇನ್ನೂ ಮರೆಯದಿದ್ದ ಕಾಲದ ಮೇಳ ನಾಟಕಕಾರನಿಗೆ ಐಕ್ಯ ಸಾಧಿಸಲು ನೆರವಾಗುತ್ತದೆ; ಅದಕ್ಕಿಂತ ಹೆಚ್ಚಾಗಿ ನಾಟಕದ ಅರ್ಥ ಮತ್ತು ರಂಜಕತೆಯ ವ್ಯಾಪ್ತಿ ಹೆಚ್ಚಿಸುತ್ತದೆ; ರಂಗದ ಮೇಲೆ ವಿವಿಧ ಗುಂಪುಗಳಾಗಿದ್ದು ನಾಟಕವನ್ನು ಚಿತ್ರವತ್ತಾಗಿ ಮಾಡುತ್ತದೆ.

ಇನ್ನು ಈಡಿಪಸ್ ಪಾತ್ರದ ಬಗ್ಗೆ. ಇದನ್ನು ಒಂದು ವೈಯಕ್ತಿಕ ಮಾತಿನೊಂದಿಗೆ ವಿವರಿಸಬೇಕು. ನಮ್ಮ ನಿರ್ದೇಶಕರೊಬ್ಬರಿಗೆ ಈ ನಾಟಕ ಅನುವಾದಿಸುವ ಮಾತು ಕೊಟ್ಟು ಅರ್ಧ ಮುಗಿಸಿದ ಮೇಲೆ ಅವರು ಸಿಕ್ಕಾಗ ಅವರಿಗೆ ನಿರಾಶೆ ಉಂಟುಮಾಡದಿರಲು, "ಮುಗಿದಿದೆ, ಕಾಪಿ ಮಾಡ್ತಿದೇನೆ" ಅಂದಿದ್ದೆ, ಆದರೆ ನಾಟಕದ ನಡುವೆ ನಾನು ಸಿಕ್ಕಿಹಾಕಿಕೊಂಡು ಈಡಿಪಸ್ ಪಾತ್ರದೊಂದಿಗೆ ಸಾಗಲು ಭಯಗೊಂಡು ಸುಮ್ಮನಾಗಿದ್ದೆ; ಯಾಕೆಂದರೆ ಈಡಿಪಸ್‌ಗೆ ದೊರೆಯುವ ಶಿಕ್ಷೆ ಅನ್ಯಾಯದ್ದೆನ್ನಿಸಿತ್ತು; ಆತ ಚಿಕ್ಕ ಹುಡುಗನಾಗಿದ್ದಾಗ ಪಾಲಿಬಸ್‌ನಿಂದ ಓಡಿಹೋಗಿ ದೇವರ ನಿಯಮವನ್ನು ದಾಟಲೆಳಸಿದ್ದರೂ ಪ್ರಬುದ್ಧನಾದಮೇಲೆ ಅವನನ್ನು ಶಿಕ್ಷಿಸುವುದು ತೀರಾ ಕ್ರೂರವಾಗಿ ಕಂಡಿತ್ತು. ಈಡಿಪಸ್ ತಾನು ತಿಳಿದು ಮಾಡಿದ ತಪ್ಪೇನು ? ತಪ್ಪು ಮಾಡಿದ್ದು ಅವನ ತಂದೆ ಲಾಯಿಸ್: ದೇವರ ಭವಿಷ್ಯವಾಣಿಯ ಪ್ರಕಾರ ತಂದೆಯನ್ನು ಕೊಂದು ತಾಯಿಯ ಜೊತೆಗೆ ಮಲಗುವುದಾಗಿ ಭಯಗೊಂಡು ಆ ದೇವವಾಣಿಯನ್ನು ಸುಳ್ಳು ಮಾಡಲು ಗುಡ್ಡಗಾಡಿಗೆ ಮಗುವನ್ನು ಸಾಗಿಸಿ ಕಾಲುಚುಚ್ಚಿ ಬಿಟ್ಟುಬಂದಿದ್ದ ಆತ. ಇದು ಲಾಯಿಸ್ ದೇವರಿಗೊಡ್ಡಿದ ಸವಾಲು; ಇದಕ್ಕೆ ಮುನಿದ ದೇವರು ತನ್ನ ನಿಯಮವನ್ನು ನೆರವೇರಿಸಿಯೇ ಬಿಟ್ಟ. ಈಡಿಪಸ್ ತನಗೆ ಗೊತ್ತಿಲ್ಲದೆಯೇ ತನ್ನ ತಂದೆಯನ್ನು ಕೊಂದು ಹೆತ್ತವಳ ಮದುವೆಯಾದ; ಸ್ಫಿಂಕ್ಸ್‌ನ ಒಗಟು ಬಿಡಿಸಿದ್ದು ಆತ ರಾಜನಾಗಲು ಮತ್ತು ಇನ್ನೆಲ್ಲ ಭಾಗ್ಯ ಪಡೆಯಲು ನೆರವಾಯಿತು. ಈಡಿಪಸ್ ತನ್ನ ಪಾಪವನ್ನು ತನಗೆ ಗೊತ್ತಿಲ್ಲದೆ ಮಾಡಿದ್ದರೂ ದೇಶ ಕಷ್ಟಕೋಟಲೆಗಳಿಗೆ ಸಿಕ್ಕಿತು;

ಇದಕ್ಕೆಲ್ಲ ಪರೋಕ್ಷವಾಗಿ ಮಾತ್ರ ಅವನು ಜವಾಬ್ದಾರ. ಇದಕ್ಕಾಗಿ ಈಡಿಪಸ್ ಏಕೆ ನೋವನ್ನನುಭವಿಸಬೇಕು ?

ಇಲ್ಲಿಯೇ ಈಡಿಪಸ್ ನಾಟಕ ನಮಗೆ ಹತ್ತಿರವಾಗುವುದು : ದುಷ್ಟರನ್ನು ಶಿಕ್ಷಿಸುವ ಶಿಷ್ಟರನ್ನು ಪರಿಪಾಲಿಸುವ ನ್ಯಾಯವನ್ನು ಮೀರಿದ ತರ್ಕಾತೀತ ಶಕ್ತಿಯನ್ನು ತನ್ನ ಸೌಷ್ಠವದ ಕಟ್ಟಡದೊಳಗೆ ತಂದು ಸಾಫೋಕ್ಲಿಸ್ ಕವಿ ಶೇಕ್ಸ್‌ಪಿಯರರಿಗೆ ಮತ್ತು ಆಧುನಿಕರಿಗೆ ಹತ್ತಿರವಾಗುತ್ತಾನೆ. ನಮ್ಮಲ್ಲಿ ಸಾವಿಗೆ ಹೇಗೆ ಉತ್ತರವಿಲ್ಲವೋ ಹಾಗೆ ಮುಪ್ಪು, ನೋವುಗಳಿಗೆ ಉತ್ತರವಿಲ್ಲ ; ಆಕಸ್ಮಿಕಗಳ ಮೇಲೆ ಕಟ್ಟಿದ್ದು ಬದುಕು. ನಮ್ಮೆಲ್ಲ ಆಶಾವಾದ, ತರ್ಕ, ವೈಭವ, ಮಹತ್ವಾಕಾಂಕ್ಷೆಗಳಿಗೆ ವಿಧಿಯ ಕುಹಕದ ಉತ್ತರ ನೋಡಿ ಮನುಷ್ಯ ವಿಸ್ಮಿತನಾಗುತ್ತಾನೆ. ಇದಕ್ಕಿಂತ ಮುಖ್ಯವಾಗಿ ಭೂಮಿಗೆ ಅಂಟಿಕೊಂಡು ಅಲ್ಲಿಯೇ ಹುಟ್ಟಿ ಅಲ್ಲಿಯೇ ತನ್ನ ಮೋಕ್ಷ ಪಡೆಯಲಾಗದ ಮನುಷ್ಯ ತನ್ನ ಹುಟ್ಟು ಮತ್ತು ಅದರ ಅರ್ಥ ಶೋಧಿಸುತ್ತ ಹೋಗುತ್ತಾನೆ. ಈ ದೃಷ್ಟಿಯಲ್ಲಿ ಈಡಿಪಸ್ ಸರ್ವಕಾಲದ ಸಂಕೇತ. ಆದ್ದರಿಂದಲೇ ಈಡಿಪಸ್‌ನದು ತ್ಯಾಗ ಕೂಡ : ತನ್ನ ರಾಜತ್ವ, ಅಧಿಕಾರ ಯಾವುದನ್ನೂ ಲೆಕ್ಕಿಸದೆ ತನ್ನ ಬಗ್ಗೆ ಸತ್ಯಕ್ಕಾಗಿ, ತನ್ನ ಮೂಲಕ್ಕಾಗಿ ಹುಡುಕಾಡುತ್ತಾನೆ ; ಪಾಪದ ನೆಪದಲ್ಲಿ ಆತ ಗಳಿಸಿಕೊಳ್ಳುವುದು ಪುಣ್ಯ. ಈಡಿಪಸ್ ತನ್ನವರು, ತನ್ನದು ಎಲ್ಲವನ್ನೂ ತೊರೆದು ಕಣ್ಣು ಕಳೆದುಕೊಂಡು ನಿಜಕ್ಕೂ ತಪಸ್ವಿಯ ಸ್ಥಿತಿ ಹೊಕ್ಕಂದು ಅವನಿಗೆ ಇನ್ನೊಂದು ಬಗೆಯ ವೈಭವ ದಕ್ಕುತ್ತದೆ. ಈ ವೈಭವದಲ್ಲಿಯೇ ಆತ ದೇವರ ನಿಯಮ ಗೆಲ್ಲುತ್ತಾನೆ, ತನ್ನ ತಂದೆಯ ಭಯವನ್ನು ವಿಜಯಕ್ಕೆ ಪರಿವರ್ತಿಸುತ್ತಾನೆ. ಮೇಲುನೋಟಕ್ಕೆ ಈಡಿಪಸ್ ಅನುಭವಿಸುವ ಶಿಕ್ಷೆಯಲ್ಲಿ ಸುಖ ಕಾಣುವ ಥೀಬ್ಸ್ ಪ್ರಜೆಗಳು ಈ ನಾಟಕದ ಮುಂದಿನ ಘಟನೆ ಹೇಳುವ "ಈಡಿಪಸ್" ಕೊಲೋನಸ್ ನಾಟಕದಲ್ಲಿ, ಮತ್ತೆ ದೇವರ ಅನುಜ್ಞೆಯ ಪ್ರಕಾರ, ಕುರುಡನಾಗಿರುವ ಈಡಿಪಸ್‌ನನ್ನು ಥೀಬ್ಸ್‌ಗೆ ಕರೆಯುತ್ತಾರೆ ; ಆತ ತಮ್ಮ ನಗರಕ್ಕೆ ಹಿಂದಿರುಗುವುದರಲ್ಲಿ ತಮ್ಮ ಸುಖವಿದೆಯೆಂದು ಗೋಗರೆಯುತ್ತಾರೆ. ಇದೂ ಕೂಡ ಈಡಿಪಸ್‌ನ ಗೆಲುವನ್ನು ಸೂಚಿಸುತ್ತದೆ.

ದೈವಿಕತೆಯ ಹಿನ್ನೆಲೆ, ದೇವರ ನಿಯಮದ ಮಿತಿಯಲ್ಲಿ ಕ್ರಿಯೆ ನಡೆಯುವಂತೆ ಕಂಡರೂ "ದೊರೆ ಈಡಿಪಸ್" ಹೀಗೆ ಮನುಷ್ಯನ ಶೋಧನೆಯ ಜಯವೆನ್ನಿಸಿ, ಈ ಎಲ್ಲ ಶೋಧನೆಯ ದುರಂತದೊಂದಿಗೆ ಹೇಳುತ್ತ ನಮಗೆ ಅರ್ಥಪೂರ್ಣವಾಗುತ್ತದೆ. ಒಂದು ರೀತಿಯಲ್ಲಿ ನಿರಾಶೆ ಕವಿದ, ನಿರಪರಾಧಿಯನ್ನು ಶಿಕ್ಷಿಸುವ ಈ ನಾಟಕ ಇನ್ನೊಂದು ಕಾರಣಕ್ಕೂ ಮನುಷ್ಯತ್ವದ ಮತ್ತು ಮನುಷ್ಯ ಸಾಧ್ಯವಾದದ್ದರ ಆರಾಧನೆಯೆನ್ನಿಸುತ್ತದೆ. ಘರ್ಷಣೆಯಲ್ಲಿ ಶಕ್ತಿ ಇರುವಂತೆಯೇ ನಾಟಕದ ಶೈಲಿಯಲ್ಲಿ ತೇಜಸ್ಸಿದೆ ; ಈಡಿಪಸ್ ತನ್ನ

ಬುಡಕ್ಕೆ ತಾನೇ ಕೊಡಲಿಯೇಟು ಹಾಕಿಕೊಳ್ಳುವಾಗ ಸಹ ಜೀವನೋತ್ಸಾಹದಿಂದ ವಿಜೃಂಭಿಸುತ್ತಾನೆ. ಇದನ್ನು ನಾವು ಈಡಿಪಸ್‌ನ ಹಠ ಅಥವಾ ಅಹಂಕಾರ ಎಂದು ಹೇಳಲು ಅವಕಾಶವಿದೆ ; ಇವನ ಅಹಂಕಾರ ಈತ ಟೈರೀಸಿಯಸ್, ಕ್ರೆಯಾನ್, ಕುರುಬ —ಇವರೊಂದಿಗೆ ಮಾತಾಡುವಾಗ ಗೊತ್ತಾಗುತ್ತದೆ ; ರಾಜ್ಯದ ನ್ಯಾಯಕ್ಕಾಗಿ ದೇವರ ನ್ಯಾಯದ ಬಗ್ಗೆ ಕುರುಡಾದ ಈತ ಗಂಟಲೆತ್ತಿ, ಭಾಷೆಯ ಎಲ್ಲ ಶಕ್ತಿಯನ್ನು ಬಳಸಿ ಕೊಂಡು, ಮಾತಾಡುತ್ತಾನೆ. ಕಾವ್ಯ—ಈ ಜಗತ್ತಿನ ಗುಣಗಳಿಂದ ತನ್ನ ನರಶಕ್ತಿ ಪಡೆ ಯುವ ಕಾವ್ಯ—ಈ ರೀತಿಯಲ್ಲಿ ತೀವ್ರವಾಗುತ್ತ ತನ್ನ ತೀವ್ರತೆಯಿಂದಲೇ ನೈತಿಕತೆ ಪಡೆಯುತ್ತ ಹೋಗುತ್ತದೆ. ಎಲ್ಲ ಮುಖ್ಯ ಕಾವ್ಯದ ವಿಚಿತ್ರ ಕೆಲಸ ಇಲ್ಲಿ ಗೊತ್ತಾಗುತ್ತದೆ ಹೇಳಿಕೆಯ ಅನೀತಿಯನ್ನು ಪರಿಣಾಮದ ನೀತಿಯನ್ನಾಗಿಸುವ ಗುಣ ದೊಡ್ಡ ಕಾವ್ಯದ್ದು. ಇದು ದುರಂತನಾಟಕದ 'ಕ್ಯಥಾರ್ಸಿಸ್' ನಲ್ಲಿ ಮುಖ್ಯ ವಾದದ್ದು ; ಕಣ್ಣಿದ್ದಾಗ ಈಡಿಪಸ್ ಮಾಡುವ ಪಾಪ ಮತ್ತು ಕಣ್ಣು ಕಳೆದುಕೊಂಡ ಮೇಲೆ ಆತ ಗಳಿಸುವ ತೇಜಸ್ಸು—ಇದನ್ನು ಒಗ್ಗೂಡಿಸುವುದು ಈ ನಾಟಕದ ಕಾವ್ಯ ಗುಣ ; ಮತ್ತು ಕಾವ್ಯಗುಣವನ್ನು ಮೀರಿದ ಯಶಸ್ಸು.

೨

'ದೊರೆ ಈಡಿಪಸ್' ನಾಟಕ ವಿಧಿಯ ಬಲೆಯಲ್ಲಿ ಸಿಕ್ಕ ಮನುಷ್ಯ ಅದರ ಆಟವನ್ನು ನಡೆಸಿಕೊಡುತ್ತಲೇ ಮಾನವತೆಯನ್ನು ಉಜ್ವಲಗೊಳಿಸಿ ತೋರುವ ಮೂಲಕ ವಿಧಿ ಯನ್ನು ಗೆಲ್ಲುವ ಚಿತ್ರಣ ಕೊಟ್ಟರೆ, 'ಅಂತಿಗೊನೆ' ವ್ಯಕ್ತಿ ಮತ್ತು ವ್ಯವಸ್ಥೆಯ ನಡುವಿನ ಘರ್ಷಣೆ ಮಂಡಿಸುವುದರ ಮೂಲಕ ನಮ್ಮ ಮೂಲಭೂತ ಅನ್ನಿಸಿಕೆಯೊಂದನ್ನು ಮುಂದಿಡುತ್ತದೆ. ಅಂತಿಗೊನೆ ಮತ್ತು ಕ್ರೆಯಾನ್ ನಡುವಿನ ಜಗಳಕ್ಕೆ ಕಾರಣವೇನೆಂದು ನೋಡಿದರೆ ಇದು ಸ್ಪಷ್ಟವಾಗುತ್ತದೆ. ಅಂತಿಗೊನೆಯ ಅಣ್ಣಂದಿರಾದ ಪಾಲಿನೈಕಸ್ ಮತ್ತು ಎತೆಯೋಕ್ಲಿಸ್ ಯುದ್ಧದಲ್ಲಿ ಸತ್ತಿದ್ದಾರೆ. ಕಿರಿಯನಾದ ಎತೆಯೋಕ್ಲಿಸ್ ದೇಶ ಕ್ಕಾಗಿ ಹೋರಾಡಿದವನೆಂಬ ಕಾರಣಕ್ಕೆ ಅವನಿಗೆ ಶವಸಂಸ್ಕಾರದ ಮರ್ಯಾದೆ ದೊರೆತು ದೇಶವನ್ನು ನಾಶಪಡಿಸಲು ದಂಡೆತ್ತಿಬಂದನೆಂಬ ಕಾರಣಕ್ಕೆ ಪಾಲಿನೈಕಸ್‌ನ ಶವ ಬಯ ಲಲ್ಲಿ ಬಿದ್ದು ನಾಯಿನರಿಗಳ ಪಾಲಾಗಿದೆ. ಹಾಗೆ ಎಸೆಯುವುದರ ಮೂಲಕ ಕ್ರೆಯಾನ್ ತನ್ನ ಉದ್ದೇಶಕ್ಕೇ ವಿರುದ್ಧವಾದ ಕೃತ್ಯ ನಡೆಸಿದ್ದಾನೆ : ಮನುಷ್ಯನ ಮನಸ್ಸು ಮತ್ತು ದೇಹದ ಆರೋಗ್ಯಕ್ಕೆ ಒಳಿತಲ್ಲದ ಕೆಲಸ ಇದು—ಯಾಕೆಂದರೆ ಹೆಣ ಕೊಳೆತು ನೋಟಕ್ಕೆ ಭೀಕರವಾಗಿದೆ ; ದೇಶದ ಪರಂಪರೆಗೆ ವಿರುದ್ಧವಾದ ಕೆಲಸ ಇದು—ಯಾಕೆಂದರೆ ಮನುಷ್ಯನ ಜಗತ್ತಿನಲ್ಲಿ ದ್ರೋಹ ಅನ್ನಿಸಿಕೊಳ್ಳಬಲ್ಲ ಕೃತ್ಯ ದೇವರ ಜಗತ್ತಿನಲ್ಲಿ ಹಾಗಿರದೆ ಇರಲಿಕ್ಕೆ ಸಾಕು : ಸತ್ತವನನ್ನು ಕ್ಷಮಿಸಿ ಶವಸಂಸ್ಕಾರ ನಡೆಸಿ ಹೇಡ್ಸ್‌ಗೆ ಕಳಿಸಿಕೊಡ

ಬೇಕಾದ್ದು ಮನುಷ್ಯರ ಕರ್ತವ್ಯ. ವ್ಯವಸ್ಥೆಯನ್ನು ಕಾಪಾಡುವ ನೆಪದಲ್ಲಿ ದೇಶಪ್ರೇಮವೆಂದು ಕ್ರೆಯಾನ್ ಬಣ್ಣಿಸಿಕೊಳ್ಳುವ ಹುಂಬತನದಿಂದ, ಕೊಬ್ಬಿನಿಂದ ಹೆಣದ ಬಗ್ಗೆ ಕ್ರೌರ್ಯ ತೋರಿ ಪರಂಪರೆಯನ್ನು ಮುರಿದಿದ್ದಾನೆ ; ಗ್ರೀಕರು ಯಾವುದನ್ನು ದೇವರ ನಿಯಮವೆನ್ನುತ್ತಾರೋ ಅದನ್ನು ಉಲಂಘಿಸಿದ್ದಾನೆ. ದೇಶಪ್ರೇಮ, ಅತಿಯಾದರೆ ಅದು ಹೇಗೆ ಮಾನವರೆಲ್ಲರ, ದೇವತೆಗಳೆಲ್ಲರ ವಿರುದ್ಧ ಹೋಗಬಹುದು ಎಂಬುದು ಇದರಿಂದ ಗೊತ್ತಾಗುತ್ತದೆ. ವ್ಯವಸ್ಥೆ ಮುಖ್ಯ, ಆದರೆ ತೆರುವ ಬೆಲೆ ವಿಪರೀತವಾಗಿದ್ದಾಗ ಅಲ್ಲ ; ಮನುಷ್ಯನ ಶಕ್ತಿಯು ಎಲ್ಲೆ ದಾಟಿದಾಗ ಅಲ್ಲ. ಕ್ರೆಯಾನನಆಜ್ಞೆಯನ್ನು ಉಲ್ಲಂಘಿಸುವ ಅಂತಿಗೊನೆಗೆ ಕೂಡ ಹಲವು ಬಗೆಯ ಪ್ರೇರಣೆಗಳಿವೆ. ಅವಳ ಮನಸ್ಸಿನಲ್ಲಿ ತನ್ನ ತಂದೆ ಮಾಡಿದ ಪಾಪ ಮತ್ತು ಆತನಿಗೆ ಅದಕ್ಕಾಗಿ ದೊರೆತ ಶಿಕ್ಷೆ ಮತ್ತು ಪಾಪದ ರಕ್ತ ತನ್ನಲ್ಲಿ ಮತ್ತು ಇಡೀ ವಂಶದಲ್ಲಿ ಹರಿಯುತ್ತಿರುವುದು ಭಾರವಾದ ನೆನಪಾಗಿ ಉಳಿದಿದೆ ; ತಂದೆಯ ಶಾಪದಿಂದಾಗಿ ಅಣ್ಣಂದಿರು ಸತ್ತ ಸಂಗತಿಯನ್ನು ಆಕೆ ಮರೆತಿಲ್ಲ ; ಜನರ ಕಣ್ಣಿನಲ್ಲಿ ಇಳ್ಳಾಗಿ, ಬದುಕಿನಲ್ಲಿ ಸುಖ ಕಾಣದೆ ಬೆಳೆದಿದ್ದಾಳೆ. ಈ ಎಲ್ಲ ಕಾರಣದಿಂದಾಗಿ ಜನರೆದುರು ಘನತೆಯುಳ್ಳ ಕೆಲಸವೊಂದನ್ನು ಮಾಡ ಬೇಕೆಂಬುದು ಅವಳು ಪಾಲಿನೈಕಸ್‌ನನ್ನು ಹೂಳುವುದರ ಸಾಮಾಜಿಕ ಮುಖವುಳ್ಳ ಪ್ರೇರಣೆ ; ಆತ್ಮಹತ್ಯೆ ಮಾಡಿಕೊಳ್ಳುವುದು ಅನಿವಾರ್ಯ ಸ್ಥಿತಿಯಾಗಿದ್ದಾಗ ಅದನ್ನು ಹುತಾತ್ಮ ಗುಣಕ್ಕೆ ತಿರುಗಿಸುವುದು ಅವಳ ಆತ್ಮವಿಡಂಬನೆ. ಅಷ್ಟು ಆರೋಗ್ಯಕರವಲ್ಲದ ಈ ಮಾನಸಿಕ ಹಿನ್ನೆಲೆಯೊಂದಿಗೆ ಕ್ರೆಯಾನನ ವ್ಯವಸ್ಥೆಯನ್ನು ಪ್ರಶ್ನಿಸುವ, ದೇವರ ನಿಯಮಕ್ಕೆ ಬದ್ಧಳಾಗಿರುವ ಬಹು ಸಮರ್ಥ, ಸುಸಂಗತ ಕಾರಣಗಳನ್ನು ಮುಂದೊಡ್ಡಿ ಹಠ ಮಾಡುತ್ತಾಳೆ. ಕ್ರೆಯಾನ್ ಕಾನೂನು, ದೇಶಪ್ರೇಮದ ಹೆಸರಲ್ಲಿ ತಪ್ಪು ಮಾಡುವಂತೆ ಈಕೆ ದೇವರ ನಿಯಮದ ಹೆಸರಲ್ಲಿ ಅಹಂಕಾರಿಯಾಗಿದ್ದಾಳೆ ; ಆತ್ಮಹತ್ಯೆಯ ಗೂಢ ಆಶೆಗೆ ಶಾಸನೋಲ್ಲಂಘನೆಯ ಬಂಡಾಯದ ರೂಪ ಕೊಡುತ್ತಾಳೆ. ಇಬ್ಬರದೂ ಒಂದು ಬಗೆಯಲ್ಲಿ ಇಹದ ವೈಭವದ ಅಪೇಕ್ಷೆಯೇ. ಇಲ್ಲಿ ಈ ಇಬ್ಬರ ದುರಂತವಿದೆ ; ಇಬ್ಬರೂ ತಪ್ಪು ಮಾಡುತ್ತಾರೆ ಮತ್ತು ತಮ್ಮ ಕೃತ್ಯದ ಹಿಂದಿನ ಪ್ರೇರಣೆಗಳನ್ನು ತಿಳಿದುಕೊಳ್ಳಲು ಅಸಮರ್ಥರಾಗಿದ್ದಾರೆ. ಈ ಇಬ್ಬರ ಮುಖಾಮುಖಿಯ ಮೂಲಕ ಸಾಫೋಕ್ಲಿಸ್ ಮುಖ್ಯ ಸಮಸ್ಯೆಯೊಂದನ್ನು ಪೃಥಕ್ಕರಿಸುತ್ತಾನೆ : ಮುಂದೆ ಶೇಕ್ಸ್‌ಪಿಯರ್ ತನ್ನ ಆಂಟೋನಿ ಮತ್ತು ಬ್ರೂಟಸ್ ಮೂಲಕ ಕೇಳಿದಂತೆ, ದೇಶ ಮತ್ತು ಸ್ವಂತ ಈ ಎರಡರಲ್ಲಿ ಒಂದನ್ನು ಆರಿಸಿಕೊಳ್ಳಬೇಕಾಗಿ ಬಂದರೆ ಮನುಷ್ಯ ಯಾವುದಕ್ಕೆ ಒಲಿಯ ಬೇಕು ? ದೇಶದ ವ್ಯವಸ್ಥೆ ಆರಿಸಿಕೊಂಡು ಕ್ರೆಯಾನ್ ದೇಶಕ್ಕೆ ವಿರುದ್ಧವಾದದ್ದು ಮಾಡಿದ್ದಾನೆ ; ಸ್ವಂತ ಅಣ್ಣನ ಬಗ್ಗೆ ಪ್ರೇಮ ಮತ್ತು ಅಮೂರ್ತ ದೇವರಾಣತಿ ಆರಿಸಿಕೊಂಡ ಅಂತಿಗೊನೆ ತನ್ನ ಅಹಂಕಾರದಿಂದಾಗಿ ಸಾವನ್ನಪ್ಪುತ್ತಾಳೆ. ದೇವರ ನಿಯಮದತ್ತ ಕಾಳಜಿಯುಳ್ಳ ವೈಯಕ್ತಿಕ ಪ್ರೇಮ ಮುಖ್ಯವೆಂದು ಸಾಫೋಕ್ಲಿಸ್ ಹೇಳುವಂತೆ

ತೋರುತ್ತದೆ : ಇದನ್ನು ಕ್ರಿಯಾನನ ಸದ್ಯದೃಷ್ಟಿಯಾಗಲಿ, ಅಂತಿಗೊನೆಯು ಹಟವಾರಿತನವಾಗಲಿ ಇಲ್ಲದ ಹಯ್‌ಮೋನನ ಮೂಲಕ ಕವಿ ಹೇಳಿದ್ದಾನೆ. ಮೇಲುನೋಟಕ್ಕೆ ಬಹಳ ಜಾಣನಾದ ಮುತ್ಸದ್ದಿಯಂತೆ ಕಾಣುವ ಈತ ನಿಜಕ್ಕೂ ಋಜುತ್ವ ಉಳ್ಳ ಆರೋಗ್ಯವಂತ ; ತನ್ನ ತಂದೆ ಕ್ರಿಯಾನ್ ಮತ್ತು ಪ್ರೇಯಸಿ ಅಂತಿಗೊನೆ ಇಬ್ಬರ ದೋಷದಿಂದಲೂ ಮುಕ್ತನಾದವನು. ಈತ ಕ್ರಿಯಾನನೆದುರು ಧೈರ್ಯದಿಂದ ಮಾತಾಡಿ ಅವನ ಕ್ರಮಗಳನ್ನು ಅಲ್ಲಗಳೆಯುತ್ತಾನೆ ; ಅವನಿಗೊಬ್ಬನಿಗೇ ದೇಶದ ಪ್ರಜೆಗಳ ಮನಸ್ಸು ತೆರೆದುಕೊಳ್ಳುವುದು ; ಅವನಿಗೊಬ್ಬನಿಗೇ ಮನುಷ್ಯನ ಅರಿವಿನ ಶಕ್ತಿಯ ಮಿತಿ ಗೊತ್ತಿರುವುದು. ಅವನು ತಂದೆ ತನ್ನ ಮಾತಿಗೆ ಕಿವಿಗೊಡದಿದ್ದಾಗ ತಂದೆಯ ಭ್ರಷ್ಟ ವ್ಯವಸ್ಥೆಗಿಂತ ಪ್ರೇಯಸಿ ಅಂತಿಗೊನೆಯೊಂದಿಗೆ ಸಾಯುವುದು ಉತ್ತಮವೆಂದು ನಿರ್ಧರಿಸುತ್ತಾನೆ. ಅಂತಿಗೊನೆಯ ಮೌಲ್ಯಗಳನ್ನು ಆತ ಒಪ್ಪಿದರೂ ಅದಕ್ಕಿಂತ ಮುಖ್ಯವಾಗಿ ಅವಳ ಬಗೆಗಿನ ಪ್ರೇಮಕ್ಕಾಗಿ ಆತ ಸತ್ತಂತೆ ನಮಗೆನ್ನಿಸುತ್ತದೆ. ಯಾಕೆಂದರೆ ಅಂತಿಗೊನೆಯ ಮೌಲ್ಯಗಳು ಅವಳ ಸಾಕ್ಷಿಪ್ರಜ್ಞೆಯ ಬಣ್ಣದೊಂದಿಗೆ ಮಿಳಿತವಾಗಿವೆ. ಸಾಕ್ಷಿಪ್ರಜ್ಞೆ ಕೂಡ ಒಂದು ರೀತಿಯಲ್ಲಿ ಪರಿಸರದ ಫಲ ; ಯಾವುದು ಸರಿ, ಯಾವುದು ತಪ್ಪು ಯಾವುದು ಮುಖ್ಯ ಯಾವುದು ಅಮುಖ್ಯ ಎಂಬುದನ್ನು ವ್ಯಕ್ತಿ ಕೇಳಿಕೊಳ್ಳುವಂತೆ, ಆತ ಸಾರ್ವತ್ರಿಕವಾದದ್ದನ್ನು ಸಂದೇಹಿಸಿ ನೋಡುವಂತೆ ಈ ಪ್ರಜ್ಞೆ ಮಾಡುತ್ತದೆ. ಈ ಸಂದೇಹ ಹಟಕ್ಕೆ ತಿರುಗಿದಾಗ ವ್ಯಕ್ತಿಯ ಅಡಿ ತಪ್ಪುತ್ತದೆ ; ಸಾಕ್ಷಿಪ್ರಜ್ಞೆಯ ಹೆಸರಿನಲ್ಲಿ ತಪ್ಪು ಆರಂಭವಾಗುತ್ತದೆ. ಅಂತಿಗೊನೆಯ ಸಾಕ್ಷಿಪ್ರಜ್ಞೆ ಈ ಬಗೆಯದು. ಆದರೆ ಹಯ್‌ಮೋನ್ ಬಗೆ ಬೇರೆ. ಎಲ್ಲವನ್ನೂ ತರ್ಕಬದ್ಧವಾಗಿ ಸಂಯಮದಿಂದ ಯೋಚಿಸಿ ಜಗತ್ತಿನ ತುಡಿತ ಮತ್ತು ಪರಮಾತ್ಮನ ನಿಯಮಕ್ಕೆ ವ್ಯಕ್ತಿಯ ಇಷ್ಟವನ್ನು ಹೊಂದಿಸಿಕೊಂಡು ಆತ್ಮತ್ಯಾಗಕ್ಕೆ ಸಿದ್ಧನಾಗುವ ಹಯ್‌ಮೋನನ ಸಾಕ್ಷಿಪ್ರಜ್ಞೆ ಸಾಫೋಕ್ಲಿಸ್ ಒಪ್ಪುವಂಥದು. ಆದರೆ ಸಾಕ್ಷಿಪ್ರಜ್ಞೆಯ ಪರಿಶುದ್ಧತೆ ಕೂಡ, ಒಂದು ಪರಿಸರದ ಪಾಪದಿಂದಾಗಿ, ವ್ಯಕ್ತಿಗೆ ನೆರವಾಗುವುದಿಲ್ಲ. ಇಲ್ಲಿ ಮನುಷ್ಯನ ಮಿತಿಯ ಸ್ಪಷ್ಟೀಕರಣವಿದೆ. ಈಡಿಪಸ್ ದುರಂತಕ್ಕೆ ಮನಕರಗುವಂತೆ ಈ ಹಯ್‌ಮೋನನ ಬಲಿಗೆ ಪ್ರೇಕ್ಷಕರ ಮನಸ್ಸು ಒಲಿಯುತ್ತದೆ ; ಇವನ ತ್ಯಾಗದಿಂದಾಗಿ ಅಂತಿಗೊನೆಯ ಸಾವಿಗೆ ಕೂಡ ಒಂದು ಬಗೆಯಲ್ಲಿ ಅರ್ಥ ಬರುತ್ತದೆ : ಅವಳ ಎಲ್ಲ ಘೋಷಿತ ಉತ್ತಮಿಕೆಯ ಹಿಂದೆ ಪ್ರೀತಿಗೆ ಯೋಗ್ಯವಾದ ವ್ಯಕ್ತಿತ್ವವಿರುವುದು ತಿಳಿಯುತ್ತದೆ. ಹಯ್‌ಮೋನ್ ಈ ಕೃತಿಯ ತೀವ್ರಗಾಮಿಗಳ ನಡುವಿನ 'norm'. ಇವನ ಮೂಲಕ ಪ್ರೇಮದ ಅಸಾಮಾನ್ಯ ಶಕ್ತಿಯ ಪರಿವೆ ನಮಗೆ ದೊರಕುತ್ತದೆ.

ನಮಗೆ ಇವತ್ತಿಗೂ 'ಅಂತಿಗೊನೆ' ತೀರಾ ಹತ್ತಿರದ ಕೃತಿಯಾಗಿ ಕಾಣಲು ಕಾರಣ ಇದೆ. ಸಾಫೋಕ್ಲಿಸ್ ದ್ವಂದ್ವಗಳನ್ನೂ ತೂಗಿಸಿ ನಾಟಕ ಕಟ್ಟುವುದರಲ್ಲಿ ಅಸಾಮಾನ್ಯ

ಸಾಮರ್ಥ್ಯ ತೋರಿದ್ದಾನೆ : ವ್ಯಕ್ತಿ ವ್ಯಕ್ತಿಯ ನಡುವಿನ ವೈಷಮ್ಯವನ್ನೂ ಮಾತ್ರವಲ್ಲ, ಒಬ್ಬನೇ ವ್ಯಕ್ತಿಯೊಳಗಣ ವೈಷಮ್ಯಗಳನ್ನು ತೂಗಿ ನಾಟಕವಾಗಿ ಪಡೆದಿದ್ದಾನೆ. ನಾವು ಕ್ರೆಯಾನನ ಕಡೆಗಾಗಲಿ ಅಂತಿಗೊನೆಯ ಕಡೆಗಾಗಲೀ ಸಲೀಸಾಗಿ ಒಲಿಯಲು ನಾಟಕಕಾರ ಬಿಟ್ಟಿಲ್ಲ; ಉದ್ದಕ್ಕೂ ತನ್ನ ಭೌತಿಕ ಹಾಜರಿಯಿಂದ ಮುಖ್ಯವಾಗಿ ಕಾಣುವ ಕ್ರೆಯಾನ್ ಉದ್ದಕ್ಕೂ ತನ್ನ ತಳಮಳದಿಂದಾಗಿ ನಮ್ಮ ಮನಸ್ಸಿನಲ್ಲಿ ಸ್ಥಾಪಿತವಾಗುವ ಅಂತಿಗೊನೆಗೆ ನಾಯಕತ್ವದ ಸ್ಥಾನ ಬಿಟ್ಟುಕೊಡುತ್ತಾನೆ. ನಾಗರಿಕತೆ ನಡೆದು ಬಂದ ಬಗೆಯನ್ನೇ ಸೂಚಿಸುವ ಪರಂಪರೆ, ಆಧುನಿಕತೆಯ ಘರ್ಷಣೆ ಈ ಕೃತಿಯಲ್ಲಿದೆ ; ಭೌತಿಕವಾದದ್ದ ರೊಂದಿಗೆ ಅಧ್ಯಾತ್ಮಿಕ ಅಂಶ ಹೆಣೆದುಕೊಂಡಿದೆ ; ನಾವು ಅರಿತು ಮಾಡುವುದರೊಂದಿಗೆ ಅರಿಯದ ಪ್ರೇರಣೆ ಘರ್ಷಿಸಿ ನಾಟಕ ಕಟ್ಟಿಕೊಳ್ಳುತ್ತದೆ. ಸಾಫೋಕ್ಲಿಸ್ ಇಲ್ಲಿ ಸರಳ ಗೊಳಿಸಿ ಹೇಳಲಾರ—ಅವನ ಪ್ರಕಾರ ಮಾನವನ ಜ್ಞಾನವೆಂದರೆ ಅರ್ಥ ನಮ್ಮ ಅರಿವಿಗೆ ನಿಲುಕುವಂಥ, ನಿಲುಕದಂಥ ಎಲ್ಲದನ್ನೂ ತಿಳಿಯುವ ಪ್ರಯತ್ನ. ಈ ಜ್ಞಾನ ಮಾತ್ರ ಅವನಿಗೆ ನೆಮ್ಮದಿ ತರಬಲ್ಲದು. ಈಡಿಪಸ್ ನಾಟಕದಲ್ಲಿ ಈ ಜ್ಞಾನದಾಹ ಈಡಿಪಸ್‌ನ ಶೋಧನೆಯೊಂದಿಗೆ ಪ್ರೇಕ್ಷಕ ಒಂದಾಗುವುದರಲ್ಲಿ ಹಿಂಗುತ್ತದೆ, ಮನುಷ್ಯನ ಮಿತಿ ಮತ್ತು ವೈಭವಕ್ಕೆ ಪ್ರೇಕ್ಷಕನ ಮನಸ್ಸು ಹಿಗ್ಗುತ್ತದೆ. ಅಂತಿಗೊನೆಯಲ್ಲಿ ಯಾವ ಮುಖ್ಯ ಪಾತ್ರವೂ ಈ ಪರಿವೆಗೆ ವಾರಸುದಾರನಾಗುವುದಿಲ್ಲ; ಇದು ಒಟ್ಟು ನಾಟಕರೂಪು ಪ್ರೇಕ್ಷಕನಲ್ಲಿ ಉಂಟುಮಾಡುವ ಅನುರಣನದಿಂದ ಸಾಧ್ಯವಾಗಬೇಕು ; ಇದರಿಂದ ಅವನ ಭಾವನೆಗಳ ಶುದ್ಧೀಕರಣ ಆಗಬೇಕು. ಹಾಗೆ ಮಾಡುವುದು 'ಅಂತಿಗೊನೆ'ಯ ವೈಶಿಷ್ಟ ಗಳಲ್ಲಿ ಒಂದು.

೩

ಇನ್ನು ನನ್ನ ಅನುವಾದದ ಬಗ್ಗೆ ಎರಡು ಮಾತು ಹೇಳಬೇಕು.

ಈ ಎರಡು ನಾಟಕಗಳನ್ನು ಪ್ರದರ್ಶಿಸುವುದಕ್ಕಾಗಿ ನಾನು ಅನುವಾದ ಮಾಡಿದೆ. ನಾಟಕ ನೋಡುವಾಗ ನಾಟಕದ ಧರ್ಮ ಮುಖ್ಯವಾಗುತ್ತದೆ ; ನಾಟಕದ ವಿವರಗಳು ಕೂಡ ಒಟ್ಟಾರೆಯ ಲಯಕ್ಕೆ ಹೊಂದಿಕೊಂಡು ಸಮರ್ಪಕವಾಗಿದ್ದರೆ ಸಾಕೆನ್ನಿಸುತ್ತದೆ. ಆದರೆ ನಾಟಕ ಓದುವಾಗ ನಾವು ಮೂಲದೊಂದಿಗೆ ಹೋಲಿಸುವ ಕೆಲಸ ಆರಂಭವಾಗುತ್ತದೆ. ಹೀಗೆ ಹೋಲಿಸುವ ನನ್ನ ಓದುಗರು ಅಲ್ಲಲ್ಲಿ ತಪ್ಪು ಕಾಣಲು ಸಾಧ್ಯವಿದೆ —ಮೂಲದ ವಾಕ್ಯರಚನೆ ಹೀಗಿರಲಿಲ್ಲ, ಮೂಲದ ರೂಪಕ ಈ ಗುಣದ್ದಲ್ಲ, ಎನ್ನಲು ಅವಕಾಶವಿದೆ. ಆದರೆ ಈ ಎರಡಕ್ಕಿಂತ ಮೂಲದ ಉದ್ದೇಶ ಸಂದರ್ಭ ಮತ್ತು ಲಯ ಮುಖ್ಯವೆಂದಿಟ್ಟುಕೊಂಡು ನಾನು ಕನ್ನಡಿಸಿದ್ದೇನೆ. ಸ್ನೇಹಿತರೊಬ್ಬರು

'ದೊರೆ ಈಡಿಪಸ್'ನ 'ಲಪಟಾಯಿಸಲು ಯತ್ನಿಸಿದೆ' ಮಾತಿಗೆ ಬದಲು ಕೊಂಚ ಗಂಭೀರ ಮಾತು ಬಳಸಬೇಕಿತ್ತು ಎಂದರು; ಆದರೆ ಗಿರೀಶ್ ಮತ್ತು ನನಗೆನ್ನಿಸಿದಂತೆ ಆ ಸಂದರ್ಭಕ್ಕೆ ತಕ್ಕ ಶಕ್ತಿ ಮತ್ತು projection ಉಳ್ಳ ಪದ ಅದು. ಇಂಥವೇ ನಾಲ್ಕಾರು ಮಾತು ಅಲ್ಲಲ್ಲಿ ಬರಬಹುದಾದ್ದರಿಂದ ಈ ಉದಾಹರಣೆ ಕೊಟ್ಟಿದ್ದೇನೆ. ಇಲ್ಲಿ ಪೂರ್ತಿಯಾಗಿ ವ್ಯಂಕ್ತ ಛಂದಸ್ಸಿನ ಸಾಮರ್ಥ್ಯವನ್ನು ನಂಬಿರುವ ನಾನು ಗ್ರೀಕ್ ಮೂಲದ ಕೆಲವು ಮಾತುಗಳನ್ನು ವಿವರಣಾತ್ಮಕ ಕನ್ನಡದಲ್ಲಿ ಹೇಳಿ ಒಟ್ಟಾರೆ ನಡಿಗೆಗೆ ಹೊಂದಿಸಿದ್ದೇನೆ. ಈಡಿಪಸ್ ಆರಂಭದಲ್ಲೇ ಹೇಳುವ 'ಆಲಿವ್' ಪದ ಪ್ರೇಕ್ಷಕರ ಕಿವಿಗೆ ಕಿರಿಕಿರಿ ಉಂಟುಮಾಡೀತೆಂದು 'ಜೀವವೃಕ್ಷ' ಎಂದು ಬರೆದಿದ್ದೇನೆ; ಥೀಬ್ಸ್ ಜನರ ಆರ್ಥಿಕ, ಧಾರ್ಮಿಕ ಬದುಕಿನಲ್ಲಿ ಮುಖ್ಯವಾಗಿದ್ದ ಈ ಮರಕ್ಕೆ ಜೀವವೃಕ್ಷ ಎಂಬ ಅರ್ಥವೂ ಇದೆ. ಸಾಮಾನ್ಯವಾಗಿ ಹಾಡುವುದಕ್ಕಿಂತ ಹೇಳುವುದಕ್ಕಾಗಿ ನಾನು ಅನುವಾದಿಸಿರುವ ಮೇಳಗೀತಗಳಲ್ಲಿ ಮೂಲದ ಹೆಸರುಗಳು ಲಯವನ್ನು ಕೆಡಿಸುವಂತೆ ಕಂಡರೂ ಒತ್ತನ್ನು ಸರಿಯಾಗಿ ಹಾಕಿದರೆ ಅಷ್ಟು ತೊಂದರೆಯಾಗುವುದಿಲ್ಲ. ಮತ್ತೊಂದು ಮಾತು, ಪಾತ್ರಗಳು ಆಡುವ ಮಾತುಗಳಿಗಿಂತ ಮೇಳಗಳು ಹೇಳುವ ಹಾಡುಗಳು ಅನುವಾದಕ್ಕೆ ಕಷ್ಟ. ನಮ್ಮಲ್ಲಿ ಸಿಕ್ಕುವ ಛಂದೋ ರೂಪಗಳಲ್ಲಿ ಕೆಲವನ್ನು ಬಳಸಿಕೊಂಡು, ಅನೇಕಸಲ ಮೂಲದಿಂದ ಕೊಂಚ ದೂರಸರಿದು ಈ ಹಾಡುಗಳನ್ನು ಕನ್ನಡಿಸಿದ್ದೇನೆ. ಇವುಗಳ ನಡಿಗೆಯಲ್ಲಿ ಕಾಣುವ ವೈವಿಧ್ಯ ಕೂಡ ನನ್ನ ನಾಟಕ ಪ್ರಜ್ಞೆಯನ್ನು ಅವಲಂಬಿಸಿದೆಯಲ್ಲದೆ, ಗ್ರೀಕ್ ಮೂಲದಲ್ಲಿರಬಹುದಾದ ವೈವಿಧ್ಯವನ್ನಲ್ಲ. ಒಂದೇ ಗತಿಯಲ್ಲಿ ಪದ್ಯಸಾಗಿದರೆ ಕೇಳುವವರ ಕಿವಿಯ ಚುರುಕು ಕಡಿಮೆಯಾಗುತ್ತದೆಂದು ಬೇರೆಬೇರೆ ಓಟದ ರೂಪಗಳನ್ನು ಬಳಸಿದ್ದೇನೆ. ಆ ಮೇಳಗೀತೆಗಳ ಮುಖ್ಯೋದ್ದೇಶಕ್ಕೆ ಚ್ಯುತಿ ಬಂದಿರಲಾರದೆಂದು ನನಗೆನ್ನಿಸಿದೆ.

ಗ್ರೀಕ್ ಗೊತ್ತಿಲ್ಲದ ನಾನು ಕೆಲವು ಇಂಗ್ಲಿಷ್ ಭಾಷಾಂತರಗಳನ್ನು ಬಳಸಿ ಈ ರೂಪಗಳನ್ನು ಸಿದ್ಧಪಡಿಸಿದ್ದೇನೆ. ಸಾಫೋಕ್ಲಿಸ್ ಶೈಲಿಯ ಸೂಕ್ಷ್ಮತೆಯನ್ನು ನಿರ್ಲಕ್ಷಿಸಿದವರು, ತೀರಾ ಸೂಕ್ಷ್ಮವಾಗಿ ಅನುವಾದಿಸಲೆತ್ನಿಸಿ ನಾಟಕತ್ವ ನಿರ್ಲಕ್ಷಿಸಿದವರು, ಗದ್ಯದಲ್ಲಿ ಅನುವಾದಿಸಲು ಹೋಗಿ ಕೆಟ್ಟ ಗದ್ಯದಲ್ಲಿ ಎಲ್ಲವನ್ನೂ ಹೇಳಲೆತ್ನಿಸಿದವರು, ತೀರಾ ನಿರರ್ಗಳವಾಗಿ ಹೇಳಿ ಭಾವಗೀತಾತ್ಮಕತೆ ಮುಟ್ಟಿದವರು—ಹೀಗೆ ಭಾಷಾಂತರಗಳ ಹಲವಾರು ತಪ್ಪುಗಳಿಗೆ ಸಾಫೋಕ್ಲಿಸ್ ಗುರಿಯಾಗಿದ್ದಾನೆ. ನಾನು ಮುಖ್ಯವಾಗಿ-ಫೇಬರ್ ಪ್ರಕಾಶನದ ಡಡ್ಲಿ ಫಿಟ್ಸ್ ಮತ್ತು ರಾಬರ್ಟ್ ಫಿಟ್ಜರಲ್ಡ್ ಮಾಡಿದ್ದು, ಮಾಡರ್ನ್ ಲೈಬ್ರರಿಯವರ ಆರ್. ಸಿ. ಜೆಬ್ ಅವರ ಗದ್ಯಾನುವಾದ, ಪೆಂಗ್ವಿನ್‌ನವರು ಪ್ರಕಟಿಸಿರುವ ಇ. ಎಫ್. ವ್ಯಾಟ್ಲಿಂಗ್ ಅವರ ಅನುವಾದ, ಮೆಂಟಾರ್ ಬುಕ್ಸ್ ಪ್ರಕಾಶನದ ಜೆ. ಟಿ. ಶೆಪರ್ಡ್ ಮತ್ತು ಮೆಂಟಾರ್ ಕ್ಲಾಸಿಕ್ಸ್‌ನಲ್ಲಿ ಪ್ರಕಟವಾದ ಪಾಲ್ ರಾಶ್ ಅವರ ಅನುವಾದ—ಇಷ್ಟನ್ನು ನೋಡಿ ಪಾತ್ರ, ಸಂದರ್ಭಗಳ ತುಡಿತ ಗೊತ್ತುಹಚ್ಚಲು ಯತ್ನಿಸಿದ್ದೇನೆ;

ಶ್ರೀ ಕ. ವೆಂ. ರಾಘವಾಚಾರ್ಯ ಅವರು ಮಾಡಿರುವ ಅನುವಾದಗಳು ನನಗೆ ಅಲ್ಲಲ್ಲಿ ನೆರವಾಗಿವೆ.

ಒಂದು ಸಂದರ್ಭದಲ್ಲಿ ಮಾತ್ರ ನಾನು ತೆಗೆದುಕೊಂಡ ಸ್ವಾತಂತ್ರ್ಯ ಒಪ್ಪಿಕೊಳ್ಳಬೇಕು. 'ಅಂತಿಗೊನೆ' ಯ 31 ನೇ ಪುಟದಲ್ಲಿ ಪ್ರೇಮವನ್ನು ಕುರಿತ ಮೇಳಗೀತೆ ಆದಮೇಲೆ ಅಂತಿಗೊನೆ ಪ್ರವೇಶಿಸಿ ಮೇಳದೊಂದಿಗೆ ಲಯಬದ್ಧ ಕಾವ್ಯಶೈಲಿಯಲ್ಲಿ ಮಾತಾಡುತ್ತಾಳೆ—ಕ್ರೆಯಾನ್ ಪ್ರವೇಶದವರೆಗೆ. ನಾನು ಅವಳ, ಮೇಳದ ಬಳಕೆಗಾಗಿ ರಚಿಸಿದ ಪದ್ಯಗಳು ಸರಿಯಾಗಿ ಕಾಣಲಿಲ್ಲ—ಕೇಳಲಿಲ್ಲ—ಎಂದು ಮುಕ್ತ ಕಾವ್ಯಶೈಲಿಯಲ್ಲಿ ಮಾತಾಡಿಸಿದ್ದೇನೆ; "ಮಗನ ಶವ ಹೊತ್ತು ಕ್ರೆಯಾನ್ ಪ್ರವೇಶಿಸಿ" (46 ನೇ ಪುಟದಲ್ಲಿ) ಕ್ರೆಯಾನ್, ಮೇಳ ಮತ್ತು ದೂತ ಕಾವ್ಯ ಶೈಲಿಯಲ್ಲಿ ಮಾತಾಡುತ್ತಾರೆ—ಹಾಗೇ ಅನುವಾದಿಸಲು ಯತ್ನಿಸಿದ್ದೇನೆ. ಈ 'ಅಂತಿಗೊನೆ' ಈಗತಾನೇ ಸಿದ್ಧವಾಗಿ ರಂಗದ ಪರೀಕ್ಷೆಗೆ ಒಳಪಟ್ಟಿಲ್ಲವಾದ್ದರಿಂದ ಇದರಲ್ಲಿ ಯಾವುದು ಸಮರ್ಥನೀಯ ಎಂದು ನಿರ್ಧರಿಸುವುದು ನನಗೆ ಕಷ್ಟವಾಗಿದೆ.

ಗ್ರೀಕ್ ನಾಟಕದ ಮಟ್ಟಿಗಂತೂ ಕರಾರುವಾಕ್ಕಾಗಿ ಮೂಲದ ಅರ್ಥಕ್ಕೆ ಮಾತ್ರ ಪ್ರಾಮಾಣಿಕವಾಗಿರಬಲ್ಲ ಅನುವಾದ ಅನುವಾದವೇ ಅಲ್ಲ. ಯಾಕೆಂದರೆ ಈ ನಾಟಕದ ಲಯ, ರೂಪವೇ ಅದರ ಸ್ವಾರಸ್ಯ ಮತ್ತು ಅರ್ಥವಂತಿಕೆ ಎರಡೂ ಆಗಿರುತ್ತವೆ. ಅವನ್ನು ಹಿಡಿಯಬಲ್ಲವ ಮಾತ್ರ ಗ್ರೀಕ್ ನಾಟಕದ ಹೇಳಿಕೆಗೆ ಕಿವಿಗೊಟ್ಟಿದ್ದಾನೆ—ಮತ್ತು ಕೇಳುವಂತೆ ಮಾಡುತ್ತಾನೆ. ನನ್ನ ಈ ಪ್ರಯತ್ನ ಎಷ್ಟು ಸಫಲವೋ ನೋಡಿದವರು ಹೇಳಬೇಕು.

೪

ಈ ನಾಟಕಗಳು ನನ್ನ ಮೂಲಕ ಕನ್ನಡಕ್ಕಿಳಿಯಲು ಅನೇಕರು ನೆರವಾಗಿದ್ದಾರೆ. 'ದೊರೆ ಈಡಿಪಸ್' ನಾಟಕದ ರಿಹರ್ಸಲ್ ಸಮಯದಲ್ಲಿ ಕಂಡುಬಂದ ಕಷ್ಟಗಳನ್ನು ನನ್ನೊಂದಿಗೆ ಚರ್ಚಿಸಿ ಹಲವು ಭಾಗಗಳು ಹದಗೊಳ್ಳಲು ನೆರವಾದ ಗೆಳೆಯ ಗಿರೀಶ್ ಕಾರ್ನಾಡರಿಗೂ, ಪ್ರದರ್ಶಿಸಿದ ಬಿ. ವಿ. ಕಾರಂತರಿಗೂ, ನನ್ನೆಲ್ಲ ಕೃತಿಗಳನ್ನು ಆಸಕ್ತಿಯಿಂದ ನೋಡಿ ಚರ್ಚಿಸುವಂತೆಯೇ ಇವುಗಳನ್ನೂ ನೋಡಿ ಹಲವು ವಿಧದಲ್ಲಿ ನೆರವಾದ ಗೆಳೆಯರಾದ ಕೆ. ಮರುಳಸಿದ್ದಪ್ಪ, ಚಂದ್ರಶೇಖರ ಕಂಬಾರ, ಎಸ್. ಆರ್. ರಾಮಸ್ವಾಮಿ, ಕಿ. ರಂ. ನಾಗರಾಜ, ಎ. ಎನ್. ಪ್ರಸನ್ನ, ಲಕ್ಷ್ಮೀಶ ಇವರಿಗೂ ನಮ್ಮೆಲ್ಲ ಭಿನ್ನಾಭಿ

ಪ್ರಾಯ ಮರೆತು ಕೃತಿಯೆದುರು ಅತ್ಯುತ್ಸಾಹಗೊಂಡು ನನ್ನನ್ನು ಒಪ್ಪಿಕೊಳ್ಳುವ ನನ್ನ ವಿದ್ಯಾಗುರು ಜಿ. ಎಸ್. ಶಿವರುದ್ರಪ್ಪನವರಿಗೂ ನಾನು ಇಲ್ಲಿ ಕೃತಜ್ಞತೆ ಸೂಚಿಸುತ್ತೇನೆ.

ಪಿ. ಲಂಕೇಶ್

ಥೀಬ್ಸ್ ಪುರಾಣಕಥೆ

ಥೀಬ್ಸ್ ನಗರವನ್ನು ಡೆಲ್ಫಿಯ ದೇವವಾಣಿಯ ಆದೇಶದ ಪ್ರಕಾರ ಸ್ಥಾಪಿಸಿದವನು ಕ್ಯಾಡ್‌ಮಸ್.

ಕ್ಯಾಡ್‌ಮಸನ ಮಗ ಪಾಲಿಡೋರಸ್ ; ಪಾಲಿಡೋರಸ್ ಮಗ ಲ್ಯಾಬ್ಡಾಕಸ್ ; ಲ್ಯಾಬ್ಡಾಕಸ್‌ನ ಮಗ ಲಾಯಿಸ್.

ಲಾಯಿಸ್‌ನ ಹೆಂಡತಿ ಯೊಕಾಸ್ಟಾ. ಅವರಿಗೆ ಮಕ್ಕಳಿರಲಿಲ್ಲವಾಗಿ ಡೆಲ್ಫಿಯ ದೇವವಾಣಿಯನ್ನು ಕೇಳಲಾಯಿತು ; ಲಾಯಿಸ್‌ಗೆ ಆಗುವ ಮಗು ತನ್ನ ತಂದೆಯನ್ನು ಕೊಂದು ತಾಯಿಯನ್ನು ಮದುವೆಯಾಗುವುದಾಗಿ ದೇವವಾಣಿ ಹೇಳಿತು. ಕೆಲಕಾಲದಲ್ಲಿ ಅವರಿಗೆ ಗಂಡುಮಗುವಾಯಿತು. ಭವಿಷ್ಯವಾಣಿಯನ್ನು ಸುಳ್ಳಾಗಿಸಲು ಯೋಚಿಸಿದರು ; ಆ ಮಗುವನ್ನು ಅರಮನೆಯ ಸೇವಕನೊಬ್ಬನಿಗೆ ಕೊಟ್ಟು ನಾಶಪಡಿಸಲು ಹೇಳಿದರು. ಸೇವಕ ಅದನ್ನು ಕೊಂಡೊಯ್ದು ಅಡಿಗಳಿಗೆ ಸೂಜಿ ಚುಚ್ಚಿ ತೆವಳಲು ಕೂಡ ಆಗದಂತೆ ಮಾಡಿದ ; ಆದರೆ ಕರುಣೆಗೊಂಡು ಕಾರಿಂಥ್‌ನ ಕುರುಬನೊಬ್ಬನಿಗೆ ಅದನ್ನು ಕೊಟ್ಟು ಸಾಕಲು ಹೇಳಿ ಹಿಂದಿರುಗಿದ. ಕಾಲು ಚುಚ್ಚಿಸಿಕೊಂಡ ಮಗುವೇ ಈಡಿಪಸ್.

ಮಗುವನ್ನು ತೆಗೆದುಕೊಂಡ ಕಾರಿಂಥ್‌ನ ಕುರುಬ ಅದನ್ನು ಕಾರಿಂಥ್‌ನ ದೊರೆ ಪಾಲಿಬಸ್‌ಗೆ ಕೊಟ್ಟ. ಪಾಲಿಬಸ್‌ಗೆ ಮಕ್ಕಳಿರಲಿಲ್ಲ ; ಈಡಿಪಸ್‌ನನ್ನು ಪ್ರೀತಿಯಿಂದ ಸಾಕಿ ದೊಡ್ಡವನನ್ನಾಗಿ ಮಾಡಿದ. ಆದರೆ ಹಬ್ಬವೊಂದರ ಸಮಯದಲ್ಲಿ, ಕುಡುಕನೊಬ್ಬನ ಬಾಯಿಂದ, ಈಡಿಪಸ್‌ಗೆ ತನ್ನನ್ನು ಕುರಿತ ಭವಿಷ್ಯವಾಣಿ ಗೊತ್ತಾಯಿತು. ಪಿತೃಹತ್ಯೆಯ ಪಾಪಕ್ಕೆ ಹೆದರಿ ಈಡಿಪಸ್, ಪಾಲಿಬಸ್‌ನಿಂದ ದೂರಕ್ಕೆ ಓಡಿದ. ಹಲವಾರೆಡೆ ಸಂಚರಿಸಿ ಥೀಬ್ಸ್‌ಗೆ ಬರುತ್ತಿದ್ದಾಗ ಮೂರು ಹೆದ್ದಾರಿಗಳು ಸಂಧಿಸುವ ಒಂದು ಕಡೆ ಜಗಳವೊಂದರಲ್ಲಿ ದೊರೆ ಲಾಯಿಸ್‌ನನ್ನು—ಹಾಗೆಂದು ಗೊತ್ತಿಲ್ಲದೆ—ಕೊಂದುಹಾಕಿದ. ಥೀಬ್ಸ್‌ಗೆ ಬಂದ ; ಇಡೀ ಥೀಬ್ಸ್ ನಗರ ಹಾಹಾಕಾರಗೊಂಡಿತ್ತು. ದೊರೆ ಸತ್ತಿದ್ದ, ಸ್ಫಿಂಕ್ಸ್ ಮಾರಿ ಒಗಟುಗಳನ್ನು ಹೇಳುತ್ತ ಅವನ್ನು ಬಿಡಿಸಲಾರದ ಜನರನ್ನು ಕೊಲ್ಲುತ್ತಿದ್ದಳು. ಈಡಿಪಸ್ ಈ ಒಗಟುಗಳನ್ನು ಬಿಡಿಸಿ ಥೀಬ್ಸ್ ನಗರವನ್ನು ಸ್ಫಿಂಕ್ಸ್‌ನಿಂದ ಮುಕ್ತಗೊಳಿಸಿದ ; ಥೀಬ್ಸ್‌ನ ದೊರೆಯಾದ ; ಲಾಯಿಸ್ ಹೆಂಡತಿ ಯೊಕಾಸ್ಟಾಳನ್ನು ಮದುವೆಯಾದ. ಹೀಗೆ ಭವಿಷ್ಯವಾಣಿ ನಿಜವಾಯಿತು.

ಈಡಿಪಸ್ ಭವಿಷ್ಯವಾಣಿ ನಿಜವಾದದ್ದನ್ನು ಕಂಡುಕೊಳ್ಳುವುದು, ಅದಕ್ಕಾಗಿ ಪ್ರಾಯಶ್ಚಿತ್ತವಾಗಿ ತನ್ನ ಕಣ್ಣುಗಳನ್ನು ಕಳೆದುಕೊಂಡು ದೇಶೋಚ್ಚಾಟನೆಗೆ ಕೇಳಿಕೊಳ್ಳುವುದು 'ದೊರೆ ಈಡಿಪಸ್' ನಾಟಕದ ವಸ್ತು. ಈ ನಾಟಕ ಮುಗಿಯುವಷ್ಟರಲ್ಲಿ ಯೊಕಾಸ್ಟಾ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ; ಈಡಿಪಸ್‌ನ ಸಿಂಹಾಸನವನ್ನು ಅವನ ಮೈದುನ ಕ್ರೆಯಾನ್ ಪಡೆದಿದ್ದಾನೆ; ಈಡಿಪಸ್ ತನ್ನ ಇಬ್ಬರು ಹೆಣ್ಣುಮಕ್ಕಳನ್ನು (ಇಸ್ಮೇನೆ ಅಂತಿಗೊನೆ) ಮತ್ತು ಇಬ್ಬರು ಗಂಡುಮಕ್ಕಳನ್ನು (ಎತೆಯೊಕ್ಲೆಸ್ ಮತ್ತು ಪಾಲಿನೈಕಸ್) ಬಿಟ್ಟು ದೇಶಾಂತರ ಹೋಗಲು ಸಿದ್ಧವಿದ್ದಾನೆ.

ಆದರೆ ಈಗ ದೊರೆಯಾಗಿರುವ ಕ್ರೆಯಾನ್ ಡೆಲ್ಫಿಯ ಅಪ್ಪಣೆಯಿಲ್ಲದೆ ಈಡಿಪಸ್‌ನನ್ನು ದೇಶಾಂತರ ಕಳಿಸುವ ಬಗ್ಗೆ ತೀರ್ಮಾನ ಕೈಗೊಳ್ಳುವುದು ಸಾಧ್ಯವಿಲ್ಲವೆಂದು ಹೇಳುತ್ತಾನೆ. ಡೆಲ್ಫಿಯ ಆಣತಿಗಾಗಿ ಅನೇಕ ವರ್ಷ ಥೀಬ್ಸ್‌ನಲ್ಲೇ ಕಾಯುತ್ತ ಜನರ ಅವಹೇಳನ ಅನುಭವಿಸುತ್ತಾನೆ ಈಡಿಪಸ್ ; ಆ ಆಣತಿ ಬಂದಾಗ ಈಡಿಪಸ್‌ಗೆ ಮುಪ್ಪು ಬಂದಿದೆ, ಅವನಿಗೆ ಮಕ್ಕಳ ಆಶ್ರಯ ಬೇಕಾಗಿದೆ, ದೇಶಾಂತರ ಹೋಗುವ ಮನಸ್ಸಿಲ್ಲ, ಶಕ್ತಿಯಿಲ್ಲ. ಇಷ್ಟಕ್ಕೆ ವಿರುದ್ಧವಾಗಿ ಅವನ ಗಂಡುಮಕ್ಕಳು ಮತ್ತು ಕ್ರೆಯಾನ್ ಅವನನ್ನು ಥೀಬ್ಸ್‌ನಿಂದ ಅಟ್ಟುತ್ತಾರೆ ; ತನ್ನ ಕಿರಿಯುಮಗಳು ಅಂತಿಗೊನೆಯೊಂದಿಗೆ ಊರು ಬಿಟ್ಟು ಅಲೆದಾಡುತ್ತ ಈಡಿಪಸ್ ಅಥೆನ್ಸ್‌ನ ಹತ್ತಿರದ ಕೊಲೋನಸ್ ಎಂಬ ಹಳ್ಳಿಗೆ ಬಂದು ನೆಲೆಸುತ್ತಾನೆ ; ಅವನ ಹಿರಿಯ ಮಗಳು ಇಸ್ಮೇನೆ ಮತ್ತು ಅಥೆನ್ಸ್‌ನ ದೊರೆ ಥೀಸಿಯಸ್ ಈಡಿಪಸ್‌ಗೆ ಪ್ರೀತಿ ತೋರುತ್ತಾರೆ, ನೆರವು ನೀಡುತ್ತಾರೆ.

ಈಡಿಪಸ್ ಥೀಬ್ಸ್ ಬಿಟ್ಟರೂ ಥೀಬ್ಸ್ ಈಡಿಪಸ್‌ನನ್ನು ಬಿಡುವುದಿಲ್ಲ. ಥೀಬ್ಸ್‌ನ ದೇವವಾಣಿ ಈಡಿಪಸ್‌ನ ಸಮಾಧಿಯಿಂದ ದೇಶಕ್ಕೆ ಒಳ್ಳೆಯದಾಗುವುದೆಂದು ಹೇಳಿದೆ. ಕ್ರೆಯಾನ್ ಮತ್ತು ಈಡಿಪಸ್‌ನ ಗಂಡುಮಕ್ಕಳು ಇದನ್ನು ತಮ್ಮ ರಾಜಕೀಯಕ್ಕೆ ಬಳಸಿಕೊಳ್ಳಲು ಯತ್ನಿಸುತ್ತಾರೆ. ಆದರೆ ಅವರ ಗುಣ ಬಲ್ಲ ಈಡಿಪಸ್ ಇದಕ್ಕೆ ಮಣಿಯುವುದಿಲ್ಲ ; ಅವರನ್ನು ಬೈದು, ಶಪಿಸಿ ಹಿಂದಕ್ಕೆ ಕಳಿಸುತ್ತಾನೆ, ಇಷ್ಟರಲ್ಲಾಗಲೇ ಥೀಬ್ಸ್ ರಾಜಕೀಯದಲ್ಲಿ ಮಹತ್ತರ ಬದಲಾವಣೆಗಳಾಗಿವೆ. ಈಡಿಪಸ್‌ನ ಕಿರಿಯುಮಗ ಎತೆಯೊಕ್ಲೆಸ್ ತನ್ನ ಅಣ್ಣ ಪಾಲಿನೈಕಸ್‌ನನ್ನು ಊರುಬಿಟ್ಟು ಓಡಿಸಿದ್ದಾನೆ ; ಪಾಲಿನೈಕಸ್ ಆರ್ಗಾಸ್‌ಗೆ ಓಡಿಹೋಗಿ ಅಲ್ಲಿಯ ದೊರೆ ಅದ್ರೇಕಸ್‌ನ ಮಗಳನ್ನು ಮದುವೆಯಾಗಿ ತನ್ನ ನಾಡಿನ ಮೇಲೆ ಏಳು ಪಡೆ ಮತ್ತು ಏಳು ಜನ ಸೇನಾನಾಯಕರೊಡನೆ ದಂಡೆತ್ತಿ ಬಂದು ಥೀಬ್ಸ್‌ನ ಏಳು ಹೆಬ್ಬಾಗಿಲ ಮೂಲಕ ಮುತ್ತುತ್ತಾನೆ. ಈಡಿಪಸ್ ಶಾಪ ನಿಜವಾಗಿ, ಪಾಲಿನೈಕಸ್ ಮತ್ತು ಎತೆಯೋಕ್ಲೆಸ್ ಇಬ್ಬರೂ ಯುದ್ಧದಲ್ಲಿ ಬಡಿದಾಡಿ ಸಾಯುತ್ತಾರೆ. ಇಷ್ಟರಲ್ಲಿ ಈಡಿಪಸ್ ತನ್ನ ಹೆಣ್ಣುಮಕ್ಕಳ

ಹತ್ತಿರ ಬದುಕುತ್ತಿದ್ದು ಥೀಸಿಯಸ್ ದೊರೆಯನ್ನು ಹರಸಿ ಪ್ರಶಾಂತ ಮರಣ ಪಡೆದಿದ್ದಾನೆ. ಅಣ್ಣಂದಿರ ಮರಣದ ವಾರ್ತೆ ಕೇಳಿದ ಅಂತಿಗೊನೆ ತನ್ನ ಸೋದರಿ ಇಸ್ಮೇನೆಯೊಂದಿಗೆ ಥೀಬ್ಸ್‌ಗೆ ಬರುತ್ತಾಳೆ. ಅಂತಿಗೊನೆ ಕ್ರೆಯಾನನ ಮಗ ಹಯ್‌ಮೋನ್‌ನನ್ನು ಪ್ರೇಮಿಸುವುದರಿಂದ ಅವರಿಬ್ಬರ ಮದುವೆ ಗೊತ್ತಾಗಿದೆ.

ಪಾಲಿನೈಕಸ್ ಮತ್ತು ಎತಿಯೋಕ್ಲೆಸ್ ಸತ್ತಮೇಲೆ ಕ್ರೆಯಾನ್ ಒಂದು ಆಜ್ಞೆ ಹೊರಡಿಸಿದ್ದಾನೆ. ನಗರವನ್ನು ರಕ್ಷಿಸಿದ ಎತೆಯೋಕ್ಲೆಸ್‌ಗೆ ಶವಸಂಸ್ಕಾರದ ಮರ್ಯಾದೆ ದೊರೆತಿದೆ ; ಅದನ್ನು ನಾಶಪಡಿಸಲು ಯತ್ನಿಸಿದ ಪಾಲಿನೈಕಸ್ ಶವವನ್ನು ಬಯಲಲ್ಲಿ ಎಸೆದು ನಾಯಿ ನರಿಗಳ ಪಾಲು ಮಾಡಬೇಕೆಂದೂ ಈ ಆಜ್ಞೆ ಉಲ್ಲಂಘಿಸುವವರಿಗೆ ಮರಣ ದಂಡನೆಯೆಂದೂ ಕ್ರೆಯಾನ್ ಶಾಸನ ಹೊರಡಿಸಿದ್ದಾನೆ. ಥೀಬ್ಸ್‌ನಲ್ಲಿ ಶವಸಂಸ್ಕಾರ ಮುಖ್ಯ ಆಚರಣೆಯಾದ್ದರಿಂದ, ತಾನು ತನ್ನ ಇಬ್ಬರು ಅಣ್ಣಂದಿರನ್ನು ಸಮಾನವಾಗಿ ಪ್ರೀತಿಸಿದ್ದರಿಂದ ಸತ್ತ ಪಾಲಿನೈಕಸ್ ಮೇಲೆ ಕ್ರೆಯಾನ್ ಸೇಡು ತೀರಿಸಿಕೊಳ್ಳುವುದು ದೇವ, ಮಾನವರ ಇಚ್ಛೆಗೆ ವಿರುದ್ಧವಾದದ್ದೆಂದು ತಾನು ನಂಬುವುದರಿಂದ ಅಂತಿಗೊನೆ ದೊರೆಯ ಆಜ್ಞೆ ಉಲ್ಲಂಘಿಸಿ ಶವಸಂಸ್ಕಾರ ಮಾಡುತ್ತಾಳೆ. ಕ್ರೆಯಾನ್ ರೊಚ್ಚಿಗೆದ್ದು ಅವಳನ್ನು ಕಗ್ಗವಿಯ ಸೆರೆಯಲ್ಲಿ ಹಾಕಿ ನಿಧಾನವಾಗಿ ಸಾಯಲು ಬಿಡುತ್ತಾನೆ : ಅಂತಿಗೊನೆ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ ; ಅವಳನ್ನು ಪ್ರೀತಿಸುವ ಹಯ್‌ಮೋನ್ ತಂದೆಯ ಆಜ್ಞೆಯನ್ನು ಪ್ರಶ್ನಿಸಿ ಅಂತಿಗೊನೆಯೊಂದಿಗೆ ಸಾವನ್ನಪ್ಪುತ್ತಾನೆ ; ಕ್ರೆಯಾನನ ಹೆಂಡತಿ ಯೂರಿಡೀಸಿ ಹಯ್‌ಮೋನ್ ಸಾವಿನ ವಾರ್ತೆಯಿಂದ ಕುಸಿದು ಮರಣಹೊಂದುತ್ತಾಳೆ. ಕ್ರೆಯಾನ್ ತನ್ನನ್ನು ತಾನೇ ಹಳಿದುಕೊಂಡು ದುರ್ಭರ ದುಃಖದಲ್ಲಿ ತನ್ನನ್ನು ದೇಶದಿಂದ ಅಟ್ಟಬೇಕೆಂದು ನಗರದ ಗಣ್ಯರನ್ನು ಕೇಳಿಕೊಳ್ಳುತ್ತಾನೆ....

ಈಡಿಪಸ್ ತಾನು ಹೆತ್ತವನನ್ನುಕೊಂದು ಹೆತ್ತಾಕೆಯನ್ನು ಮದುವೆಯಾದದ್ದನ್ನು ಕಂಡುಕೊಳ್ಳುವುದು 'ದೊರೆ ಈಡಿಪಸ್'ನಲ್ಲೂ, ಅನೇಕ ವರ್ಷಗಳ ಬಳಿಕ ದೇವರ ಆದೇಶದಂತೆ ಮತ್ತು ಮೈದುನ, ಮಕ್ಕಳ ಒತ್ತಾಯದಂತೆ ದೇಶಾಂತರ ಹೋಗಿ ಕೊಲೋನಸ್‌ನಲ್ಲಿ ಜೀವಿಸುತ್ತಿದ್ದು ಮಡಿಯುವುದು "ಕೊಲೋನಸ್‌ನಲ್ಲಿ ಈಡಿಪಸ್" ಎಂಬ ನಾಟಕದಲ್ಲೂ, ಅಂತಿಗೊನೆ ತಂದೆಯ ಸೇವೆಯಿಂದ ಹಿಂದಿರುಗಿ ಕ್ರೆಯಾನನ ಆಜ್ಞೆಯ ವಿರುದ್ಧ ಅಣ್ಣ ಪಾಲಿನೈಕಸ್‌ಗೆ ಶವಸಂಸ್ಕಾರ ನಡೆಸಿ ಸಾವನ್ನಪ್ಪುವುದು 'ಅಂತಿಗೊನೆ' ನಾಟಕದಲ್ಲೂ ರೂಪು ಪಡೆದಿವೆ. ಆದರೆ 'ಅಂತಿಗೊನೆ' ಮೊದಲು ರಚಿತವಾದ ನಾಟಕ ; ಎರಡನೆಯದು 'ದೊರೆ ಈಡಿಪಸ್'; ಮೂರನೆಯದು 'ಕೊಲೋನಸ್‌ನಲ್ಲಿ ಈಡಿಪಸ್'. ವಸ್ತು ಥೀಬ್ಸ್ ಪುರಾಣ ಕುರಿತದ್ದಾದರೂ ಮೂರೂ ನಾಟಕಗಳನ್ನು ಬೇರೆ ಬೇರೆ ಸ್ವತಂತ್ರ ಕೃತಿಗಳೇ ಎಂಬಂತೆ ನೋಡಬೇಕು ; ಇಲ್ಲದಿದ್ದರೆ ಪಾತ್ರಗಳು, ಅವುಗಳ ವಯಸ್ಸು, ಕ್ರಿಯೆಯ ಬಗ್ಗೆ ಗೊಂದಲ ಆರಂಭವಾಗುತ್ತದೆ.

ಕವಿ ಸಾಫೋಕ್ಲಿಸ್

ಕವಿ ಸಾಫೋಕ್ಲಿಸ್ (ಕ್ರಿ. ಪೂ. ೪೯೬–೪೦೬) ಮೂವರು ಪ್ರಮುಖ ಗ್ರೀಕ್ ರುದ್ರನಾಟಕಕಾರರಲ್ಲಿ ಒಬ್ಬನು. ಈಸ್ಕೈಲಸ್‌ನ ತರುವಾಯ ಅತ್ಯಂತ ಅರ್ಥಪೂರ್ಣ ಕೃತಿಗಳನ್ನು ರಚಿಸಿದವನು ; ಈಸ್ಕೈಲಸ್‌ನನ್ನು ನಾಟಕಸ್ಪರ್ಧೆಯಲ್ಲಿ (ಕ್ರಿ. ಪೂ. ೪೬೮ ರಲ್ಲಿ) ಸೋಲಿಸಿ ತನ್ನ ಪ್ರತಿಭೆಯನ್ನು ತೋರಿದವನು. ಇವನ ಕಿರಿಯ ಸಮಕಾಲೀನನಾದ ಯೂರಿಪಿಡಿಸ್ ವಾಸ್ತವತೆಗೆ ಹತ್ತಿರದವನೆಂಬುದು ನಿಜವಾದರೂ ಅವನಲ್ಲಿಲ್ಲದ ಆದರ್ಶಪ್ರಿಯತೆ, ತೀವ್ರ ಕಾವ್ಯ ಗುಣದಿಂದ ಸದಭಿರುಚಿಯ ಎಲ್ಲ ಕಾವ್ಯ ಮತ್ತು ನಾಟಕಪ್ರೇಮಿಗಳಿಗೆ ಅತ್ಯಂತ ಪ್ರಿಯನಾದವನು. ದೊರೆತಿರುವ ಈತನ ನಾಟಕಗಳು ಏಳು : 'ದೊರೆ ಈಡಿಪಸ್', 'ಕೊಲೋನಸ್‌ನಲ್ಲಿ ಈಡಿಪಸ್', 'ಅಂತಿಗೊನೆ', 'ಎಲೆಕ್ಟ್ರಾ', 'ಟ್ರಾಕಿನೇ', 'ಏಜಾಕ್ಸ್' ಮತ್ತು 'ಫಿಲೊಕ್ಟಿಟಿಸ್'.

೧೩–೨–೧೯೭೨ ರಂದು ರವೀಂದ್ರ ಕಲಾಕ್ಷೇತ್ರದ ಹಿಂಭಾಗದಲ್ಲಿ ಪ್ರತಿಮಾ ನಾಟಕರಂಗ ಮತ್ತು ಕನ್ನಡ ಸಾಹಿತ್ಯ ಕಲಾಸಂಘದವರಿಂದ (ಸಂಗೀತ ನಾಟಕ ಅಕಾಡಮಿಯ ಸಹಕಾರದಿಂದ) 'ದೊರೆ ಈಡಿಪಸ್' ಪ್ರದರ್ಶನವಾಯಿತು. ಆಗ ಭಾಗವಹಿಸಿದ ಕಲಾವಿದರು, ನಿರ್ದೇಶಕರು ಮತ್ತು ರಂಗನಿರ್ಮಾಪಕರು :

ಈಡಿಪಸ್	ಗಿರೀಶ್ ಕಾರ್ನಾಡ
ಯೊಕಾಸ್ಟಾ	ಸರೋಜ
ಕ್ರೆಯಾನ್	ಲೋಕನಾಥ್
ಟೈರೀಸಿಯಸ್	ಚಂದ್ರಶೇಖರ್ ಬಿ.
ಒಬ್ಬ ಅರ್ಚಕ	ಗೋವಿಂದರಾವ್ ಜಿ. ಕೆ.
ದೂತ	ವೆಂಕಟರಾಮ್ ಎನ್. ಎಸ್.
ಎರಡನೆ ದೂತ	ಶಿವಾನಂದ ಜಿ. ವಿ.
ಒಬ್ಬ ಕುರುಬ	ನಾಗೇಶ್
ಮೇಳದವ (ನಾಯಕ)	ಶಿವರಾಮಯ್ಯ ಡಿ. ವಿ.
ಮೇಳದವರು ಮತ್ತು	ಕೃಷ್ಣಪ್ಪ ಎಲ್.
ಥೀಬ್ಸ್ ನಾಗರಿಕರು	ಮೋಹನ ರಾಮ್
	ನಾಗಾಭರಣ
	ನಾಗರಾಜ್
	ವಿಶ್ವನಾಥ್ ಎಸ್.
	ಲೋಕೇಶ್ ಜೆ.
	ನಾಗರಾಜ್ ಎಸ್.
	ಮೋಹನ್
	ಕೃಷ್ಣರಾಜ್
	ಗೋಪಿನಾಥ್
	ಗೋಪಾಲ್
	ಕಂಬಾರ
ನಿರ್ದೇಶಕ	ಬಿ. ವಿ. ಕಾರಂತ
ರಂಗವಿನ್ಯಾಸ, ಬೆಳಕು	ವಿ. ರಾಮಮೂರ್ತಿ
ಉಡುಗೆ ತೊಡುಗೆ	ಪ್ರೇಮಾ ಕಾರಂತ್, ಆಶಾ
ನಿರ್ವಹಣೆ	ನಾಗೇಶ್, ಮರುಳಸಿದ್ದಪ್ಪ

ದೊರೆ ಈಡಿಪಸ್

ಪಾತ್ರಗಳು

ಈಡಿಪಸ್	:	ಥೀಬ್ಸ್‌ನ ದೊರೆ
ಯೊಕಾಸ್ತ	:	ಅವನ ಹೆಂಡತಿ
ಕ್ರೈಯಾನ್	:	ಯೊಕಾಸ್ತಳ ಸೋದರ
ಟೈರೀಸಿಯಸ್	:	ಅಂಧ ಭವಿಷ್ಯಕಾರ

ಒಬ್ಬ ಅರ್ಚಕ
ದೂತ
ಎರಡನೆಯ ದೂತ
ಒಬ್ಬ ಕುರುಬ
ಥೀಬ್ಸ್ ಹಿರಿಯರ ಮೇಳ
ಮೇಳದವ (ಮೇಳನಾಯಕ)
ರಾಣಿಯ ಪರಿವಾರದವರು
ಥೀಬ್ಸ್ ನಾಗರಿಕರು

ದೃಶ್ಯ : ಥೀಬ್ಸ್‌ನ ಅರಮನೆಯ ಮುಂದೆ.

ಅರಮನೆಯ ಎದುರು ಮೆಟ್ಟಿಲುಗಳ ಮೇಲೆ ಮತ್ತು ಮುಂದಕ್ಕೆ ಉಚಾಯಿಸಿರುವ ದೇವ ಪೀಠದ ಸುತ್ತ ನಮಸ್ಕರಿಸುತ್ತಿರುವ, ಶಿರಬಾಗಿರುವ ಅಸಂಖ್ಯ ನಾಗರಿಕರು.

ಮಧ್ಯದ ಬಾಗಿಲಿಂದ ಈಡಿಪಸ್ ಪ್ರವೇಶ, ಪರಿವಾರದೊಂದಿಗೆ.

ಈಡಿಪಸ್ : ಮಕ್ಕಳೇ, ಕ್ಯಾಡ್ಮಸ್ ಕುಲದ ಹೊಚ್ಚ ಹೊಸ ಕುಡಿಗಳೇ.
ಯಾಕೆ ಗುಂಪುಗೂಡಿದ್ದೀರಿ, ಯಾಕೆ ಜೀವವೃಕ್ಷವ ಹೊತ್ತು
ಪೀಠದ ಸುತ್ತ ತಲೆಬಾಗಿಸಿದ್ದೀರಿ ? ಯಾಕೆ ಈ
ಪುಷ್ಪ ಮಾಲಿಕೆ ? ಪ್ರಾರ್ಥನೆ, ರೋದನದ ಸದ್ದು
ಥೀಬ್ಸ್ ನಗರವನ್ನು ತುಂಬಿ ಫೋಯ್‌ಬಸ್ ದೇವತೆಯನ್ನು
ಮುಟ್ಟುತ್ತಿದೆ.
ಪುತ್ರರೆ,
ನಾನು ದೂತರ ಮೂಲಕ ನಿಮ್ಮ ಮೊರೆ ಕೇಳಲೊಪ್ಪದೆ
ನಾನೇ, ಅಖಂಡ ಖ್ಯಾತಿಯ ಈಡಿಪಸ್,
ಬಂದಿದ್ದೇನೆ.
(ಅರ್ಚಕನಿಗೆ)
ನೀನು, ಅಗೋ ಅಲ್ಲಿರುವಾತ,
ಎಲ್ಲರಿಗಿಂತ ಹಿರಿಯನಾದ ನೀನು ಎಲ್ಲರ ಪರವಾಗಿ ಹೇಳು :
ಏನು ಆತಂಕ, ಯಾವ ಭಯ, ಎಂಥ ಪ್ರಾರ್ಥನೆ ?

ಹೇಳು, ನಾನು ನನ್ನ ಶಕ್ತಿಮೀರಿ ನೆರವಾಗುವ ಬಗ್ಗೆ
ಖಂಡಿತ ಸಂದೇಹ ಬೇಡ ; ಸೆರೆಗೊಡ್ಡಿ ಬೇಡುವ ನಿಮ್ಮನ್ನು
ಕಂಡು ಮರುಗದಿದ್ದರೆ ನನಗೆ ಹೃದಯವಿಲ್ಲವೆಂದು ತಿಳಿ.

ಅರ್ಚಕ : ಮಹಾಪ್ರಭು ಈಡಿಪಸ್, ನೋಡು ನೆರೆದಿರುವ ನಮ್ಮನ್ನು :
ಚಿಕ್ಕವರು ದೊಡ್ಡವರು, ಒಬ್ಬಂಟಿಯಾಗಿರದ ಎಳೆಯ
ಮಕ್ಕಳು, ಮುಪ್ಪಿನ ನನ್ನಂಥ ಅರ್ಚಕರು,
ಅವಿವಾಹಿತ ತರುಣರು—ಇಲ್ಲಿದ್ದಾರೆ ;
ಇಲ್ಲಿರದ ಅಸಂಖ್ಯ ಜನ ಜೀವವೃಕ್ಷದ ಟೊಂಗೆಯಂಡಿ,
ಎರಡು ಪಲ್ಲಸ್ ದೇವಸ್ಥಾನಗಳಲ್ಲಿ, ಊರ ಚೌಕಗಳಲ್ಲಿ
ಅಪಾಲೋ ಸನ್ನಿಧಿಯ ಅಗ್ನಿಯೆಡೆ ಕಮರುತ್ತಿದ್ದಾರೆ.
ನಿನ್ನ ಕಣ್ಣೇ ನಿನಗೆ ಹೇಳುತ್ತಾವೆ :
ಥೀಬ್ಸ್ ನಗರ ಮೃತ್ಯುಸಾಗರದ ತುಯ್ಯುವ ಅಲೆಗಳಲ್ಲಿ ಸಿಕ್ಕಿ
ಕತ್ತೆತ್ತಿ ನಿಲ್ಲಲಾರದೆ ತತ್ತರಿಸುತ್ತಿದೆ ; ಭೂತಾಯಿಯ
ಹಣ್ಣು, ಮೊಳಕೆಗಳಿಗೆ ರೋಗ ತಟ್ಟಿದೆ ; ಕುರಿಮಂದೆಗಳು ಬಳಲಿವೆ ;
ದುಡಿಮೆಗೆ ಫಲ ದೊರೆಯದಿದೆ ; ಶಿಶುಗಳು ಗರ್ಭದಲ್ಲಿ ಸಾಯುತ್ತಿವೆ;
ರೋಗರುಜಿನದ ದೈತ್ಯ ನಗರಕ್ಕೆ ಅಪ್ಪಳಿಸಿ ಕ್ಯಾಡ್‌ಮಸ್ ತಾಣ
ಬೆಂಜರಾಗಿದೆ, ದಾರಿದ್ರ್ಯದಿಂದ ದುರಂತಮಯವಾಗಿದೆ.
ನಮಗೆ ಗೊತ್ತು, ದೊರೆಯೆ, ನೀನು ದೇವತೆಯಲ್ಲ,
ಆದರೆ ಈ ನಾಡಿನಲ್ಲಿ ದೇವತೆಗಳ ಇಚ್ಛೆಯನ್ನರಿತ ಒಬ್ಬನೇ
ಅಖಂಡ ಜ್ಞಾನಿಯೆಂದು ನಿನ್ನೆಡೆಗೆ ಬಂದಿದ್ದೇವೆ ;
ನಮ್ಮಿಂದ ಹೇಳಿಸಿಕೊಳ್ಳದೆ, ಯಾವ ನೆರವೂ ಪಡೆಯದೆ,
ನಿನ್ನ ಪ್ರತಿಭೆಯೊಂದನ್ನೇ ನೆಚ್ಚಿ ನಮ್ಮನ್ನು ನೀನು
ಸ್ಫಿಂಕ್ಸ್ ದೇವತೆಯ ಕ್ರೂರ ಸಪ್ಪಿನಿಂದ ಮುಕ್ತಗೊಳಿಸಿದೆ ;
ಯಾವ ದೇವತೆಯ ಗೂಢ ಸ್ಫೂರ್ತಿಯಿಂದಲೋ ನಮ್ಮನ್ನು
ಪೊರೆದೆ.

ಸರ್ವಶಕ್ತ ಈಡಿಪಸ್, ಆದ್ದರಿಂದ ಈಗ
ಸಗ್ಗಿಗರ, ಮಾನವರ—ಯಾರ ನೆರವಿಂದಲಾದರೂ ನಮಗೆ
ನೆಮ್ಮದಿ, ಕ್ಷೇಮ ನೀಡು. ನೀನೇ ನಮಗೆ ದಿಕ್ಕು.
ಹಿಂದೊಮ್ಮೆ ರಕ್ಷಿಸಿದ ದೊರೆ ನೀನು ಇಂದು ಸಹ
ನಮ್ಮನ್ನು ಪಾರುಮಾಡಬಲ್ಲೆ. ಮಾನವಶ್ರೇಷ್ಠ, ನಿನ್ನ
ಈ ನಗರಕ್ಕೆ ಹೊಸ ಜೀವ ಕೊಡು. ಪೂರ್ವದ

ಆ ಯಶಸ್ಸಿಗಾಗಿ ನಿನ್ನನ್ನ ಎಲ್ಲರೂ ಉದ್ಧಾರಕನೆನ್ನುತ್ತಿದ್ದಾರೆ ;
ಮುಂದೆ ನಿನ್ನ ಆಳ್ವಿಕೆ ನೆನೆಸಿಕೊಂಡಾಗ ಜನ
ಅಂದು ಅಭ್ಯುದಯವಾಯಿತು, ಹಾಗೇ ಅವನತಿಯೂ ಆಯಿತು,
ಅನ್ನುವಂತಾಗದಿರಲಿ ; ಬಿರುಗಾಳಿಯಲ್ಲಿ ದೇಶ
ತತ್ತರಿಸುತ್ತಿದೆ, ಬೀಳುತ್ತಿದೆ ; ಒಮ್ಮೆ ಅದೃಷ್ಟವನ್ನು ಒರೆಗೆ ಹಚ್ಚಿದ
ನೀನು ಇನ್ನೊಮ್ಮೆ ಹಚ್ಚು ; ಯಾವೊಬ್ಬನೂ ನಿನ್ನ ವಿರುದ್ಧ
ಉಸಿರೆತ್ತಲಾರ ; ಆದ್ದರಿಂದ ಮರಣಮುದ್ರಿತ ರಾಜ್ಯವಾಳದೆ
ಜೀವಂತ ರಾಜ್ಯವಾಳು. ಜೀವ ಚಲನೆಯಿಲ್ಲದ ಹಡಗು ಕೇವಲ
ಮರದ ತುಂಡು, ನೆನಪಿಡು, ಪ್ರಭು ; ಜೀವವಿಲ್ಲದ ಕೋಟೆ
ಕೊತ್ತಳವೆಲ್ಲ ನಿರರ್ಥಕ.

ಈಡಿಪಸ್ : ನೀವು ಹೇಳುತ್ತಿರುವುದು, ಭಯಭ್ರಾಂತ ಮಕ್ಕಳೇ,
ನನಗೆ ಹೊಸತಲ್ಲ, ಚೆನ್ನಾಗಿ ಬಲ್ಲೆ. ನೀವೆಲ್ಲ ನೊಂದವರು,
ನೀವೆಲ್ಲರೂ. ಆದರೆ ನನ್ನಷ್ಟು ನೊಂದವರಲ್ಲ.
ನಿಮ್ಮ ನೋವು ನಿಮ್ಮದು ಮಾತ್ರ ; ಸ್ವಂತದ್ದು. ಆದರೆ ನನ್ನದು
ಈ ಮಹಾ ನಗರವನ್ನು ತುಂಬಿ ಹಬ್ಬುವ ನೋವು. ನಿಮಗಾಗಿ,
ನನಗಾಗಿ, ಎಲ್ಲರಿಗಾಗಿ ನನ್ನ ವೇದನೆ. ನೀವು
ನನ್ನನ್ನ ಎಬ್ಬಿಸಿದಾಗ ನಾನು ನಿದ್ರಿಸುತ್ತಿರಲಿಲ್ಲ. ಇಲ್ಲ, ನಾನು
ಕಂಬನಿದುಂಬಿ ನಿದ್ದೆಗೆಟ್ಟು ಅಡ್ಡಾಡುತ್ತಿದ್ದೆ. ನನಗೊಂದು
ಪರಿಹಾರ ಹೊಳೆಯಿತು. ಅದರಂತೆ, ನನ್ನ ಮೈದುನ
ಕ್ರೆಯಾನನನ್ನು ಅಟ್ಟಿದೆ. ನನ್ನ ಯಾವ ಕೃತ್ಯ ಅಥವ ಕ್ರಮದಿಂದ
ಈ ದೇಶ ಸುಖಿಯಾದೀತೆಂದು ಕಂಡುಹಿಡಿಯಲು,
ಅಪಾಲೋ ದೇವರನ್ನು ನೋಡಲು, ಕ್ರೆಯಾನನನ್ನು ಕಳಿಸಿದೆ ;
ಆದರೆ ಈಗ ನಾನು ಆತಂಕಗೊಂಡಿದ್ದೇನೆ. ದಿನಗಳನ್ನು
ಎಣಿಸುತ್ತಿದ್ದೇನೆ. ಆತ ಬಂದಿಲ್ಲ, ಬರುತ್ತಲಿಲ್ಲ, ಆತ
ಬರುವ ಸಮಯವೇನೋ ಆಗಿದೆ.
ಆತ ಬಂದೊಡನೆ ದೇವರಿಂದ ಆತ ಏನು ಆಣತಿ
ತಂದಿದ್ದರೂ ಅದನ್ನು ಮಾಡಿಯೇ ತೀರುತ್ತೇನೆ.

ಅರ್ಚಕ : ಸಮಯೋಚಿತ, ಹಿತಕರ ಮಾತುಗಳು !
ಅಗೋ : ಕ್ರೆಯಾನ್ ಬರುತ್ತಿರುವಂತಿದೆ.
(ಕ್ರೆಯಾನ್ ದೂರದಲ್ಲಿ ಬರುತ್ತಿರುವುದು ಕಾಣಿಸುತ್ತದೆ)

ಈಡಿಪಸ್ : ಓ ದೇವ ಅಪಾಲೋ ! ಅವನ ಮಂದಹಾಸದ ಮುಖದಂತೆ
ಆತ ತರುವ ಸುದ್ದಿ ಕೂಡ ಸುಖಕರವಾಗಿರಲಿ.

ಅರ್ಚಕ : ಶುಭ ತರುವವನಂತೆ ಉಲ್ಲಸಿತನಾಗಿದ್ದಾನೆ. ಅವನ
ಕೊರಳು ವಿಜಯಮಾಲಿಕೆಗಳಿಂದ ಅಲಂಕೃತವಾಗಿದೆ.

ಈಡಿಪಸ್ : ಇನ್ನೇನು ಗೊತ್ತಾಗುತ್ತದೆ, ಸನಿಹದಲ್ಲೇ ಇದ್ದಾನೆ.
(ಕ್ರೆಯಾನ್ ಪ್ರವೇಶ)
ಓ ರಾಜಕುಮಾರ,
ಸಹೋದರ, ಮೆನೋಕಿಯಾಸ್ ಪುತ್ರ, ದೇವರಿಂದ
ಏನು ವಾರ್ತೆ ತಂದಿರುವೆ ?

ಕ್ರೆಯಾನ್ : ಮಹತ್ತರ ವಾರ್ತೆ. ಇಷ್ಟು ಮಾತ್ರ ಹೇಳಬಲ್ಲೆ :
ದೇವರ ಮಾತಿನಂತೆ ನಡೆದರೆ ಎಲ್ಲ ಗಾಯಗಳು ಮಾಯುತ್ತವೆ,
ಎಲ್ಲ ನೋವು ಶಮನಗೊಳ್ಳುತ್ತವೆ.

ಈಡಿಪಸ್ : ದೇವರ ಆಣತಿ ಏನು ? ನಿನ್ನ ಅಸ್ಪಷ್ಟ ನುಡಿಗಳು
ನನ್ನನ್ನು ಭಯ ಮತ್ತು ಆಶೆಗಳ ನಡುವೆ
ತುಯ್ಯಲಾಡಿಸುತ್ತಿವೆ.

ಕ್ರೆಯಾನ್ : ಹೇಳುತ್ತೇನೆ. ಆದರೆ—
ಎಲ್ಲರೆದುರಿಗೆ ಹೇಳಬೇಕೆ ?
ಒಳಗೆ ಹೋದರೆ ಉತ್ತಮವಲ್ಲವೆ ?

ಈಡಿಪಸ್ : ಪ್ರತಿಯೊಬ್ಬರೂ ಕೇಳಲಿ :
ನನಗಿಂತ ಹೆಚ್ಚಾಗಿ ಅವರೆಲ್ಲರಿಗಾಗಿ ನನ್ನ ವೇದನೆ.

ಕ್ರೆಯಾನ್ : ಹಾಗಾದರೆ ನಾನು ಡೆಲ್ಫಿಯಲ್ಲಿ ಕೇಳಿದ್ದು ಹೇಳುತ್ತೇನೆ ;
ಸ್ಪಷ್ಟ ಮಾತುಗಳಲ್ಲಿ ದೇವರು ನುಡಿದಿದ್ದಾನೆ :
ಈ ಥೀಬ್ಸ್ ನಗರ ಪಾಪಕೃತ್ಯವೊಂದನ್ನು ಬಚ್ಚಿಟ್ಟುಕೊಂಡಿದೆ ;
ಗುಣವಾಗದ ಕಾಯಿಲೆ ಅದು ;
ಅದನ್ನು ಬೇರೊರಸೆ ಕಿತ್ತೊಗೆಯದಿದ್ದರೆ ಇಡೀ ನಗರ ಹಾಳಾಗುತ್ತದೆ.

ಈಡಿಪಸ್ : ಎಂಥ ಪಾಪ ಕೃತ್ಯ ? ಅದರಿಂದ ಹೇಗೆ ಮುಕ್ತವಾಗುವುದು ?

ಕ್ರೆಯಾನ್ : ದೇಶಾಂತರಗೊಳಿಸಿ, ಸಂಹರಿಸಿ ; ರಕ್ತಕ್ಕೆ ರಕ್ತ ತೆತ್ತು. ನಮ್ಮ
ದೇಶಕ್ಕೆ ಒಂದು ಕೊಲೆಯಿಂದ ಅಂಟಿಕೊಂಡ ಪಾಪ ಅದು.

ಈಡಿಪಸ್ : ಯಾರ ಕೊಲೆ ? ದೇವರು ಆತನ ಹೆಸರು ಹೇಳಲಿಲ್ಲವೆ ?

ಕ್ರಿಯಾನ್ : ಪ್ರಭೂ, ಒಂದಾನೊಂದು ಕಾಲಕ್ಕೆ, ನೀನು ಬರುವುದಕ್ಕೆ ಮುಂಚೆ,
ಲಾಯಿಸ್ ನಮ್ಮ ದೊರೆಯಾಗಿದ್ದ. ಆತ ಈ ರಾಜ್ಯ
ಆಳುತ್ತಿದ್ದ.

ಈಡಿಪಸ್ : ಬಲ್ಲೆ, ಕೇಳಿಬಲ್ಲೆ. ನಾನು ಆತನನ್ನು ನೋಡಿರಲಿಲ್ಲ.

ಕ್ರಿಯಾನ್ : ಆತನ ಕೊಲೆಯಾಯಿತು. ದೇವರು ಈಗ
ಆತನ ಕೊಲೆಗೆ ಪ್ರತೀಕಾರ ಬಯಸುತ್ತಾನೆ.

ಈಡಿಪಸ್ : ಯಾರ ಮೇಲೆ ? ಯಾರು ಕೊಂಪವರು ?
ಇಷ್ಟು ವರ್ಷದ ಬಳಿಕ ಕೊಲೆಯ ಸುಳಿವು
ಎಲ್ಲಿ ಸಿಕ್ಕೀತು ?

ಕ್ರಿಯಾನ್ : ಈ ದೇಶದಲ್ಲೇ—ಅಂದಿದ್ದಾನೆ ದೇವರು ;
ನಾವು ಶೋಧಿಸುತ್ತ ಹೋದರೆ
ಸಾಮಾನ್ಯವಾಗಿ ದೊರೆಯದ ಸುಳಿವು ಸಿಗುತ್ತದೆ ಅಂದಿದ್ದಾನೆ.

ಈಡಿಪಸ್ : ಹಾಗಾದರೆ ಹೇಳು :
ಲಾಯಿಸ್ ಕೊಲೆ ಮನೆಯಲ್ಲಾಯಿತೊ, ಬಯಲಲ್ಲೊ ;
ಬೇರೆ ಯಾವುದೋ ದೇಶದಲ್ಲೊ ?

ಕ್ರಿಯಾನ್ : ತೀರ್ಥಯಾತ್ರೆಗೆಂದು ಹೊರಟ ಲಾಯಿಸ್
ಹಿಂದಿರುಗಲಿಲ್ಲ.

ಈಡಿಪಸ್ : ಯಾರೊಬ್ಬರೂ ಜೊತೆಗಿರಲಿಲ್ಲವೆ ?
ನಡೆದದ್ದು ಹೇಳುವುದಕ್ಕೆ ಸಾಕ್ಷಿ, ಸ್ನೇಹಿತರು
ಯಾರೂ ಇರಲಿಲ್ಲವೆ ?

ಕ್ರಿಯಾನ್ : ಎಲ್ಲರ ಕೊಲೆಯಾಯಿತು—ಒಬ್ಬನನ್ನು ಉಳಿದು. ಆತ
ಎಷ್ಟು ಭಯಗೊಂಡಿದ್ದನೆಂದರೆ, ಅವನಿಗೆ ನೆನಪಿದ್ದದ್ದು
ಒಂದೇ ಸಂಗತಿ.

ಈಡಿಪಸ್ : ಯಾವ ಒಂದು ಸಂಗತಿ ? ಬಳಸಿಕೊಳ್ಳುವ ಮನಸ್ಸಿದ್ದರೆ
ಒಂದೇ ಸಂಗತಿ ಎಲ್ಲದಕ್ಕೆ ಬೀಗದ ಕೈ ಆಗಬಲ್ಲದು.

ಕ್ರಿಯಾನ್ : ಅವನು ಹೇಳಿದ : ಡಕಾಯಿತರ ಗುಂಪೊಂದು
ದೊರೆಯ ಮೇಲೆ ಎರಗಿತು ;
ಕೊಲೆ ನಡೆಸಿ ಹೊರಟುಹೋಯಿತು.

ಈಡಿಪಸ್ : ವಿಚಿತ್ರವಾಗಿದೆ. ಈ ನಗರದ ಯಾರಾದರೂ
ಪಿತೂರಿ ನಡೆಸಿರದಿದ್ದರೆ
ಡಕಾಯಿತರು ಅಷ್ಟು ಧೈರ್ಯ ತೋರುವುದು ಅಸಂಭವ.

ಕ್ರಿಯಾನ್ : ನಮಗೂ ಹಾಗೆನ್ನಿಸಿತು. ಆದರೆ
ಲಾಯಿಸ್ ದೊರೆಯ ಸಾವಿನ ತರುವಾಯ ನಮ್ಮ ಕಷ್ಟಪರಂಪರೆ
ಆರಂಭವಾಗಿ ಕೊಲೆಗಡುಕನನ್ನು ಪತ್ತೆಹಚ್ಚುವ ಧೈರ್ಯಶಾಲಿ
ನಮಗೆ ದೊರೆಯಲಿಲ್ಲ.

ಈಡಿಪಸ್ : ಕೊಲೆಪಾತಕಿಯನ್ನು ಪತ್ತೆಹಚ್ಚಲು ಬಿಡದ
ಆ ಕಷ್ಟಪರಂಪರೆ ಎಂಥದು ?

ಕ್ರಿಯಾನ್ : ಸ್ಫಿಂಕ್ಸ್ ದೇವತೆಯ ದ್ವಂದ್ವಾರ್ಥದ ಕೂಗಿನಲ್ಲಿ
ಎಲ್ಲ ಮುಳುಗಿಹೋಯಿತು. ಅವಳ ನಿಗೂಢಾರ್ಥ ಹುಡುಕುತ್ತ
ಕೊಲೆಯ ನಿಗೂಢತೆ ಮರೆತುಹೋಯಿತು.

ಈಡಿಪಸ್ : ಹಾಗಾದರೆ ನಾನು ಮತ್ತೊಮ್ಮೆ
ನಿಗೂಢತೆಯಿಂದ ಸ್ಪಷ್ಟತೆ ಹೊರಡಿಸಬೇಕು.
ದೇವ ಅಪಾಲೋ ಸತ್ತವನ ಬಗ್ಗೆ ಇಂಥ
ಅನುಕಂಪ ತೋರಿರುವುದು ಸಹಜವಾಗಿದೆ ;
ನೀನಿನ್ನು ನೋಡುವೆ, ನಾನು ಈ ನಗರಕ್ಕಾಗಿ, ನಗರದೇವತೆಗಾಗಿ
ಪಾಪಿಗಳ ಮೇಲೆ ಪ್ರತೀಕಾರ ತೀರಿಸಿಕೊಳ್ಳುವುದನ್ನು
ಕಣ್ಣಾರೆ ನೋಡುವೆ. ಯಾಗೋ ದೂರದ ಗೆಳೆಯರಿಗಾಗಿ ಅಲ್ಲ ;
ನನ್ನ, ನನ್ನವರ ಪಾಪಮುಕ್ತಿಗಾಗಿ ಶ್ರಮಿಸುತ್ತೇನೆ.
ಲಾಯಿಸ್ ದೊರೆಯನ್ನು ಕೊಂದವ—ಆತ ಯಾರೇ ಇರಲಿ—
ನನ್ನನ್ನು ಕೊಲ್ಲಲು ಹಿಂಜರಿಯಲಾರ, ನನ್ನ ಕ್ಷೇಮಕ್ಕಾಗಿ
ನಾನು ಆತನನ್ನು ಪತ್ತೆ ಹಚ್ಚುತ್ತೇನೆ.
ಆದ್ದರಿಂದ, ಮಕ್ಕಳೆ, ಕೇಳಿ ; ಈ ಪೀಠವನ್ನು
ಬಿಟ್ಟು ತೆರಳಿ ; ನಿಮ್ಮ ಜೀವವೃಕ್ಷಗಳನ್ನೆತ್ತಿ ಹೊರಡಿ.
ನಿಮ್ಮಲ್ಲಿ ಒಬ್ಬ ಹೋಗಿ
ನಮ್ಮ ಪ್ರಜೆಗಳನ್ನೆಲ್ಲ ಇಲ್ಲಿಗೆ ಆಮಂತ್ರಿಸಿ. ನನ್ನಿಂದ
ಸಾಧ್ಯವಾದ ಎಲ್ಲದನ್ನೂ ಮಾಡುವೆ, ಹಾಗೆಂದು ಪ್ರಸಿದ್ಧಪಡಿಸಿ.

(ಹುಡುಗನೊಬ್ಬ ಹೋಗುವನು)

ದೇವರ ದಯೆಯಿಂದಲೇ
ನಮ್ಮ ಉದ್ಧಾರ—ಇಲ್ಲವೆ ಸಂಪೂರ್ಣ ನಾಶ.

(ಅರಮನೆಯೊಳಗೆ ಹೋಗುತ್ತಾನೆ.)

ಅರ್ಚಕ : ಏಳಿ, ಮಕ್ಕಳೆ. ಬಂದ ಕಾರ್ಯ ಸಿದ್ಧಿಸಿದೆ,
ದೊರೆಯೇ ಆಶ್ವಾಸನೆ ಕೊಟ್ಟಿದ್ದಾನೆ. ವಾರ್ತೆ ಕಳಿಸಿದ
ದೇವ ಫಾಯಬಸ್ ಬಂದು ನಮ್ಮನ್ನು ಕಾಪಾಡಲಿ;
ನಮ್ಮ ಕಷ್ಟಗಳಿಂದ ನಮ್ಮನ್ನು ಪಾರುಮಾಡಲಿ.
(ಜನ ಹೋಗುವರು)

(ಥೀಬ್ಸ್ ನಗರದ ಮೇಳದ ಪ್ರವೇಶ)

ಮೇಳ : ಥೀಬ್ಸ್ ಪಟ್ಟಣದಲ್ಲಿ, ಸೂರ್ಯಪ್ರಕಾಶದಲ್ಲಿ ಮಿಂದ ನಗರದಲ್ಲಿ
ಸ್ವರ್ಣ ದೇವಾಲಯದಿಂದ ಸ್ವರ್ಗದ ವಾಣಿ ಹೊರಡಲಿದೆ.
ಭಯದಿಂದ ನನ್ನೆದೆ ಒಡೆಯುತ್ತಿದೆ. ದೇವವಾಣಿ ಎಂಥದೋ,
ಎಂದು ದಿಕ್ಕೆಟ್ಟಿದ್ದೇನೆ. ಓ, ಸಾಂತ್ವನಕಾರ ದಿಲಾಸ್, ಕೇಳು!
ಭಯ ನಮ್ಮನ್ನು ಮುತ್ತುತ್ತಿದೆ. ನೀನು ಏನನ್ನು ನೀಡುವೆ?
ಹೊಸತನ್ನೋ? ಋತುಗಳೊಂದಿಗೆ ಸುತ್ತಿ ಬರುವ ಅದೇ
ಹಳೆಯದನ್ನೋ? ನನ್ನೊಂದಿಗೆ ಮಾತಾಡು, ಓ ಆಶಾದೇವತೆ,
ಬಾ, ಚಿರಂತನ ಮಾತೇ.

ಅವಿನಾಶಿ ಅಥೆನ್ಸ್ ದೇವತೆ, ಸ್ಯೂಸ್‌ಪುತ್ರಿ, ನಿನ್ನಲ್ಲಿ
ಮೊರೆಯಿಡುತ್ತಿದ್ದೇನೆ. ಮತ್ತು ಈ ಪುರಸಿಂಹಾಸನಾರೂಢೆ,
ನಿನ್ನ ಸೋದರಿ ಆರ್ಟಿಮಿಸ್ ಕುರಿತು ಕೇಳುತ್ತಿದ್ದೇನೆ:
ನಿಮ್ಮ ಶಕ್ತಿತ್ರಯವನ್ನು ತೋರಿ, ಈಗ—
ಹಿಂದೊಮ್ಮೆ ತೋರಿದಂತೆ, ಬೆಂಕಿ ಬೇನೆಗಳಿಂದ
ನಮ್ಮನ್ನು ರಕ್ಷಿಸಿ, ನಮ್ಮನ್ನು ಶುದ್ಧೀಕರಿಸಿ.

ಮಾತು ಮೀರಿದ ಶೋಕ
ಮದ್ದು ಅರಿಯದ ರೋಗ
ಬುವಿಯ ಬೀಳುಗೊಳಿಸುವ ಜಾಡ್ಯ,
ಬಂಜೆ ನೋವಿನ ಬೇನೆ
ಜೀವ ಜೀವದ ಹಿಂದೆ ಬೇಕಿಯ ತೊರೆದು
ಹಾರುತ್ತಿದೆ ಘೋರ ಕತ್ತಲಿಗೆ.

ಬಣ್ಣನೆಗೆ ನಿಲುಕದಿದೆ
ಪುರದ ರಸ್ತೆಗಳಲ್ಲಿ
ಕೊಳೆವ ಹೆಣಗಳ ನಾತ;
ರಾಶಿ ಬೀಳುವ, ಮತ್ತೆ
ಮತ್ತೆ ಕೊಳೆಯುವ ಪ್ರೇತ :

ಥೀಬ್ಸ್ ಪುತ್ರರ ಮರಣಕ್ಕೆ
ಶೋಕದಾಚರಣೆ
ಅನುಕಂಪೆಗೆದೆಯಿಲ್ಲ ;
ದೇವ ಪೀಠಗಳೆದುರು
ಅಳುವ ಹೆತ್ತ ಕರುಳು

ಸಾವಿನ ದೈತ್ಯ ಜೀವ ಕೋಟಿಯ ಹೊತ್ತು ಹಾರಾಡುತ್ತ
ಕಂಚುಗಳ ಕಿಂಕಿಣಿಯಿಲ್ಲ ; ಆದರೆ ಯುದ್ಧ ಸಾಗಿದೆ ಸುತ್ತ.
ಓ ದೇವ,
ಕಡಲ ಮೂಲೆಗೆ, ಉತ್ತರದ ಕೊಲ್ಲಿಗೆ ಎಸೆ ಅವನ ಶತ್ರುಗಳ ;
ಹೊಡೆದು ಉರುಳಿಸಲೆಂದು ಕಳಿಸಯ್ಯ ಸಿಡಿಲುಗಳ.

ಹಗಲ ಹಿಂಸೆ ಇರುಳ ಯಾತನೆಯಾಗಿದೆ ಸ್ಯೂಸ್,
ಸ್ವರ್ಣಧನುಸ್ಸಿನಿಂದ ಕತ್ತರಿಸು ಲೈಸಿಯಸ್ ;
ಗಿರಿಯ ಸಿರಿ ಆರ್ಟೆಮಿಸ್, ಹರಿತಬಾಣಗಳಿಂದ
ಮನುಕುಲದ ಅರಿಯನ್ನು ತರಿದುಹಾಕು

ಓ ರಕ್ತದೇವತೆ, ಓ ಹೇಮಕಿರೀಟಿ,
ಮೆನಾದ್ ನೃತ್ಯಸಂಭ್ರಮಗಳ ನಾಯಕ ಬ್ಯಾಕಸ್, ಬಾ,
ಎರಗು ಸಾವಿನ ಮೇಲೆ, ಆ ಪ್ರಾಣವೈರಿಯ ಮೇಲೆ,
ಬಾ, ಸುರ ಶತ್ರು ಕಾಲನ ಮೇಲೆ ಅಪ್ಪಳಿಸು.

(ಅರಮನೆಯಿಂದ ಈಡಿಪಸ್ ಪ್ರವೇಶ)

ಈಡಿಪಸ್ : ನೀವು ಪ್ರಾರ್ಥಿಸಿದ್ದೀರಿ. ನಿಮ್ಮ ಪ್ರಾರ್ಥನೆ ಈಡೇರಿ
ನಿಮ್ಮ ಉದ್ಧಾರ ಆಗಬೇಕಿದ್ದರೆ ಈ ಸಮಸ್ಯೆಗೆ
ತಕ್ಕಂತೆ ವರ್ತಿಸಿ. ನಿಮಗೆ ವಿಮೋಚನೆ ದೊರೆಯುತ್ತದೆ.

ಇವತ್ತಿನವರೆಗೆ ಈ ಸಂಗತಿ ನನಗೆ ಗೊತ್ತಿರಲ್ಲಿಲ್ಲ. ಈ
ದೂರಿನಿಂದ ದೂರವಿದ್ದೆ ನಾನು ; ಮಾಹಿತಿಯಿಲ್ಲದೆ
ಕೊಲೆಪಾತಕಿಯನ್ನು ಪತ್ತೆ ಹಚ್ಚಲು ಹೇಗೆ ಸಾಧ್ಯ ?
ಆದರೆ ಈಗ ಸ್ನೇಹಿತರೆ, ಈ ವೃತ್ತಾಂತ ತಿಳಿದ ಬಳಿಕ,
ಈ ದೇಶದ ಪ್ರಜೆಗಳಲ್ಲಿ ಪ್ರಜೆಯಾಗಿ ಘೋಷಿಸುತ್ತಿದ್ದೇನೆ.
ಕೇಳಿ :
ನಿಮ್ಮಲ್ಲಿ ಯಾವನಿಗಾದರೂ ಈ ಕೊಲೆ ಗೊತ್ತಿದ್ದರೆ—ಲಾಯಿಸ್
ಸತ್ತ ಸಂಗತಿ ತಿಳಿದಿದ್ದರೆ, ಅಂಥವನು ಕೂಡಲೆ ನನಗೆ
ಹೇಳಬೇಕು. ಎಲ್ಲ ಭಯ ತೊರೆದು ನನಗೆ ಒಪ್ಪಿಸಬೇಕು.
ಅಂಥವನು ನೆನಪಿಡಲಿ : ಹೇಳುವುದರಿಂದ ಅವನಿಗೆ
ಯಾವ ಶಿಕ್ಷೆಯೂ ಇಲ್ಲ ; ದೇಶಭ್ರಷ್ಟನಾಗಿ ಇಲ್ಲಿಂದ
ಆತ ತೊಲಗಬೇಕು ಮಾತ್ರ.
ಅಲ್ಲದೆ : ಯಾವನಿಗಾದರೂ ಈ ಕೊಲೆ
ವಿದೇಶದಲ್ಲಿ ಆದದ್ದೆಂದು ತಿಳಿದಿದ್ದರೂ ಆತ
ತೆಪ್ಪಗಿರಬೇಕಿಲ್ಲ ; ಅವನಿಗೆ ನನ್ನ ಮನ್ನಣೆ, ಬಹುಮಾನವಿದೆ.

(ಮತ್ತೂ ಮೌನ)

ಆದರೆ ಯಾವನಾದರೂ ಈ ವಿಷಯ ಬಚ್ಚಿಟ್ಟುಕೊಂಡರೆ,
ಯಾವುದೇ ಕಾರಣದಿಂದ ಈ ನನ್ನ ಆಜ್ಞೆ ಉಲ್ಲಂಘಿಸಿದರೆ,
ನಾನೇನು ಮಾಡುವೆ ಕೇಳಿ :
ಈ ದೇಶದ, ಈ ನನ್ನ ಪ್ರಭುತ್ವದ ಪ್ರಜೆಗಳು
ಯಾರೂ ಅಂಥವನ ಜೊತೆ ಸೇರಕೂಡದು ;
ಮಾತಾಡಕೂಡದು ; ಪ್ರಾರ್ಥನಾ ಸಭೆಗಳಲ್ಲಿ ಅವನಿಗೆ
ಸ್ಥಳವಿರಕೂಡದು ; ಅಂಥವನು ಭ್ರಷ್ಟತೆಯ
ಪ್ರತೀಕವಾದ್ದರಿಂದ ಡೆಲ್ಫಿಯ ದೇವವಾಣಿ ಇದನ್ನು ಪ್ರಕಟಿಸಿದೆ ;
ಆದ್ದರಿಂದ ಅಂಥವನು ಪ್ರತಿ ಮನೆಯಿಂದ, ಪ್ರತಿ ಹಬ್ಬದಿಂದ
ಉಚ್ಚಾಟಿತನಾಗಬೇಕು. ಮತ್ತು, ಆ ಕೊಲೆಪಾತಕಿ
ಮತ್ತು ಅನುಚರರ ಜೀವವಿರುವವರೆಗೆ ಅವಹೇಳನ
ಬೆನ್ನುಹತ್ತಿ ಕಾಡಬೇಕು. ನಾನು ಕೂಡ ಆಜ್ಞೆಯಿಂದ ಹೊರಗಲ್ಲ :
ನಾನು ಗೊತ್ತಿದ್ದು ಅಥವಾ ಗೊತ್ತಿಲ್ಲದೆ ಆ ಪಾಪಿಯನ್ನು
ಮನೆಯೊಳಗೆ ಬರಮಾಡಿಕೊಂಡರೆ ನನಗೆರಗಲಿ ಶಾಸನ ;

ಆದ್ದರಿಂದ ನೀವು ನೆನಪಿಡಿ :
ನನಗಾಗಿ, ನನ್ನ ಈ ಪಾಪಪೀಡಿತ ನಗರಕ್ಕಾಗಿ
ಅಪಾಲೋ ದೇವತೆಗಾಗಿ ಈ ಕೆಲಸ ಕೈಗೊಳ್ಳಿ :
ನನಗೆ ಆಶ್ಚರ್ಯವಾಗಿದೆ, ದೇವವಾಣಿ ನಿಮಗೆ
ಅಜ್ಞೆ ವಿಧಿಸುವ ಮುನ್ನವೇ, ದೇಶದ ಸೂತಕ ಸಹಿಸಿದ್ದು
ಕಂಡು ಬೆರಗಾಗಿದ್ದೇನೆ. ಇಲ್ಲ, ಕೊಲೆಪಾತಕಿಗಾಗಿ ನೀವು
ಹುಡುಕಬೇಕಿತ್ತು ; ನಿಮ್ಮ ಉದಾರ ದೊರೆಗಾಗಿ
ಹುಡುಕಬೇಕಿತ್ತು.
ಈಗ ನಾನು,
ನಿಮ್ಮ ಸ್ವರ್ಗಸ್ಥ ದೊರೆಯ ಅಧಿಕಾರದಲ್ಲಿರುವಾತ,
ಅವನಿದ್ದಿದ್ದರೆ ಅವನಂತೆ ನನ್ನ ಹೆಂಡತಿಗೆ ಗಂಡನಾಗಿರುವಾತ,
ಅವನ ಮಕ್ಕಳು ನನ್ನವರ ಸೋದರರಾಗಿರುತ್ತಿದ್ದರಾದ್ದರಿಂದ,
ನಾನೀಗ ಘೋಷಿಸುತ್ತೇನೆ : ಅವನ ಮಗನೋ ಎಂಬಂತೆ ನಾನು
ಆತನಿಗಾಗಿ ಸಂಗ್ರಾಮ ಹೂಡುತ್ತೇನೆ ; ಇದರಲ್ಲಿ ಖಂಡಿತ
ವಿಜಯ ಗಳಿಸುತ್ತೇನೆ ; ಅವನ ವಂಶವನ್ನು ಮುಗಿಸಿದವನ
ಪ್ರಾಣ ಕಿತ್ತೆಸೆಯುತ್ತೇನೆ.

ಆ ಕೊಲೆಪಾತಕಿಗೆ ದೇವರು ಈ ಭೂಮಿಯ ಫಲ ಕೊಡದಿರಲಿ ;
ಸ್ತ್ರೀಗರ್ಭದ ಫಲ ದಕ್ಕದೆ ಕೊಳೆತುಹೋಗಲಿ ;
ನಮ್ಮ ನಾಡಿನಂತೆ ಕ್ಷೋಭೆಗೊಳಗಾಗಿ ಆ ಪಾಪಿಷ್ಠ ನಾಶವಾಗಲಿ !

ಜನರೆ, ಪ್ರಾಮಾಣಿಕ ಥೀಬ್ಸ್ ಪ್ರಜೆಗಳೆ,
ನನ್ನ ಕ್ರಮವನ್ನು ಸಮರ್ಪಕವೆಂದು ಒಪ್ಪುವ ನಾಗರಿಕರೆ,
ನಿಮ್ಮಿಂದ ನ್ಯಾಯವನ್ನು ಕೋರುತ್ತೇನೆ ; ಮೇಲಿನ
ನಮ್ಮ ದೇವತೆಗಳಿಂದ ನ್ಯಾಯ ಬೇಡುತ್ತೇನೆ.

ಮೇಳದವ : ನಿನ್ನ ಪ್ರತಿಜ್ಞೆಯನ್ನು ಕೇಳಿ ಹೇಳುತ್ತಿದ್ದೇನೆ, ಈಡಿಪಸ್ :
ನಾನು ಅಂಥವನಲ್ಲ, ಅಂಥವನನ್ನು ತೋರುವ ಶಕ್ತಿಯೂ ನನಗಿಲ್ಲ.
ಆದರೆ, ಈ ಶೋಧನೆಗೆ ಹಚ್ಚಿದ ಡೆಲ್ಫಿಯ ದೇವರೇ
ಕೊಲೆಗಡುಕನನ್ನೂ ಸೂಚಿಸಲಾರನೇಕೆ ?

ಈಡಿಪಸ್ : ಅದು ಪ್ರಾಮಾಣಿಕ ಪ್ರಶ್ನೆ, ಆದರೆ ಈ ಜಗತ್ತಿನ
ಯಾವ ಮನುಷ್ಯನೂ ದೇವತೆಗಳಿಗೆ ಆಜ್ಞೆ ಮಾಡಿ

ಅವರು ಮಾಡಿದ್ದಕ್ಕಿಂತ ಹೆಚ್ಚು ಮಾಡಿಸಲಾರ.

ಮೇಳದವ : ಹಾಗಾದರೆ ಕಟ್ಟಕಡೆಯ ಮಾರ್ಗ—

ಈಡಿಪಸ್ : ಹೇಳು ಅದು ಎಷ್ಟು ಅಮುಖ್ಯವಾದರೂ
ನೀನದನ್ನು ವಂಚಿಟ್ಟುಕೊಳ್ಳಕೂಡದು.

ಮೇಳದವ : ಅಪಾಲೋ ದೇವತೆಯ ಭವಿಷ್ಯವಾದಿ—
ನಮಗೆಲ್ಲ ಗೊತ್ತಿರುವಂತೆ —ಟೈರೀಸಿಯಸ್.
ಆತನಿಗೆ ಈ ರಹಸ್ಯವನ್ನೊಡೆಯಲು ಸಾಧ್ಯವಾದೀತು.

ಈಡಿಪಸ್ : ನಾನು ವ್ಯರ್ಥ ಕಾಲಹರಣ ಮಾಡುತ್ತಿಲ್ಲ.
ಕ್ರಿಯಾನ್ ಅವನ ವಿಷಯ ಹೇಳಿದ ; ಅವನಿಗೆ ಹೇಳಿಕಳಿಸಿದ್ದೇನೆ,
ಒಂದಲ್ಲ ಎರಡುಸಲ. ಆತ ಇನ್ನೂ ಬಾರದಿರುವುದು ಆಶ್ಚರ್ಯ.

ಮೇಳದವ : ಇನ್ನೊಂದು ವಿಚಾರ—ಹಳೆಯ ಸಂಗತಿ—ನಿರುಪಯುಕ್ತವಾಗಿ
ಕಾಣುತ್ತದೆ.

ಈಡಿಪಸ್ : ಹೇಳು, ಎಲ್ಲ ಸಂಗತಿಯಲ್ಲಿ ನನಗೆ ಆಸಕ್ತಿಯಿದೆ.

ಮೇಳದವ : ದೊರೆಯನ್ನು ಡಕಾಯಿತರು ಕೊಂದರಂತೆ.

ಈಡಿಪಸ್ : ಗೊತ್ತು, ಆದರೆ ಅದಕ್ಕೆ ಸಾಕ್ಷಿ ಇಲ್ಲ.

ಮೇಳದವ : ಆ ಕೊಂದವನಿಗೆ ಕೊಂಚವಾದರೂ ಭಯವಿದ್ದಿದ್ದರೆ
ನಿನ್ನ ರೋಷಕ್ಕೆ ಹೆದರಿ ತಪ್ಪಿಸಿಕೊಳ್ಳುತ್ತಿದ್ದ.

ಈಡಿಪಸ್ : ಅಂಥ ದೊಡ್ಡ ಅಪರಾಧಿ ರೋಷಕ್ಕೆ ಹೆದರಲಾರ.

(ಒಬ್ಬ ಹುಡುಗನೊಂದಿಗೆ ಟೈರೀಸಿಯಸ್ ಪ್ರವೇಶ)

ಮೇಳದವ : ಆದರೆ ಅವನನ್ನು ಹಿಡಿಯಬಲ್ಲವ ಟೈರೀಸಿಯಸ್ :
ಈತನೇ ಟೈರೀಸಿಯಸ್, ಈತನೇ ಪವಿತ್ರ ಪ್ರವಾದಿ,
ಎಲ್ಲರಂತಲ್ಲ, ಸತ್ಯಸ್ವರೂಪಿ ಈತ.

ಈಡಿಪಸ್ : ಟೈರೀಸಿಯಸ್ ; ದಾರ್ಶನಿಕ ; ಎಲ್ಲ ಗೂಢಗಳ ಭೇದಕ ;
ಕಲಿತ ಎಲ್ಲದರ, ಒಳಿತು ಕೆಡುಕೆಲ್ಲದರ
ಭೂಮಿ ಸ್ವರ್ಗದ ಎಲ್ಲ ಅವರ್ಣನೀಯ ಗೋಪ್ಯಗಳ
ಅರಿತ ಭವಿಷ್ಯಕಾರ :
ಕುರುಡನಾದರೂ ನಿನ್ನ ಎದೆಗೆ ತಾಗಿರಬೇಕು
ಈ ನಗರದ ಯಾತನೆ ; ಈ ವ್ಯಾಧಿಯಿಂದ ನೀನು ಮಾತ್ರ
ನಮ್ಮನ್ನು ರಕ್ಷಿಸಬಲ್ಲೆಯೆಂದು ನಾನು ಬಲ್ಲೆ.
ನಾನು ಕಳಿಸಿದ ದೂತ ನಿನಗೆ ತಿಳಿಸಿರಲಿಕ್ಕಿಲ್ಲ, ಅಲ್ಲವೆ ?

ದೇವ ಅಪಾಲೋ ನಮಗೆ ಹೇಳಿದ್ದಾನೆ : ಈ ನಾಡಿನ
ದೊರೆಯಾಗಿದ್ದ ಲಾಯಿಸ್‌ನ ಹಂತಕನನ್ನು
ಪತ್ತೆಹಚ್ಚುವ ತನಕ, ಆತನನ್ನು ನಾಶಗೊಳಿಸುವ ತನಕ,
ನಮ್ಮೆಲ್ಲರಿಗೆ ಸುಖ, ನೆಮ್ಮದಿ ಇಲ್ಲ.
ನೋಡಬಲ್ಲೆಯಾ ನೀನು
ಪಕ್ಷಿಮಾರ್ಗವ ತಿಳಿದು, ಭೂತಗರ್ಭವ ಹೊಕ್ಕು
ಹೇಗಾದರೂ ಮಾಡಿ ನಿನ್ನನ್ನು, ನಮ್ಮನ್ನು, ನಾಡನ್ನು
ಶುದ್ಧಗೊಳಿಸುವ ಪರಿಯ ? ನಾವು ನಿನ್ನ ಕೈಯಲ್ಲಿದ್ದೇವೆ :
ಸಂಕಷ್ಟದಲ್ಲಿರುವ ಜನಕ್ಕೆ ಸೌಖ್ಯ ನೀಡುವುದಕ್ಕಿಂತ
ದೊಡ್ಡ ಕರ್ತವ್ಯ ಇರಲಾರದು.

ಟೈರೀಸಿಯಸ್ : ಓ, ಜ್ಞಾನವೆಂಬುದು ಎಷ್ಟು ಭಯಂಕರ, ಅದರಿಂದ
ಉಪಯೋಗವಿಲ್ಲದಿದ್ದಾಗ ! ಇದನ್ನು ಅರಿತಿದ್ದ
ನಾನು ಯಾಕೆ ಮರೆತೆ ? ಯಾಕಾದರೂ ಇಲ್ಲಿಗೆ ಬಂದೆ ?

ಈಡಿಪಸ್ : ಏನು ತೊಂದರೆ ? ಯಾಕೆ ಸಪ್ಪಗಿದ್ದೀ ?

ಟೈರೀಸಿಯಸ್ : ಹೋಗಲು ನನಗೆ ಅನುಮತಿ ಕೊಡು. ನಿನ್ನ ಕರ್ಮ
ನೀನು ಅನುಭವಿಸು ; ನನ್ನದನ್ನು ನಾನು ಬದುಕುತ್ತೇನೆ.
ಅದು ಕ್ಷೇಮ. ನನ್ನ ಮಾತನ್ನು ನಂಬು.

ಈಡಿಪಸ್ : ಎಚ್ಚರಿಕೆ, ಗುರು, ಅದು ಯೋಗ್ಯ ಉತ್ತರವಲ್ಲ.
ಹೇಳಲು ನಿರಾಕರಿಸಿ ನಿನ್ನ ನಗರಕ್ಕೆ
ದ್ರೋಹ ಬಗೆಯುತ್ತೀ. ನಿರಾಕರಿಸಬೇಡ.

ಟೈರೀಸಿಯಸ್ : ಎಷ್ಟು ಮೋಹಕ ಮಾತು ! ಗುಣ ಕೂಡ ಹಾಗಿದ್ದಿದ್ದರೆ
ನಾನು ಹಿಂಜರಿಯುತ್ತಿರಲಿಲ್ಲ.

ಈಡಿಪಸ್ : ದೇವರ ಹೆಸರಲ್ಲಿ ಕೇಳುತ್ತಿದ್ದೇನೆ. ನಿನಗೆ ಗೊತ್ತಿರುವುದನ್ನು
ಬಚ್ಚಿಟ್ಟುಕೊಳ್ಳಬೇಡ. ನಾವು ಕೇಳುತ್ತಿದ್ದೇವೆ, ನಾವೆಲ್ಲ
ಬೇಡಿಕೊಳ್ಳುತ್ತಿದ್ದೇವೆ.

ಟೈರೀಸಿಯಸ್ : ಅವಿವೇಕಿಗಳು ನೀವೆಲ್ಲ. ಇಲ್ಲ, ನಾನು ಹೇಳುವುದಿಲ್ಲ.
ಈಗ ಅದು ನನ್ನ ದುರಂತ ; ಹೇಳಿದ ಮೇಲೆ ನಿನ್ನದು.

ಈಡಿಪಸ್ : ಏನು ? ನಿನಗೆ ಗೊತ್ತಿದೆ, ಆದರೂ ಹೇಳುವುದಿಲ್ಲವೇ ?
ನಮಗೆಲ್ಲ ದ್ರೋಹ ಬಗೆದು ದೇಶವನ್ನು ನಾಶಗೊಳಿಸುತ್ತೀಯಾ ?

ಟೈರೀಸಿಯಸ್ : ನನಗೆ ನಿನ್ನನ್ನಾಗಲಿ ನನ್ನನ್ನಾಗಲಿ ಹಿಂಸಿಸಲು ಇಷ್ಟವಿಲ್ಲ,
ಒತ್ತಾಯ ಯಾಕೆ ಮಾಡುತ್ತೀ ? ಒತ್ತಾಯಕ್ಕೆ ನಾನು ಮಣಿವವನಲ್ಲ.

ಈಡಿಪಸ್ : ಎಂಥ ಕ್ಷುಲ್ಲಕ, ಸಂಕುಚಿತ ಮುದುಕ ನೀನು !
ಕಲ್ಲಿನ ಸ್ಥೈರಣೆ ಕೂಡ ಪರೀಕ್ಷಿಸಬಲ್ಲೆ. ಒದರು !
ನಿನಗೇನು ಹೃದಯವಿಲ್ಲವೆ ?

ಟೈರೀಸಿಯಸ್ : ನನ್ನನ್ನು ಹೃದಯಹೀನ ಅನ್ನುತ್ತೀ, ನಿನ್ನದನ್ನು ನೀನು
ಮೊದಲು ನೋಡಿಕೋ,

ಈಡಿಪಸ್ : ಕೇಳಿ ಅವನ ಮಾತ! ಈ ಮಾತನ್ನು ಕೇಳಿ
ಈ ನಗರದ ಅವಮಾನವನ್ನು
ಕಂಡು ಎಂಥ ಸನ್ಯಾಸಿಗೆ ತಾನೆ ಸಿಟ್ಟು ಬರುವುದಿಲ್ಲ ?

ಟೈರೀಸಿಯಸ್ : ಹೇಳುವುದರಿಂದ ಏನು ಉಪಯೋಗ ? ಹೇಳಲಿ, ಬಿಡಲಿ,
ಆಗಬೇಕಾದ್ದು ಆಗೇ ಆಗುತ್ತದೆ.

ಈಡಿಪಸ್ : ಆಗಬೇಕಾದ್ದು ಆಗುವುದೇ ನಿಜವಾದರೆ
ನೀನು ಹೇಳಬೇಕಾದ್ದನ್ನು ಹೇಳಲೇಬೇಕು.

ಟೈರೀಸಿಯಸ್ : ಇಲ್ಲ, ನಾನು ಹೇಳುವುದಿಲ್ಲ, ಬೇಕಾದಷ್ಟು ಕೋಪಿಸಿಕೋ.

ಈಡಿಪಸ್ : ಕೋಪ ? ಯಾಕೆ ಕೋಪಿಸಬಾರದು ?
ನನಗೆ ಏನೆನ್ನಿಸುತ್ತದೆ, ಹೇಳಲೆ ?
ನೀನೇ ಹೊಂಚುಹಾಕಿದೆ, ನೀನೇ ಮಾಡಿದೆ, ನೀನೇ
ಕೈಯಾರ ಕೊಲ್ಲುವ ತನಕ ಹೋದೆ. ನಿನಗೆ
ಕಣ್ಣಿದ್ದಿದ್ದರೆ ನೀನು—
ನೀನೇ ಕೊಂದೆಯೆಂದು ನಾನು ಸಾಧಿಸಿ ತೋರಿಸುತ್ತಿದ್ದೆ.

ಟೈರೀಸಿಯಸ್ : ಹಾಗಾದರೆ,
ನಾನೂ ನಿನ್ನ ಮೇಲೆ ತಪ್ಪು ಹೊರಿಸುತ್ತೇನೆ ;
ನಿನ್ನ ಘೋಷಣೆಗೆ ನೀನು ಬದ್ಧನಾಗಲು ಸಿದ್ಧನಾಗು ;
ಇವತ್ತಿನಿಂದ ನೀನು
ಈ ಜನರೊಂದಿಗಾಗಲಿ ನನ್ನೊಂದಿಗಾಗಲಿ ಉಸಿರೆತ್ತಬೇಡ ;
ಈ ದೇಶದ ಸೂತಕಕ್ಕೆ ನೀನೇ ಕಾರಣ.

ಈಡಿಪಸ್ : ನಿನಗೆಷ್ಟು ಉದ್ಧಟತನ ! ಇಂಥ ಮಾತಾಡಿ
ನೀನು ತಪ್ಪಿಸಿಕೊಳ್ಳಬಲ್ಲೆ ಎಂದು ತಿಳಿದಿದ್ದೀಯ ?

ಟೈರೀಸಿಯಸ್ : ನಾನಾಗಲೇ ಸ್ವತಂತ್ರ. ಸತ್ಯ ನನ್ನನ್ನು ರಕ್ಷಿಸುತ್ತದೆ.

ಈಡಿಪಸ್ : ಇದು ಭವಿಷ್ಯ ಹೇಳುವ ಪರಿಯಲ್ಲ. ಈ ನಾಚಿಕೆಗೇಡಿತನ
ಯಾರು ಕಲಿಸಿದರು ?

ಟೈರೀಸಿಯಸ್ : ನೀನು. ಮಾತಾಡುವಂತೆ ನನ್ನನ್ನು ನೀನೇ ಒತ್ತಾಯಪಡಿಸಿದೆ.

ನನಗೆ ಇಷ್ಟವಿರಲಿಲ್ಲ.

ಈಡಿಪಸ್ : ಮತ್ತೊಮ್ಮೆ ಹೇಳು, ಎಲ್ಲ ಸ್ಪಷ್ಟವಾಗಲಿ.

ಟೈರೀಸಿಯಸ್ : ನಾನು ಹೇಳಿದ್ದು ಸ್ಪಷ್ಟವಿಲ್ಲವೆ ? ಮತ್ತೆ ಕೆಣಕುತ್ತೀಯ ?

ಈಡಿಪಸ್ : ಎಲ್ಲ ಅಸ್ಪಷ್ಟತೆ ತೊಲಗಬೇಕೆಂದು ನನ್ನ ಇಷ್ಟ. ಅದಕ್ಕೇ ಮತ್ತೆ ಹೇಳು.

ಟೈರೀಸಿಯಸ್ : ಹೇಳುವೆ ಕೇಳು : ನೀನು ಹುಡುಕುತ್ತಿರುವ ಕೊಲೆಪಾತಕಿ ನೀನೇ.

ಈಡಿಪಸ್ : ಇದು ಎರಡನೇ ಸಲ. ಇದಕ್ಕೆ ತಕ್ಕದ್ದು ಅನುಭವಿಸುತ್ತೀ—

ಟೈರೀಸಿಯಸ್ : ಇನ್ನಷ್ಟು ಬೇಕೆ ? ಮತ್ತಷ್ಟು ಕೋಪಗೊಳ್ಳಲು ಇಷ್ಟವೆ ?

ಈಡಿಪಸ್ : ಮನಸ್ಸಿಗೆ ಬಂದಷ್ಟು ಹೇಳು—ನಿನ್ನ ಹುಚ್ಚನ್ನ ಚೆಲ್ಲಿಕೋ.

ಟೈರೀಸಿಯಸ್ : ಹೇಳುತ್ತೇನೆ ಕೇಳು :
ನಿನಗೆ ಅತ್ಯಂತ ಪ್ರಿಯರಾದವರೊಂದಿಗೆ ನಾಚಿಕೆಬಿಟ್ಟು
ಬದುಕುತ್ತಿದ್ದೀ. ನಿನ್ನ ಪಾಪ ನಿನಗೆ ಗೋಚರಿಸುತ್ತಿಲ್ಲ.

ಈಡಿಪಸ್ : ಮತ್ತೆ ಮತ್ತೆ ಅದನ್ನೆ ಒದರುತ್ತ ಹೋಗುತ್ತಿದ್ದೀ.

ಟೈರೀಸಿಯಸ್ : ಹೇಳುತ್ತ ಹೋಗುತ್ತೇನೆ—ಸತ್ಯಕ್ಕೆ ನನ್ನ ರಕ್ಷಿಸುವ ಶಕ್ತಿ ಇರುವತನಕ.

ಈಡಿಪಸ್ : ಸತ್ಯಕ್ಕೆ ಶಕ್ತಿ ಇದೆ, ಆದರೆ ನಿನಗಲ್ಲ ;
ಕಣ್ಣಿಲ್ಲದ, ಬುದ್ಧಿ ಇಲ್ಲದ, ನಿನ್ನಂಥ ಅರುಳುಮರುಳನಿಗಲ್ಲ !

ಟೈರೀಸಿಯಸ್ : ನೀನು ಮರುಳ, ನಾನಲ್ಲ ;
ಇಲ್ಲಿರುವ ಪ್ರತಿಯೊಬ್ಬನೂ ಸದ್ಯದಲ್ಲೇ ನಿನ್ನ ಶಪಿಸದಿರಲಾರ.

ಈಡಿಪಸ್ : ಕೊನೆಯಿಲ್ಲದ ಕತ್ತಲಲ್ಲಿರುವ ಮುದುಕ ! ಇಂಥ
ಮಾತುಗಳಿಂದ ನನ್ನನ್ನಾಗಲಿ ಕಣ್ಣುಳ್ಳ
ಯಾವನನ್ನಾಗಲೀ ಅಲುಗಿಸಲಾರೆ.

ಟೈರೀಸಿಯಸ್ : ನಿಜ,
ನನ್ನಿಂದ ನಿನ್ನ ಪತನ ಸಾಧ್ಯವಿಲ್ಲ. ಅದು
ಅಪಾಲೋಗೆ ಸೇರಿದ್ದು ; ಆತ ಅದನ್ನು ಮಾಡುತ್ತಾನೆ.

ಈಡಿಪಸ್ : ಹೇಳು : ಇದು ಕ್ರಿಯಾನನ ತಂತ್ರವೋ
ನಿನ್ನ ಸ್ವಂತದ್ದೋ ?

ಟೈರೀಸಿಯಸ್ : ಕ್ರಿಯಾನನಲ್ಲ, ನೀನೇ ನಿನ್ನ ಶತ್ರು.

ಈಡಿಪಸ್ : ಐಶ್ವರ್ಯ, ಅಧಿಕಾರ, ರಾಜ್ಯಾಡಳಿತ ವೈಭವ,
ಇದಕ್ಕಾಗಿ ತಂತ್ರಕ್ಕೆ ಕುತಂತ್ರ, ಕುತ್ಸಿತ ಸ್ಪರ್ಧೆ.

ನಾನು ನಂಬಿದ ಕ್ರೆಯಾನ್, ನನ್ನ ಸ್ನೇಹಿತ ಕ್ರೆಯಾನ್,
ಜನ ಮನಸಾರೆ ಒಪ್ಪಿಸಿದ ನನ್ನ ಅಧಿಕಾರಕ್ಕಾಗಿ
ಪಿತೂರಿಕೋರನಾಗಬೇಕಾದರೆ, ನನ್ನ ಪದಚ್ಯುತಿಗೆ
ಯತ್ನಿಸಬೇಕಾದರೆ
ಅಸೂಯೆ ಎಷ್ಟು ಹೀನ, ಕ್ಷುದ್ರ ಇರಬೇಕು !
—ಈ ಅಂಗಹೀನ ಜ್ಯೋತಿಷಿಯನ್ನು ತಂದು, ಈ
ದರಿದ್ರ ಕಾಸುನೆಕ್ಕುವ ಖೊಟ್ಟಿ ದಾರ್ಶನಿಕನನ್ನು ತಂದು
ಲಾಭಕ್ಕೆ ಕಣ್ಣುಳ್ಳ, ಭವಿಷ್ಯಕ್ಕೆ
ಕುರುಡಾದ ಈತನನ್ನು ಕರೆತಂದು ಇದನ್ನು ವದರಿಸಬೇಕಾದರೆ !
ಹೇಳು :
ಎಂದಾದರೂ ನಿನ್ನ ಯೋಗಿಯ ಸೋಗು ಸತ್ಯಕ್ಕೆ ಹತ್ತಿರ
ಬಂದಿದೆಯೆ ? ಆ ನರಕನೇಯುವ ಸ್ಫಿಂಕ್ಸ್ ತನ್ನ
ಒಗಟು ಹೇಳುತ್ತಿದ್ದಾಗ
ನೀನು ಪ್ರಜೆಗಳಿಗೆ ಮಾಡಿದ ಸಹಾಯವೇನು ?
ನೀನೆಲ್ಲಿದ್ದೆ ? ಯಾಕೆ ಮೂಕನಾಗಿದ್ದೆ ? ಆಗ ಬೇಕಾದದ್ದು
ನಿಜವಾದ ದಾರ್ಶನಿಕಶಕ್ತಿ, ಮನುಷ್ಯ ಮಾತ್ರದ ಜಾಣತನವಲ್ಲ.
ಎಲ್ಲರೂ ಬಲ್ಲಂತೆ, ನಿನ್ನಲ್ಲಿ ಆ ಶಕ್ತಿ ಇರಲಿಲ್ಲ.
ಯಾವ ಪಕ್ಷಿಯೂ ಯಾವ ದೇವತೆಯೂ ನಿನಗೆ ನೆರವಾಗಲಿಲ್ಲ.
ಆದರೆ ನಾನು, ನಿನ್ನ ಪ್ರಕಾರ ಮೂರ್ಖನಾದ ನಾನು,
ನಿನ್ನದೆನ್ನುವ ಯಾವ ಶಕ್ತಿಯೂ ಇಲ್ಲದೆ ಬರಿಗೈಲಿ ಬಂದೆ;
ಆ ಸ್ಫಿಂಕ್ಸ್ ಬಾಯಿಬ್ಬೆ ನಿಲ್ಲಿಸಿದೆ. ಈಗ
ನನ್ನನ್ನು ಇಲ್ಲಿಂದ ಉಚ್ಚಾಟಿಸಲು ಎಣಿಸಿದ್ದೀ ;
ಕ್ರೆಯಾನನ ಸಿಂಹಾಸನದಡಿ ಜಾಗ ಗಿಟ್ಟಿಸಲು ಲೆಕ್ಕ
ಹಾಕಿದ್ದೀ. ನಿನಗೆ ಮತ್ತು ನಿನ್ನ ಜೊತೆಗಾರನಿಗೆ
ಇದರಿಂದ ತೊಂದರೆಯಾಗದೆಂದು ತಿಳಿದಿದ್ದೀ. ಕೇವಲ
ಮುದಿ ಹದ್ದು ನೀನು ; ಇಲ್ಲದಿದ್ದರೆ ಇಷ್ಟರಲ್ಲೇ
ನಿನಗೆ ಪಾಠ ಕಲಿಸಿರುತ್ತಿದ್ದೆ.

ಮೇಳದವ : ಈ ಜ್ಯೋತಿಷಿಯ ಮಾತು ಕೇವಲ ಕೋಪದ ಫಲ, ದೊರೆ,
ಅಂಥವೇ ನಿನ್ನವು ಕೂಡ. ಇದರಿಂದ ನಮಗೆ
ಉಪಯೋಗವಿಲ್ಲ. ಈಗ ಬೇಕಾದದ್ದು ಚಿಂತನೆ,
ದೇವರ ಇಚ್ಛೆ ಪೂರೈಸತಕ್ಕ ಯೋಜನೆ.

ಟೈರೀಸಿಯಸ್ : ನೀನು
ರಾಜ್ಯದ ಪ್ರಭು. ಆದರೆ ವಾದದಲ್ಲಿ ನನ್ನ ಸರಿಸಮಾನ;
ನಾನು ನಿನ್ನ ಗುಲಾಮನಲ್ಲ; ಪರಮಾತ್ಮನ ಸೇವಕ.
ನನಗೆ ಕ್ರೆಯಾನ್ ಪ್ರೋತ್ಸಾಹ ಬೇಕಿಲ್ಲ.
ನಾನೆನ್ನುವುದನ್ನು ಕೇಳು :
ನಾನು ಕುರುಡ ಎಂದು ಹೀಯಾಳಿಸುತ್ತಿದ್ದಿ, ಅಲ್ಲವೆ ?
ನನಗೆನ್ನಿಸುತ್ತದೆ : ನಿನಗೆ ಎರಡು ಕಣ್ಣಿದ್ದೂ ಕುರುಡನಾಗಿದ್ದೀ.
ನಿನ್ನ ಬದುಕಿನ ಅಧೋಗತಿ ನಿನಗೆ ಕಾಣಿಸುತ್ತಿಲ್ಲ, ನೀನು
ಯಾರ ಮನೆಯಲ್ಲಿರುವೆ, ಯಾರ ಜೊತೆಯಲ್ಲಿರುವೆ—ಇದೂ
ನಿನಗೆ ಗೊತ್ತಿಲ್ಲ. ನಿನ್ನ ಹೆತ್ತವರು ಯಾರು ಹೇಳಬಲ್ಲೆಯ ?
ನೀನವರಿಗೆ ಎಸಗಿದ ಅನ್ಯಾಯ ನಿನಗೆ ಕಾಣಿಸುತ್ತಿಲ್ಲ.
ಹೆತ್ತವರ ಘೋರ ಶಾಪ ನಿನ್ನನ್ನು ಈ ದೇಶದಿಂದ
ಚಾವಟಿಯಲ್ಲಿ ಝಾಡಿಸುತ್ತದೆ ; ನಿನ್ನ ಸುಂದರ ಕಣ್ಣು ಕಿತ್ತು
ಗಾಢಾಂಧಕಾರದಲ್ಲಿ ತಳ್ಳುತ್ತದೆ. ಆಗ ನಿನ್ನ ಬೊಬ್ಬೆ
ಜಗತ್ತಿನ ಯಾವ ಮೂಲೆಗೆ ತಟ್ಟದಿದ್ದೀತು ? ಹೆತ್ತವರ
ಮುತ್ತಿಡುವ ನಿನ್ನ ಮದುವೆಯ ಸತ್ಯ, ನಿನ್ನ
ಮರಣ ಮುದ್ರಿತ ಪ್ರೇಮಶಯ್ಯೆಯ ಸೌಖ್ಯ ಗೊತ್ತಾದಂದು
ಇಡೀ ಕಿಥಿರಾನ್ ಹೇಗೆ ಪ್ರತಿಧ್ವನಿಸದಿದ್ದೀತು ?
ಅಹಂಕಾರದಲ್ಲಿ ನೀನು ಅರಿಯದ ಅಸಂಖ್ಯ ಪಾಪಗಳು
ನಿನ್ನನ್ನು ಕೆಳಕ್ಕೆಳೆಯುತ್ತವೆ ; ನಿನ್ನನ್ನು ನಿನ್ನ ನಿಜವಾದ
ಮಟ್ಟಕ್ಕೆ ಮುಟ್ಟಿಸುತ್ತವೆ.
ಈಗ ಕ್ರೆಯಾನನನ್ನು ದೂಷಿಸು ; ನನ್ನನ್ನು ಮಾತುಗಳಿಂದ ಚುಚ್ಚು,
ಆದರೆ ನೆನಪಿಡು : ಈ ಜಗತ್ತಿನ ಯಾವನೂ
ನಿನ್ನಂತೆ ಭಯಂಕರವಾಗಿ ಬುಡಮೇಲಾಗಲು ಸಾಧ್ಯವಿಲ್ಲ.

ಈಡಿಪಸ್ : ಇದನ್ನೆಲ್ಲ ಸಹಿಸಬೇಕೆ ? ನಾನು ? ಈತನಿಂದ ?
ಹಾಳಾಗಿ ಹೋಗು ! ತೊಲಗು ಇಲ್ಲಿಂದ,
ನನ್ನೆದುರು ನಿಲ್ಲಬೇಡ, ತೊಲಗು.

ಟೈರೀಸಿಯಸ್ : ನಾನು ಬರುತ್ತಲೇ ಇರಲಿಲ್ಲ—ನೀನು ಕರೆಸದಿದ್ದರೆ.

ಈಡಿಪಸ್ : ಮೂರ್ಖನಂತೆ ಬಡಬಡಿಸುತ್ತೀ ಎಂದು ಗೊತ್ತಿದ್ದಿದ್ದರೆ
ನಾನು ಕರೆಸುತ್ತಿರಲಿಲ್ಲ.

ಟೈರೀಸಿಯಸ್ : ಮೂರ್ಖ ? ಆದರೆ ನಿನ್ನನ್ನು ಹೆತ್ತವರು

ನಾನು ಜಾಣ ಅಂದುಕೊಂಡಿದ್ದರು.

ಈಡಿಪಸ್ : ನನ್ನನ್ನು ಹೆತ್ತವರು ? ನಿಲ್ಲು ;
ನನ್ನನ್ನು ಹೆತ್ತವರು ಯಾರು ಹೇಳು.

ಟೈರೀಸಿಯಸ್ : ಈ ದಿನ ನಿನಗೆ ಜನ್ಮವಿತ್ತು ನಿನ್ನ ಎದೆಯನ್ನು
ಒಡೆಯುತ್ತದೆ !

ಈಡಿಪಸ್ : ನಿನ್ನ ಬಾಲಿಶ ಒಗಟುಗಳು ! ನಿನ್ನ ಸೂಕ್ಷ್ಮ
ನಿರರ್ಥಕಗಳು !

ಟೈರೀಸಿಯಸ್ : ನೀನೇ ಹೇಳಿದೆ, ಒಂದು ಕಾಲಕ್ಕೆ
ಎಲ್ಲ ಒಗಟುಗಳನ್ನು ಬಿಡಿಸುತ್ತಿದ್ದೆ, ಎಂದು ?

ಈಡಿಪಸ್ : ಹೀಯಾಳಿಸು. ಆದರೆ
ಅದು ಸತ್ಯವೆಂದು ನಿನಗೆ ಗೊತ್ತು.

ಟೈರೀಸಿಯಸ್ : ಸತ್ಯವೇನೋ ಹೌದು, ಆದರೆ
ನಿನ್ನ ನಾಶ ಅದರಿಂದಲೇ ಆದದ್ದು.

ಈಡಿಪಸ್ : ಆದರೆ ಈ ನಗರವನ್ನು ಉಳಿಸಿದ್ದು
ಆ ನನ್ನ ಒಗಟು ಬಿಡಿಸುವ ಶಕ್ತಿ.

ಟೈರೀಸಿಯಸ್ : (ಹುಡುಗನಿಗೆ) ಮಗೂ,
ನಿನ್ನ ಕೈ ತಾ.

ಈಡಿಪಸ್ : ಹುಡುಗ, ಆತನನ್ನು ಕರೆದುಕೊಂಡು ಹೋಗು.
ಹೋಗು ; ನೀನಿಲ್ಲಿರುವ ತನಕ ಯಾವ ಕೆಲಸವೂ ಆಗುವುದಿಲ್ಲ.
ನಮ್ಮ ಕೆಲಸಕ್ಕೆ ನೆಮ್ಮದಿ ಬೇಕು.

ಟೈರೀಸಿಯಸ್ : ಹೋಗುತ್ತೇನೆ :
ಹೇಳುವುದನ್ನು ಹೇಳಿ ಮುಗಿಸಿ ಹೋಗುತ್ತೇನೆ :
ನೀನು ಹೇಗೆ ನನ್ನ ಮನ ನೋಯಿಸಬಲ್ಲೆ ?
ಕೇಳು, ಮತ್ತೆ ಹೇಳುತ್ತೇನೆ :
ನಿತ್ಯವೂ ನೀನು ಹುಡುಕುತ್ತಿರುವ ಮನುಷ್ಯ, ಕೊಲೆಪಾತಕಿ,
ಲಾಯಿಸ್ ದೊರೆಯನ್ನು ಕೊಂದಾತ ಥೀಬ್ಸ್‌ನಲ್ಲೆ ಇದ್ದಾನೆ.
ಆತ ಬೇರೆ ದೇಶದಲ್ಲೆಲ್ಲೊ ಹುಟ್ಟಿದಾತ ಅಂದುಕೊಂಡಿದ್ದೀ—
ಆದರೆ ಆತ ಇಲ್ಲೇ ಜನಿಸಿದವನೆಂದು ನಿನಗೆ ಗೊತ್ತಾಗುತ್ತದೆ ;
ಸತ್ಯ ನಿನಗೆ ತಿಳಿಯುತ್ತದೆ.
ಆತನೊಬ್ಬ ಕುರುಡ,
ಆದರೀಗ ಅವನಿಗೆ ಕಣ್ಣಿದೆ ; ಚಿಕ್ಕಾಸಿಲ್ಲದ ದರಿದ್ರ ಆತ,

ಆದರೀಗ ಶ್ರೀಮಂತ ; ಆತ ಸದ್ಯದಲ್ಲೇ ಕುರುಡನಾಗಿ
ತನ್ನ ಕೋಲಿನಿಂದ ನೆಲ ಕುಟ್ಟುತ್ತ
ನಡೆಯಲಿದ್ದಾನೆ. ಈಗಿನ ಅವನ ಮಕ್ಕಳು ಅವನ
ಸೋದರರೆಂಬುದು ಅವನಿಗೆ ತಿಳಿಯುತ್ತದೆ ; ಅವನ
ಜೊತೆಗಾತಿ ಆತನ ತಾಯಿ ಮತ್ತು ಪತ್ನಿ.
ಆತನ ತಂದೆಯ ಹಾಸಿಗೆ ನೆನೆಸಿದ ಹೆಂಗಸು ಈಗ ಹೆಂಡತಿ.
ಸಾಕು. ಹೋಗು, ಇದನ್ನು ಮನದಲ್ಲಿ ಮಥಿಸು ;
ಬಳಿಕ, ನನ್ನ ಮಾತು ನಿನ್ನ ಪಾಲಿಗೆ ಸುಳ್ಳಾದರೆ
ನಾನೊಬ್ಬ ಖೊಟ್ಟಿ ಭವಿಷ್ಯಕಾರ ಎಂದು ತಿಳಿದುಕೋ.
(ಎಲ್ಲರ ನಿಷ್ಕ್ರಮಣ)

*　　　　*　　　　*

ಮೇಳ : ಹಳಿಯುತ್ತಿದೆ ದೇವವಾಣಿ ಡೆಲ್ಫಿಯ ಬಂಡೆಗಳಿಂದ
ಹೇಯ ಕೊಲೆಗಡುಕ ಪಾಪಿಯನ್ನ ;
ಗೊತ್ತೇನು ಆತ ?
ಓಡಲಿ ಆತ ವಾಯುವೇಗದ ಕುದುರೆಯ ಮೇಲೆ,
ಮಿಂಚು, ಜ್ವಾಲೆಯ ಕೂಡ ಸಾಗಿ ಸ್ಯೂಸ್ ಪುತ್ರ
ಹೊಡೆಯುವನು ಆತನ್ನ, ಇದು ಖಂಡಿತ ;
ವಿಧಿ ಅವನ ಅಟ್ಟುವದು, ಇದು ಖಂಡಿತ.

ಗಗನಚುಂಬಿತ ಪರ್ನಾಸಸ್ ಶಿಖರದಿಂದೇಳುವುದು
ಅವನ ಬೇಟೆಗೆ ಆಜ್ಞೆ.
ಅವನೆಲ್ಲಿ ಗೊತ್ತೇ ?
ತಪ್ಪಿಸಿಕೊಂಡ ಗೂಳಿಯ ಹಾಗೆ ಗುಡ್ಡ ಗುಹೆಯಲ್ಲಿರಲಿ,
ಹುಲ್ಲುಗಾಡಲ್ಲಿರಲಿ ; ಗೂಢಗೂಢಗಳಿಂದ ಕಿವಿಗೆ ಗಡಚಿಕ್ಕುವುದು,
ಚೀರುವುದು ದೇವವಾಣಿ.

ಭವಿಷ್ಯಕಾರ ಭಯಂಕರ ಮಾತಾಡಿದ್ದಾನೆ ;
ನಂಬಲಾರದೆ, ನಂಬದಿರಲಾರದೆ ನಮಗೆ ಕವಿದಿದೆ ಅಂಧಕಾರ ;
ಮಾತ ಮೀರಿದ ದಿಗಿಲು ಕವಿದುಬಿಟ್ಟಿದೆ—ಹೇಗೊ ನಾಳೆಯೆಂದು.
ಲ್ಯಾಬ್ಡಕಸ್ ವಂಶಕ್ಕೂ ಪಾಲಿಬಸ್ ವಂಶಕ್ಕೂ

ಇತ್ತ ಹಗೆತನ—ನಮಗೆ ಗೊತ್ತಿಲ್ಲ ;
ಆದ್ದರಿಂದ ಈಡಿಪಸ್ ಹೆಸರಿಗೆ ಮಸಿಬಳಿಯುವಂತಿಲ್ಲ.
ಎಲ್ಲ ಗುಟ್ಟುಗಳು ದೇವರಿಗೆ ಗೊತ್ತು ;
ಆದರೆ ಭವಿಷ್ಯ ಹೇಳುವ ಮಂದಿ ಬೇರೆಬೇರೆ ವಿಧ.
ಯಾವುದೂ ಸ್ಪಷ್ಟ ತಿಳಿಯುತ್ತಿಲ್ಲ.
ಒಬ್ಬೊಬ್ಬ ಮಾನವಗೆ ಒಂದೊಂದು ಮಟ್ಟ, ಗುಣ ;
ತಪ್ಪು ತಿಳಿಯುವ ತನಕ ಅಲ್ಲಗಳೆವಂತಿಲ್ಲ.

ಒಮ್ಮೆ ಮಾಟಗಾತಿಯು ಗೆದ್ದ ಈಡಿಪಸ್
ಅಪರಂಜಿಯಂಥ ಖ್ಯಾತಿ ಪಡೆದ ; ಇಲ್ಲ,
ಅಂಥವನ ಕುರಿತು ಕೇಡೆಣಿಸುವಂತಿಲ್ಲ.

(ಕ್ರೆಯಾನ್ ಪ್ರವೇಶ)

ಕ್ರೆಯಾನ್ : ಥೀಬ್ಸ್ ನಾಗರಿಕರೆ,
ದೊರೆ ಈಡಿಪಸ್ ನನ್ನ ವಿರುದ್ಧ ದ್ರೋಹದ ಕಠೋರ
ಆಪಾದನೆ ಮಾಡಿದ್ದಾನೆಂದು ನನಗೆ ತಿಳಿದು ಬಂದಿದೆ.

ಇದನ್ನು ಸುಲಭವಾಗಿ ಸಹಿಸುವ ಮನುಷ್ಯ ನಾನಲ್ಲ.

ನಗರದ ಈ ಕಷ್ಟಕೋಟಲೆಗಳ ಪರಿಸ್ಥಿತಿಯಲ್ಲಿ
ನಾನು ನನ್ನ ಯಾವುದೇ ಮಾತು ಅಥವಾ ಕೃತಿಯಿಂದ
ಆತನಿಗೆ ಕೇಡು ಬಗೆದಿದ್ದರೆ ನನ್ನ ಬದುಕನ್ನು
ತೃಣವಾಗಿ ಕಾಣುವ ಮನುಷ್ಯ ನಾನು.

ಇದು ನನ್ನ ಯಾವೊಂದು ವೈಯಕ್ತಿಕ ದೋಷಕ್ಕೆ ಸಂಬಂಧಿಸಿದ್ದಲ್ಲ;
ತೀವ್ರ ಆತಂಕದ ವಿಷಯ ; ನಿಜ ಹೇಳಬೇಕೆಂದರೆ,
ನನ್ನ ರಾಷ್ಟ್ರದ ಬಗ್ಗೆ, ಜನರ ಬಗ್ಗೆ, ಜೊತೆಗಾರರ ಬಗ್ಗೆ
ನಾನು ದ್ರೋಹಿಯೆಂದು ಆಪಾದಿಸಲಾಗಿದೆ.

ಮೇಳದವ : ಆತ ಅದನ್ನು ಕೇವಲ ಕೋಪದ ಭರದಲ್ಲಿ
ಹೇಳಿರಬಹುದು ; ಹೃತ್ಪೂರ್ವಕ ಅಲ್ಲದಿರಬಹುದು.

ಕ್ರೆಯಾನ್ : ಆದರೆ,

ವೃದ್ಧ ಭವಿಷ್ಯಕಾರ ಸುಳ್ಳು ಹೇಳಲು
ನಾನು ಪ್ರೇರೇಪಿಸಿದೆನೆಂದು ಹೇಳಿದ್ದು
ನೀನೇ ಕೇಳಲಿಲ್ಲವೆ ?

ಮೇಳದವ : ಹೇಳಿದ್ದು ನಿಜ, ಆದರೆ
ಎಷ್ಟು ಮನಃಪೂರ್ಣ ಎಂದು ಹೇಳಲಾರೆ.

ಕ್ರೆಯಾನ್ : ನೀನವನನ್ನು ನೋಡುತ್ತಿದ್ದೆ. ಅವನ ಕಣ್ಣು
ನೆಟ್ಟಗಿದ್ದವೆ ? ಬುದ್ಧಿ ಸರಿಯಿದ್ದ ವ್ಯಕ್ತಿಯು ಹಾಗೆ
ಕೂಡನೆ ?

ಮೇಳದವ : ನನಗೆ ಗೊತ್ತಿಲ್ಲ
ಮಹಾವ್ಯಕ್ತಿಗಳ ವರ್ತನೆಯನ್ನು ವಿಮರ್ಶಿಸುವ
ಶಕ್ತಿ ನನಗಿಲ್ಲ, ಆದರೆ ದೊರೆಯೇ ಬಂದನಲ್ಲ !

(ಈಡಿಪಸ್ ಪ್ರವೇಶ)

ಈಡಿಪಸ್ : ಅಂತೂ ನೀನು,
ಮತ್ತೆ ಬರುವ ಧೈರ್ಯ ಮಾಡಿದೆ. ಯಾಕೆ ?
ನನ್ನ ಮನೆಗೆ ಕಾಲಿಡಬೇಕಾದರೆ ಎಂಥ ಲಜ್ಜೆಗೆಟ್ಟವ ನೀನು !
ಕೊಲೆಗಡುಕ !

ನೀನು ನನ್ನನ್ನು ಕೊಲ್ಲಲು ಹವಣಿಸಿದ್ದು, ಸಿಂಹಾಸನ
ಲಪಟಾಯಿಸಲು ಯತ್ನಿಸಿದ್ದು ನನಗೆ ಗೊತ್ತಿಲ್ಲ ಅಂದುಕೊಂಡೆಯ ?
ಹೇಳು, ದೇವರ ಮೇಲೆ ಆಣೆ ಮಾಡಿ ಹೇಳು !
ಇಂಥದನ್ನು ಸಾಧಿಸುವ ಕನಸು ಕಟ್ಟಲು ನಾನೇನು
ಮೂರ್ಖನೆ ? ಹೇಡಿಯೆ ?
ಮಾರ್ಜಾಲ ತಂತ್ರ ಅರಿಯದ ಪೆದ ನೆ ?
ನಿನ್ನನ್ನು ಎದುರಿಸಲಾರದ ಪುಕ್ಕಲ ಅಂದುಕೊಂಡೆಯ ?
ನೀನೇ ಮೂರ್ಖ ಕ್ರೆಯಾನ್, ಅಲ್ಲವೆ?
ಗೆಳೆಯರಿಲ್ಲದೆ, ಜನಬಲವಿಲ್ಲದೆ, ಸಿಂಹಾಸನದ ಆಶೆ
ಹೇಗೆ ಬಂತು ನಿನಗೆ ?
ಸಿಂಹಾಸನ ದಕ್ಕಿಸಿಕೊಳ್ಳುವ ದಾರಿ ಎರಡು :
ದಾನ ಇಲ್ಲವೆ ದಂಡ—
ಎರಡೂ ನಿನ್ನಿಂದ ಸಾಧ್ಯವಿಲ್ಲ.

ಕ್ರೆಯಾನ್ : ಈಗ ನಾನು ಹೇಳುವುದನ್ನು ಕೇಳು : ಮಾತಾಡಿದ್ದೀ ನೀನು,

ನನಗೆ ಮಾತಾಡಲು ಅವಕಾಶ ಕೊಡು ;
ನಿಜಸ್ಥಿತಿ ತಿಳಿದುಕೊಳ್ಳದೆ ನೀನು ತೀರ್ಮಾನಕ್ಕೆ ಬರಲಾರೆ.

ಈಡಿಪಸ್ : ಸುಂದರವಾಗಿ ಮಾತಾಡುತ್ತೀ. ಆದರೆ
ಇರುವುದೊಂದೇ ನಿಜಸ್ಥಿತಿ ;
ಅದನ್ನು ನನ್ನ ಕಡುವೈರಿಯಿಂದ ತಿಳಿಯಬೇಕಿಲ್ಲ.

ಕ್ರೆಯಾನ್ : ಅದನ್ನು ನಾನು ಅಲ್ಲಗಳೆಯುತ್ತೇನೆ.

ಈಡಿಪಸ್ : ನೀನು ಅಲ್ಲಗಳೆವುದನ್ನು ನಾನು ಅಲ್ಲಗಳೆಯುತ್ತೇನೆ.

ಕ್ರೆಯಾನ್ : ಎಲ್ಲ ವಿವೇಕಕ್ಕೆ ವಿರುದ್ಧ
ಹಠ ಮಾಡುವುದು ಒಳ್ಳೆಯದೆಂದು ನೀನು ತಿಳಿದಿದ್ದರೆ,
ಅದು ತಪ್ಪೆಂದು ನಾನು ಹೇಳುತ್ತೇನೆ.

ಈಡಿಪಸ್ : ನೀನು ನಿನ್ನವರ ಬಗ್ಗೆ
ವಂಚನೆ ಮಾಡಿ ಶಿಕ್ಷೆಯಿಂದ ತಪ್ಪಿಸಿಕೊಳ್ಳಬಲ್ಲೆ, ಎಂದು
ತಿಳಿದಿದ್ದರೆ—ನಿನಗೆ ಹುಚ್ಚು ಹಿಡಿದಿರಬೇಕು.

ಕ್ರೆಯಾನ್ : ಒಪ್ಪಿದೆ. ಹೇಳು, ನಾನು ನಿನಗೆ ಮಾಡಿದ್ದಾದರೂ ಏನು ?

ಈಡಿಪಸ್ : ಆ ಜಾದೂಗಾರನನ್ನ ಕರೆಸಲು ನೀನು ಸೂಚಿಸಿದೆ, ಅಲ್ಲವೆ ?

ಕ್ರೆಯಾನ್ : ಸೂಚಿಸಿದೆ ; ಮತ್ತೆ ಸೂಚಿಸಬಯಸುತ್ತೇನೆ.

ಈಡಿಪಸ್ : ಸರಿ. ಹಾಗಾದರೆ ಹೇಳು,
ಲಾಯಿಸ್ ಸತ್ತ ಮೇಲೆ—

ಕ್ರೆಯಾನ್ : ಇದೇನು ಇದ್ದಕ್ಕಿದ್ದಂತೆ ಲಾಯಿಸ್ ಬಗ್ಗೆ ?—

ಈಡಿಪಸ್ : ಆ ಹೆದ್ದಾರಿಯ ದರೋಡೆಯಿಂದಾಗಿ
ಲಾಯಿಸ್ ಕಣ್ಮರೆಯಾದಮೇಲೆ—

ಕ್ರೆಯಾನ್ : ಅದು ಹಿಂದೆ, ಬಹಳ ಕಾಲದ ಹಿಂದೆ.

ಈಡಿಪಸ್ : ಈ ಜ್ಯೋತಿಷಿ ಆಗ ಇಲ್ಲಿದ್ದನೆ ? ಜ್ಯೋತಿಷ್ಯ ಹೇಳುತ್ತಿದ್ದನೆ ?

ಕ್ರೆಯಾನ್ : ಇದ್ದ, ಈಗಿನಂತೆಯೇ ಖ್ಯಾತ ಜ್ಯೋತಿಷಿಯಾಗಿದ್ದ.

ಈಡಿಪಸ್ : ಆಗ ನನ್ನ ಬಗ್ಗೆ ಮಾತಾಡಿದನೆ ಈತ ?

ಕ್ರೆಯಾನ್ : ಇಲ್ಲ, ನನ್ನ ಎದುರಿಗಂತೂ ಆತ
ನಿನ್ನ ಬಗ್ಗೆ ಮಾತಾಡಿರಲಿಲ್ಲ.

ಈಡಿಪಸ್ : ಆದರೆ—ವಿಚಾರಣೆ, ಆಗಲೆ
ನೀನು ತಿಳಿಸಿದ ವಿಚಾರಣೆ ನೀನು ನಡೆಸಿದೆ, ಅಲ್ಲವೆ ?

ಕ್ರೆಯಾನ್ : ನಡೆಸಿದೆ. ಆದರೆ ಅದರಿಂದ ಏನೂ ಗೊತ್ತಾಗಲಿಲ್ಲ.

ಈಡಿಪಸ್ : ಈ ಜ್ಯೋತಿಷಿ

ಆಗ ನನ್ನ ಬಗ್ಗೆ ಯಾಕೆ ಮಾತಾಡಲಿಲ್ಲ ?

ಕ್ರಿಯಾನ್ : ನನಗೆ ಗೊತ್ತಿಲ್ಲ. ಅಲ್ಲದೆ, ಸತ್ಯಸಂಗತಿ
ಗೊತ್ತಿಲ್ಲದಾಗ ನಾಲಗೆ ಬಿಗಿಹಿಡಿವ ಮನುಷ್ಯ ನಾನು.

ಈಡಿಪಸ್ : ಆದರೆ ಒಂದು ಸಂಗತಿ ನಿನಗೆ ಗೊತ್ತಿತ್ತು ;
ಅದನ್ನು ನೀನು ಹೇಳಬಹುದಿತ್ತು.

ಕ್ರಿಯಾನ್ : ಯಾವುದದು ? ನನಗೆ ಗೊತ್ತಿದ್ದರೆ ನಿನ್ನೆದುರು
ಇಡುತ್ತೇನೆ.

ಈಡಿಪಸ್ : ನಿನಗೆ ಅವನೊಂದಿಗೆ ಸಂಬಂಧ ಇಲ್ಲದಿದ್ದರೆ ಆತ
ನಾನೇ ಲಾಯಿಯಸ್ ಕೊಂದದ್ದೆಂದು ಹೇಳುತ್ತಿರಲಿಲ್ಲ.

ಕ್ರಿಯಾನ್ : ಈಗ ಆತ ಅದನ್ನು ಹೇಳುತ್ತಿದ್ದರೆ, ಗೊತ್ತಿರಬೇಕಾದ್ದು ನಿನಗೆ !
ಈಗ ನಿನ್ನನ್ನು ಪ್ರಶ್ನಿಸಬೇಕಾದವನು ನಾನು.

ಈಡಿಪಸ್ : ಬೇಕಾದ್ದು ಕೇಳಿಕೋ. ನಾನು ಕೊಲೆ ಮಾಡಿದವನಲ್ಲ.

ಕ್ರಿಯಾನ್ : ಮೊದಲನೆಯದಾಗಿ : ನೀನು ನನ್ನ ಸೋದರಿಯನ್ನು
ಮದುವೆಯಾದೆ, ಅಲ್ಲವೆ ?

ಈಡಿಪಸ್ : ನಿನ್ನ ಸೋದರಿಯನ್ನು ಮದುವೆಯಾದದ್ದು ನಿಜ.

ಕ್ರಿಯಾನ್ : ಅವಳೊಂದಿಗೆ ನೀನು
ಭಾಗಿಯಾಗಿ ರಾಜ್ಯಭಾರ ನಡೆಸುತ್ತೀ, ಅಲ್ಲವೆ ?

ಈಡಿಪಸ್ : ಅವಳಿಗೆ ಬೇಕಾದದ್ದನ್ನೆಲ್ಲ ನಾನು ಕೊಟ್ಟಿದ್ದೇನೆ.

ಕ್ರಿಯಾನ್ : ನಾನು ಮೂರನೆಯ ಪಾಲುದಾರ ;
ನಿಮ್ಮಿಬ್ಬರ ಆಡಳಿತದಲ್ಲಿ ಭಾಗಿಯಾದವನು, ಅಲ್ಲವೆ ?

ಈಡಿಪಸ್ : ಅದಕ್ಕೇ ನಾನು ನಿನ್ನನ್ನು ಕೆಟ್ಟ ಸ್ನೇಹಿತ ಅನ್ನುವುದು.

ಕ್ರಿಯಾನ್ : ಅಲ್ಲ, ಇದನ್ನು ಕೂಲಂಕಷವಾಗಿ ಯೋಚಿಸು, ನನ್ನ ಹಾಗೆ.
ಮೊದಲನೆಯದಾಗಿ ನೋಡು : ಬುದ್ಧಿಯುಳ್ಳ ಯಾವನಾದರೂ
ತನಗೆ ಸಾಕಷ್ಟು ಅಧಿಕಾರವಿದ್ದಾಗ ಚಕ್ರವರ್ತಿಯ ವೇದನೆ
ಬಯಸಿ ನಿದ್ರೆ ಕಳೆದುಕೊಳ್ಳುತ್ತಾನೆಯೆ ? ನಾನಂತೂ ಅಂಥವನಲ್ಲ.
ನಾನೆಂದೂ ದೊರೆಯ ಅಧಿಕಾರಕ್ಕೆ ಆಶೆಪಟ್ಟಿಲ್ಲ ; ಆತನ
ಹಕ್ಕು ಮಾತ್ರ ನನಗೆ ಸಾಕು. ವಿವೇಕಿಯಾದ ಯಾವನಾದರೂ
ಇದನ್ನು ತಪ್ಪೆನ್ನುತ್ತಾನೆಯೋ ?
ಈಗ ಇರುವಂತೆಯೋ ನನಗೆ ಪ್ರಭಾವವಿದೆ, ನಿನ್ನಿಂದಾಗಿ.
ರಾಜನ ಚಿಂತೆ, ಜವಾಬ್ದಾರಿ ಇಲ್ಲ. ನಾನೇ ರಾಜನಾಗಿದ್ದರೆ
ಮುತ್ಸದ್ದಿತನದ ಗುಲಾಮನಾಗಿರಬೇಕಾಗುತ್ತಿತ್ತು.

ನನಗಿರುವುದನ್ನು ಬಿಟ್ಟು ರಾಜದಂಡಕ್ಕಾಗಿ ಏಕೆ ಕೈಚಾಚಲಿ ?
ನಿರಾಯಾಸ ಅಧಿಕಾರವಿದೆ. ಇಲ್ಲ, ಹುಚ್ಚ ಅನ್ನಬೇಡ ;
ನನಗೆ ರಾಜಮರ್ಯಾದೆ ಬೇಡ. ಈಗಿನದಕ್ಕಿಂತ ಕಿಂಚಿತ್ತು ಹೆಚ್ಚು
ಬೇಡ.

ಪ್ರತಿಯೊಬ್ಬನೂ ನನಗೆ ನಮಸ್ಕರಿಸುತ್ತಾನೆ ; ರಾಜನಿಂದ
ಆಗಬೇಕಾದ್ದನ್ನು

ನನ್ನ ಮೂಲಕ ಮಾಡಿಸುತ್ತಾನೆ ;
ಅವರಿಗೆ ಬೇಕಾದ ನೆರವು ನೀಡುವ ಮಾರ್ಗ ಬಲ್ಲೆ ನಾನು.
ಈ ನಿರುಮ್ಮಳ ಸ್ಥಿತಿಗೆ ಬದಲು ನಿನ್ನ ಗೋಳಿಗಾಗಿ ಆಶೆಪಡಲೆ ?

ಅಲ್ಲದೆ : ಯಾವ ಆರೋಗ್ಯವಂತ ಮನಸ್ಸೂ ದ್ರೋಹ ಬಗೆಯುವು
ದಿಲ್ಲ ;

ನನಗೆ ಅರಾಜಕತ್ವ ಕಂಡರಾಗದು.
ಅದು ಬೇಕೆನ್ನುವವರ ವ್ಯವಹಾರ ಅಸಹ್ಯ ನನಗೆ.

ನನ್ನ ಮಾತು ಬೇಕಾದರೆ ಪರೀಕ್ಷಿಸು. ಹೋಗಿ ಡೆಲ್ಫಿಯ
ಅರ್ಚಕನನ್ನು ಕೇಳು.
ಮತ್ತೆ ನಿನ್ನ ಇನ್ನೊಂದು ಆಪಾದನೆಯ ಬಗ್ಗೆ :
ಆ ಟೈರೀಸಿಯಸ್‌ನೊಂದಿಗೆ ನಾನು ಪಿತೂರಿ ನಡೆಸಿದ್ದರೆ
ನನ್ನ ತಲೆದಂಡ ತೆಗೆದುಕೋ. ಇದು ನನ್ನ ವಾಗ್ದಾನ.
ನನ್ನ ತಪ್ಪಿದ್ದರೆ ಖಂಡಿತ ಮರಣದಂಡನೆ ವಿಧಿಸು ;
ಆದರೆ ಆಧಾರವಿಲ್ಲದೆ ಮಾತ್ರ ಖಂಡಿತ ಶಿಕ್ಷಿಸಲಾರೆ.

ಕಾಲಕ್ರಮೇಣ ನಿನಗೆ ಇದು ಚೆನ್ನಾಗಿ ತಿಳಿಯುತ್ತದೆ :
ವಂಚನೆಯನ್ನು ಒಂದೇ ದಿನದಲ್ಲಿ ಪತ್ತೆಹಚ್ಚಲು ಸಾಧ್ಯ,
ಆದರೆ ಪ್ರಾಮಾಣಿಕತೆಯನ್ನು ಕಾಲ, ಕಾಲಮಾತ್ರ ನಿರ್ಧರಿಸ
ಬಲ್ಲುದು.

ಮೇಳದವ : ಒಪ್ಪುವ ಮಾತು. ವಿವೇಕಿಯಾದವನು ಯೋಚಿಸತಕ್ಕ ಮಾತು ;
ಅವಸರದ ತೀರ್ಮಾನಗಳು ಅಪಾಯಕರವಾಗಬಲ್ಲವು.

ಈಡಿಪಸ್ : ಆದರೆ ಈತ ಕಪಟದಲ್ಲಿ ಮಿಂಚಿನ ಹಾಗೆ, ಅಲ್ಲವೆ ?
ನಾನು ಅಷ್ಟೇ ವೇಗದಿಂದ ಆತನ್ನ ಎದುರಿಸಬೇಕಲ್ಲವೆ ?

ಸುಮ್ಮನಿದ್ದು, ಶಾಂತವಾಗಿ ದುರ್ಬಲನಾಗಿದ್ದು ಈತ
ಎಲ್ಲದನ್ನು ಗೆಲ್ಲಲು ಬಿಡಬೇಕೆ ?

ಕ್ರಿಯಾನ್ : ಹಾಗಾದರೆ ನಿನಗೇನು ಬೇಕು ? ನನ್ನನ್ನು ದೇಶದಿಂದ ಉಚ್ಚಾಟಿಸುವುದೇ ?

ಈಡಿಪಸ್ : ಅಲ್ಲ, ಉಚ್ಚಾಟನೆಯಲ್ಲ. ನನಗೆ ಬೇಕಾದದ್ದು ನಿನ್ನ ತಲೆದಂಡ ; ಅದರಿಂದ ದ್ರೋಹದ ಫಲ ಜಗತ್ತಿಗೇ ಗೊತ್ತಾಗುತ್ತದೆ.

ಕ್ರಿಯಾನ್ : ಅದನ್ನೇ ಪಟ್ಟು ಹಿಡಿಯುತ್ತೀ ; ನನ್ನ ಮಾತು ನಂಬುವುದಿಲ್ಲ ?

ಈಡಿಪಸ್ : ಹೇಗೆ ನಿನ್ನನ್ನು ನಂಬಲು ಸಾಧ್ಯ ?

ಕ್ರಿಯಾನ್ : ನೀನೊಬ್ಬ ಮೂರ್ಖ.

ಈಡಿಪಸ್ : ನನ್ನನ್ನು ನಾನು ರಕ್ಷಿಸಿಕೊಂಡದ್ದರಿಂದ ?

ಕ್ರಿಯಾನ್ : ನ್ಯಾಯದ ಹಿತಕ್ಕಾಗಿ ನನ್ನ ಬಗ್ಗೆ ಯೋಚಿಸು.

ಈಡಿಪಸ್ : ನೀನು ದುಷ್ಟತನದ ಪ್ರತೀಕ.

ಕ್ರಿಯಾನ್ : ನಿನ್ನ ಅನ್ನಿಸಿಕೆ ತಪ್ಪಾಗಿದ್ದರೆ ?

ಈಡಿಪಸ್ : ಆದರೂ ನಾನು ರಾಜ್ಯಭಾರ ನಡೆಸಬೇಕು.

ಕ್ರಿಯಾನ್ : ಆದರೆ ನಿನ್ನದು ದುರಾಡಳಿತ ಆಗಿದ್ದಾಗಲೂ ಅಲ್ಲ.

ಈಡಿಪಸ್ : ಓ ನಗರವೇ, ಓ ನಗರವೇ !

ಕ್ರಿಯಾನ್ : ಇದು ನನ್ನ ನಗರ ಕೂಡ.

ಮೇಳದವ : ಪ್ರಭುಗಳೇ, ಸಾವಧಾನ, ಮಹಾರಾಣಿ ಬರುತ್ತಿರುವಂತಿದೆ—
ಯೊಕಾಸ್ತಾ ತನ್ನ ಅಂತಃಪುರದಿಂದ ಬರುತ್ತಿದ್ದಾಳೆ.
ನಿಮ್ಮಿಬ್ಬರ ಸಲುವಾಗಿ ಸರಿಯಾದ ಸಮಯಕ್ಕೆ ಬರುತ್ತಿದ್ದಾಳೆ.
ಆಕೆಯಿಂದ ಈ ಭೀಕರ ಜಗಳ ಬಗೆಹರಿಯಬಲ್ಲುದು.

(ಯೊಕಾಸ್ತಾ ಬರುವಳು)

ಯೊಕಾಸ್ತಾ : ಮುಗ್ಧ ಮೂರ್ಖ ಗಂಡಸರೇ, ಯಾಕೆ ಈ ಕೆಟ್ಟ ಗದ್ದಲ ?
ಥೀಬ್ಸ್ ನಗರ ದಣಿವಿನಿಂದ ಸಾಯುತ್ತಿದ್ದರೆ
ಸ್ವಂತ ಜಗಳ ಕೆದಕಲು ನಿಮಗೆ ನಾಚಿಕೆಯಾಗಬೇಡವೆ ?

(ಈಡಿಪಸ್‌ಗೆ) ಮನೆಯೊಳಗೆ ಬಾ.

—ನೀನು, ಕ್ರಿಯಾನ್, ಈಗ ಹೊರಟುಹೋಗು.
ಈ ವ್ಯರ್ಥ ಕಿತ್ತಾಟ ಸಾಕುಮಾಡಿ.

ಕ್ರಿಯಾನ್ : ವ್ಯರ್ಥ ? ಇಲ್ಲ ಸೋದರಿ,
ನಿನ್ನ ಗಂಡ ನನಗೆ ವಿಧಿಸಿರುವುದು ಎರಡರಲ್ಲೊಂದು ;
ದೇಶಾಂತರ ಅಥವಾ ಮರಣದಂಡನೆ.

ಈಡಿಪಸ್ : ಅವನೆನ್ನುವುದು ಸರಿ . ನೋಡು, ಹೆಂಗಸೆ,
ನನ್ನನ್ನು ಕೊಲ್ಲುವ ಆತನ ಪಿತೂರಿಯನ್ನು
ಪತ್ತೆಹಚ್ಚಿ ಹಿಡಿದಿದ್ದೇನೆ.

ಕ್ರೆಯಾನ್ : ಇಲ್ಲ, ನಾನೆಂದಾದರೂ ನಿನ್ನ ಜೀವಕ್ಕೆ ಅಪಾಯ ಎಣಿಸಿದ್ದರೆ,
ನನಗೆ ಮರಣದಂಡನೆ ದೊರಕಲಿ.

ಯೋಕಾಸ್ಟಾ : ಹಾ, ಆತನ ಮಾತು ನಂಬು ಈಡಿಪಸ್ ;
ನನಗಾಗಿ ನನ್ನ ನಾಡ ಜನರಿಗಾಗಿ ಆತನ ಈ
ಮಾತುಗಳಲ್ಲಿ ವಿಶ್ವಾಸ ಇಡು.

ಮೇಳದವ : ಅವಳ ಮಾತಿಗೆ ನಿನ್ನ ಮನಸ್ಸು ತೆರೆ ಪ್ರಭು ;
ಅವಳ ಮಾತನ್ನೊಪ್ಪು ; ನಿನ್ನನ್ನು ಬೇಡಿಕೊಳ್ಳುತ್ತೇನೆ.

ಈಡಿಪಸ್ : ಹಾಗಾದರೆ ನಾನೇನು ಮಾಡಬೇಕೆನ್ನುತ್ತಿ ?

ಮೇಳದವ : ಕ್ರೆಯಾನ್ ಮಾತಿಗೆ ಮಾನ್ಯತೆ ಕೊಡು ; ಮೂರ್ಖನಂತೆ
ಮಾತಾಡಿಲ್ಲ ಆತ, ಪ್ರಮಾಣಮಾಡಿ ಹೇಳಿದ್ದಾನೆ.

ಈಡಿಪಸ್ : ನಿನ್ನ ಮಾತಿನ ಅರ್ಥ ಗೊತ್ತೆ ?

ಮೇಳದವ : ಗೊತ್ತು.

ಈಡಿಪಸ್ : ಹಾಗಾದರೆ ಏನು ಗೊತ್ತು ಹೇಳು.

ಮೇಳದವ : ಹೀಗೆ ಆಣೆಮಾಡಿದ ಗೆಳೆಯನನ್ನ
ಕುರುಡು ದ್ವೇಷದಿಂದ ಆಧಾರರಹಿತವಾಗಿ
ಪೀಡಿಸಬಾರದು.

ಈಡಿಪಸ್ : ಆದರೆ ನಿನ್ನ ಕೋರಿಕೆಯ ಅರ್ಥ—
ನನ್ನ ಮರಣದಂಡನೆ ಅಥವಾ ದೇಶೋಚ್ಚಾಟನೆ :
ಇದು ನಿನಗೆ ಗೊತ್ತು ತಾನೆ ?

ಮೇಳದವ : ಇಲ್ಲ, ಹೀಲಿಯಸ್ ದೇವರಮೇಲೆ ಆಣೆಮಾಡುವೆ, ಇಲ್ಲ ;
ನನ್ನ ಅರ್ಥ ಅದಲ್ಲ ಪ್ರಭು.
ಅರ್ಥ ಅದಾಗಿದ್ದರೆ ನನಗೆ ಅತ್ಯಂತ ಕಠೋರ ಮರಣ ಬರಲಿ ;
ನಮಗಾಗಲೆ ಇರುವ ಗೋಳಿನ ಜೊತೆ ನಮ್ಮಂಥ ಬಡಜನ
ನಿಮ್ಮ ನಡುವಿನ ದ್ವೇಷ ಕೂಡ ಸಹಿಸಬೇಕೆ ?

ಈಡಿಪಸ್ : ಹಾಗಾದರೆ
ಈತನ್ನ ಬಿಡುತ್ತೇನೆ. ಸಾವು ಬರಲಿ ನನಗೆ
ಅದು ಬರಲೇ ಬೇಕಿದ್ದರೆ ; ಈತ ಬೇಕಾದರೆ ನನ್ನನ್ನ
ಥೀಬ್ಸ್‌ನಿಂದ ಅಟ್ಟಲಿ. ಇವನ ಮಾತಿಗಿಂತ ನಿಮ್ಮ ಶೋಕ

ನನ್ನೆದೆ ಕರಗಿಸುತ್ತಿದೆ.
ಇನ್ನು ಇವನ ಬಗ್ಗೆ—
ಈತ ಹೋದ ಹೋದಲ್ಲೆಲ್ಲ ದ್ವೇಷ ಇವನನ್ನು ಹಿಂಬಾಲಿಸುತ್ತದೆ.

ಕ್ರೆಯಾನ್ : ನಿನ್ನ ಸೋಲು ಕೂಡ ಸಣ್ಣದು,
ನಿನ್ನ ಸಣ್ಣತನದ ಕೋಪದಂತೆ. ನಿನ್ನಂಥವನ ಪ್ರಕೃತಿ
ತನ್ನನ್ನು ತಾನೇ ಹಿಂಸಿಸಿಕೊಳ್ಳುತ್ತದೆ.

ಈಡಿಪಸ್ : ಹೊರಟು ಹೋಗುತ್ತಿಲ್ಲ ಯಾಕೆ ? ನನ್ನನ್ನೇಕೆ ಬಿಟ್ಟು ಹೋಗುತ್ತಿಲ್ಲ ?

ಕ್ರೆಯಾನ್ : ಹೋಗುತ್ತೇನೆ.
ನಿನಗೆ ನಾನು ಗೊತ್ತಿಲ್ಲ ; ಈ ನಗರ ನನ್ನನ್ನು ಬಲ್ಲದು.
ನಿನ್ನ ದೃಷ್ಟಿಯಲ್ಲಿ ಅಲ್ಲದಿದ್ದರೂ ನಾಗರಿಕರ ದೃಷ್ಟಿಯಲ್ಲಿ
ನಾನು ಪ್ರಾಮಾಣಿಕ.

(ಕ್ರೆಯಾನ್ ಹೋಗುತ್ತಾನೆ)

ಮೇಳದವ : ಯೊಕಾಸ್ತಾ, ದೊರೆಯನ್ನು ಅರಮನೆಯೊಳಕ್ಕೆ
ಕರೆದೊಯ್ಯುತ್ತಿಲ್ಲ. ಏಕೆ ?

ಯೊಕಾಸ್ತಾ : ನನಗೆ ಇಲ್ಲಿ ನಡೆದದ್ದು ಹೇಳು, ಅದಕ್ಕೆ ಮುಂಚೆ.

ಮೇಳದವ : ಆಧಾರವಿಲ್ಲದೆ
ಸಂದೇಹಪಡಲಾಯಿತು ; ಅಂಥ ಆಪಾದನೆಯಿಂದ
ಸಾಮಾನ್ಯವಾಗಿ ಆಗುವಂತೆ ಕಿರಿಕಿರಿ ಉಂಟಾಯಿತು.

ಯೊಕಾಸ್ತಾ : ಆಪಾದನೆ—ಇಬ್ಬರಿಂದಲೂ ?

ಮೇಳದವ : ಇಬ್ಬರಿಂದಲೂ.

ಯೊಕಾಸ್ತಾ : ಆದರೆ ಅವರು ಅಂದದ್ದಾದರೂ ಏನು ?

ಮೇಳದವ : ಹೋಗಲಿ ಬಿಡಿ, ಎಲ್ಲ ಕೊನೆಗೊಳ್ಳಲಿ ;
ನಾವೀಗಾಗಲೆ ಸಾಕಷ್ಟು ನೊಂದಿಲ್ಲವೆ ?

ಈಡಿಪಸ್ : ನಿನ್ನ ಸಭ್ಯತೆಯಿಂದ ಆದದ್ದು ನೋಡು.
ನಿನ್ನ ಉದ್ದೇಶ ಒಳ್ಳೆಯದಿದ್ದರೂ
ನನ್ನ ಕೈಕಟ್ಟಿ ನನ್ನ ಉದ್ದೇಶ ಕೆಡಿಸಿದೆ.

ಮೇಳದವ : ಈಡಿಪಸ್ ಮಹಾರಾಜ, ನನ್ನ ಮಾತು ಅರ್ಥ ಮಾಡಿಕೋ.
ನಾವು ನಿನ್ನ ತೊರೆದರೆ, ಅದು
ನಮ್ಮ ಹುಚ್ಚಿನ ಪರಾಕಾಷ್ಠೆ !
ಈ ನಾಡು ಬಿರುಗಾಳಿ ಬಿರುಮಳೆಯನ್ನು

ಗೆದ್ದು ನಿಂತಿತು ಒಮ್ಮೆ ನಿನ್ನಿಂದ ;
ಈಗ ಕೂಡಾ ನೀನು ಸ್ಥೈರ್ಯದಿಂದ ನಡೆಸಿ
ನಮ್ಮೆಲ್ಲ ನೋವುಗಳನ್ನು ನಿವಾರಿಸಬೇಕು.

ಯೊಕಾಸ್ತಾ : ದೇವರಾಣೆ ಈಡಿಪಸ್, ನಿನ್ನ ಹೆಂಡತಿಗಾದರೂ ಹೇಳು ;
ಯಾಕೆ ಈ ನಿನ್ನ ಮೊಂಡು ಕೋಪ ?

ಈಡಿಪಸ್ : ನಿನಗೆ ಹೇಳುತ್ತೇನೆ : ನನ್ನ ವಿಶ್ವಾಸಕ್ಕೆ ಯೋಗ್ಯರು
ನಿನ್ನ ಬಿಟ್ಟರೆ ಯಾರು ? ಇದೆಲ್ಲ ಕ್ರೆಯಾನ್ ಕೆಲಸ,
ಆತನ ದ್ರೋಹ, ನನ್ನ ವಿರುದ್ಧ ಪಿತೂರಿ.

ಯೊಕಾಸ್ತಾ : ಹೇಳುತ್ತ ಹೋಗು—ಎಲ್ಲ ಸ್ಪಷ್ಟವಾಗಲಿ.

ಈಡಿಪಸ್ : ನಾನು ಲಾಯಿಸ್ ಕೊಂದಿರುವುದಾಗಿ ಹೇಳುತ್ತಾನೆ !

ಯೊಕಾಸ್ತಾ : ಅದಕ್ಕೇನಾದರೂ ಆಧಾರ ಉಂಟೋ ? ಸುಮ್ಮನೆ
ಗಾಳಿಮಾತಿನ ಸಾಕ್ಷಿಯೋ ?

ಈಡಿಪಸ್ : ಹಾಗೆ ನೇರವಾಗಿ ಹೇಳಲಿಲ್ಲ.
ಆ ದರಿದ್ರ ಭವಿಷ್ಯಕಾರನನ್ನು ಕರೆತಂದು
ಅವನಿಂದ ಹೇಳಿಸಿದ್ದಾನೆ.

ಯೊಕಾಸ್ತಾ : ಅಯ್ಯೋ, ಇದು ಕೇವಲ ಭವಿಷ್ಯಕಾರನ ಮಾತಾಗಿದ್ದರೆ
ಬೇಸರಪಟ್ಟುಕೊಳ್ಳಬೇಡ, ನಾನು ಹೇಳುವೆ ಕೇಳು,
ಮನುಷ್ಯಮಾತ್ರದವನು ಅತೀಂದ್ರಿಯ ವಿಷಯ ತಿಳಿಯಲು ಸಾಧ್ಯ
ವಿಲ್ಲ.
ಒಂದು ದೃಷ್ಟಾಂತ ಹೇಳುವೆ ಕೇಳು :
ಒಮ್ಮೆ ದಿವ್ಯವಾಣಿ ಹೇಳಿತು—ಅದು ಅಪಾಲೋ ದೇವನ
ಸ್ವಂತ ಮಾತಲ್ಲದಿರಬಹುದು ; ಆತನ ಅರ್ಚಕ ಹೇಳಿದ್ದಿರಬೇಕು—
ಅದರ ಪ್ರಕಾರ ಲಾಯಿಸ್ ದೊರೆಯ ಕೊಲೆ ಆತನ
ಮಗನಿಂದಲೇ ಆಗಬೇಕಿತ್ತು.
ಸ್ವಂತ ಮಗನ ಕೈಯಿಂದಲೇ ಸಾಯುತ್ತಾನೆ, ಅಂದಿತ್ತು !
ಆದರೆ ನೀನು ಬಲ್ಲಂತೆ ಲಾಯಿಸ್ ಸತ್ತದ್ದು
ಡಕಾಯಿತರ ದಾಳಿಯಲ್ಲಿ, ಮೂರು ಹೆದ್ದಾರಿ ಕೂಡುವೆಡೆಯಲ್ಲಿ.
ಲಾಯಿಸ್ ಮಾತ್ರ ದೇವರಾಣೆಗೆ ಹೆದರಿ
ಮೂರು ದಿನದ ಮಗುವಿನ ಕಾಲು ಕಟ್ಟಿ, ಚುಚ್ಚಿ,
ನಿರ್ಜನ ಪರ್ವತಗಳಲ್ಲಿ ಬಿಟ್ಟುಬಂದ.
ಅಪಾಲೋ ದೇವರ ಮಾತು ನಿಜವಾಗಲಿಲ್ಲ ; ಮಗನಿಂದ

ತಂದೆಯು ಕೊಲೆ ಆಗಲೇ ಇಲ್ಲ. ಭಯಂಕರ ವಾಣಿ ಸುಳ್ಳಾಯಿತು.
ಆದ್ದರಿಂದ ಅಂಥ ಮಾತುಗಳನ್ನು ನಂಬಬೇಡ.
ದೇವರು ತನ್ನ ಇಚ್ಛೆಯನ್ನು ತಾನಾಗಿಯೇ ವ್ಯಕ್ತಪಡಿಸುತ್ತಾನೆ.

ಈಡಿಪಸ್ : ಮಡದಿ,
ನೀನು ಮಾತಾಡುತ್ತಿದ್ದಂತೆ ಎಂಥ ಭಯ, ಎಂಥ ಭೀಕರ ಸಂದೇಹ
ನನ್ನ ಮನಸ್ಸನ್ನು ಅಲ್ಲಾಡಿಸಿತು !

ಯೊಕಾಸ್ಟಾ : ಯಾಕೆ ಹೀಗೆ ಮಾತಾಡುತ್ತಿ ? ಎಂಥ ಭಯ ?

ಈಡಿಪಸ್ : ಮೂರು ದಾರಿಗಳು ಕೂಡಿದ ಹತ್ತಿರ
ಲಾಯಿಸ್‌ನ ಕೊಲೆಯಾಯಿತೆಂದು ನೀನು ಅಂದಂತೆ ಕೇಳಿಸಿತು.

ಯೊಕಾಸ್ಟಾ : ನಾನು ಅದನ್ನೇ ಅಂದದ್ದು,
ಅನ್ನುತ್ತಿರುವುದೂ ಅದನ್ನೇ.

ಈಡಿಪಸ್ : ಈ ಘಟನೆ ನಡೆದ ಸ್ಥಳ ಯಾವುದು ?

ಯೊಕಾಸ್ಟಾ : ಫೋಕಿಸ್ ಎಂಬ ಪ್ರದೇಶ ; ಡೆಲ್ಫಿ ಮತ್ತು ದಾಲಿಯಾಗಳಿಂದ
ಹೊರಟ ದಾರಿಗಳು ಅಲ್ಲಿ ಕೂಡುತ್ತವೆ.

ಈಡಿಪಸ್ : ಹೇಳು : ಇದು ನಡೆದದ್ದು ಎಷ್ಟು ಕಾಲದ ಹಿಂದೆ ?

ಯೊಕಾಸ್ಟಾ : ನೀನು ಥೀಬ್ಸ್‌ನ ದೊರೆಯಾಗುವುದಕ್ಕೆ ಕೊಂಚ ಹಿಂದೆ
ಈ ಕತೆ ಹಬ್ಬಿತ್ತು.

ಈಡಿಪಸ್ : ಅಯ್ಯೋ ದೇವರೇ ! ನನ್ನ ಸುತ್ತ ಎಂಥ ಬಲೆ ಹೆಣೆದಿದ್ದೀ !

ಯೊಕಾಸ್ಟಾ : ಇದರಲ್ಲಿ ನಿನ್ನನ್ನು ಕಲಕುವಂಥದೇನಿದೆ ?

ಈಡಿಪಸ್ : ಪ್ರಶ್ನಿಸಬೇಡ : ಲಾಯಿಸ್ ದೊರೆಯ ಬಗ್ಗೆ ಹೇಳು,
ಆತ ಹೇಗಿದ್ದ ? ಅವನ ವಯಸ್ಸೆಷ್ಟು ?

ಯೊಕಾಸ್ಟಾ : ಎತ್ತರಕ್ಕಿದ್ದ ; ಕೂದಲು ಆಗತಾನೆ ಬೆಳ್ಳಗಾಗುತ್ತಿತ್ತು ;
ನೋಡಲು ಕೊಂಚ ನಿನ್ನಹಾಗಿದ್ದ.

ಈಡಿಪಸ್ : ಅಯ್ಯೊ ! ನನ್ನ ಆಜ್ಞೆಯಿಂದ ನಾನೇ ನಾಶವಾಗುತ್ತಿದೆ !

ಯೊಕಾಸ್ಟಾ : ಮಾತಾಡು ; ನಿನ್ನತ್ತ ನೋಡಿದಾಗ ನನಗೆ
ನಡುಕ ಬರುತ್ತದೆ, ದೊರೆ.

ಈಡಿಪಸ್ : ಆ ಕುರುಡ ಮುದುಕನ ಅಂಧತ್ವದ ಬಗ್ಗೆ
ಸಂದೇಹ ಹುಟ್ಟುತ್ತಿದೆ. ಆದರೆ ನೀನು ಹೇಳಬಲ್ಲೆಯಾದರೆ,
ನನಗೆ ಇನಷ್ಟು ತಿಳಿಯಬೇಕು.

ಯೊಕಾಸ್ಟಾ : ಏನನ್ನಾದರೂ ಹೇಳಬಲ್ಲೆ ! ಆದರೆ ನೀನು ಕೇಳುವ ರೀತಿ ಮಾತ್ರ
ನನ್ನಲ್ಲಿ ಭಯ ಹುಟ್ಟಿಸುತ್ತಿದೆ.

ಈಡಿಪಸ್ : ಸಾಮಾನ್ಯವಾಗಿ ದೊರೆಯ ಜೊತೆ ಇರುವಂತೆ ಆಗ
ಆತನ ಪರಿವಾರವಿತ್ತೋ—ಕೆಲವರು ಮಾತ್ರ ಇದ್ದರೋ ?

ಯೊಕಾಸ್ತಾ : ಒಟ್ಟು ಐದು ಜನರಿದ್ದರು ; ಅವರಲ್ಲೊಬ್ಬ ದೂತ ;
ಒಂದೇ ರಥ, ಅದನ್ನು ರಾಜನೇ ನಡೆಸುತ್ತಿದ್ದ.

ಈಡಿಪಸ್ : ಅಯ್ಯೋ ! ಅದು ಎಲ್ಲವನ್ನೂ ಸ್ಪಷ್ಟಮಾಡುತ್ತಿದೆ.
ಆದರೆ—ಅಲ್ಲಿ ನಡೆದದ್ದನ್ನ ನಿನಗೆ ಹೇಳಿದವರಾರು ?

ಯೊಕಾಸ್ತಾ : ತಪ್ಪಿಸಿಕೊಂಡು ಬಂದವನು ಏಕಮಾತ್ರ ವ್ಯಕ್ತಿ—
ಅರಮನೆಯ ಸೇವಕ.

ಈಡಿಪಸ್ : ಇನ್ನೂ ಆತ ನಮ್ಮ ಸೇವೆಯಲ್ಲಿದ್ದಾನೆಯೆ ?

ಯೊಕಾಸ್ತಾ : ಇಲ್ಲ ; ಆತ ಬಂದು ಅರಮನೆ ಸೇರಿದಮೇಲೆ
ನೀನು ರಾಜನಾಗಿರುವುದನ್ನು ಕಂಡು ನನ್ನಲ್ಲಿಗೆ ಬಂದು
ನನ್ನ ಹಸ್ತ ಮುಟ್ಟಿ
ದೂರದ ಹಳ್ಳಿಗೆ, ಈ ನಗರದಿಂದ ಆದಷ್ಟೂ ದೂರವಿರುವ ಜಾಗಕ್ಕೆ
ಕುರುಬರು ಕುರಿ ಕಾಯುವಲ್ಲಿಗೆ ಹೊರಟುಹೋಗಲು
ಅನುಮತಿ ಬೇಡಿದ ;
ನಮ್ಮ ನಿಷ್ಠಾವಂತ ಸೇವಕನಾದ ಆತನಿಗೆ ಅನುಮತಿ ಕೊಟ್ಟೆ.
ಆತ ಹೊರಟುಹೋದ,

ಈಡಿಪಸ್ : ಶೀಘ್ರವಾಗಿ ಆತನನ್ನು ಇಲ್ಲಿಗೆ ಕರೆಸುವುದು ಸಾಧ್ಯವೆ ?

ಯೊಕಾಸ್ತಾ : ಸುಲಭವಾಗಿ. ಆದರೆ—ಯಾಕೆ ?

ಈಡಿಪಸ್ : ನಾನು ಪೂರ್ವಾಪರ ಚಿಂತಿಸದೆ
ತೀರಾ ದೊಡ್ಡ ಜವಾಬ್ದಾರಿ ಹೊತ್ತಿದ್ದೇನೆ. ಅವನೊಂದಿಗೆ
ಮಾತಾಡಬೇಕು.

ಯೊಕಾಸ್ತಾ : ಹಾಗಾದರೆ ಆತ ಬರುತ್ತಾನೆ ;
ಆದರೆ ನಿನ್ನ ಭಯದ ಕಾರಣ ಅರಿಯುವ
ಹಕ್ಕು ನನಗಿಲ್ಲವೆ ?

ಈಡಿಪಸ್ : ಇದೆ. ಅದನ್ನು ನಿನಗೆ ನಿರಾಕರಿಸುವುದಿಲ್ಲ. ಅದರಲ್ಲೂ
ಈಗ, ಕ್ರೂರ ದುಶ್ಯಕುನಗಳ ದವಡೆಯಲ್ಲಿ ನಾನಿರುವಾಗ,
ನಿನಗೆ ಹೇಳದಿರಲಾರೆ.
ನನ್ನಿಂದ ಈಗಲೇ ಕೇಳಲು ನಿನಗಿಂತ ಉತ್ತಮರು ಯಾರು ?
ಕಾರಿಂಥ್‌ನ ಪಾಲಿಬಸ್ ನನ್ನ ತಂದೆ.

ಡೋರಿಯನ್‌ನವಳು ನನ್ನ ತಾಯಿ : ಹೆಸರು ಮೆರೋಪೆ.
ನಾನು ಕಾರಿಂಥ್‌ನ ನಾಯಕನಾಗಿ ಬೆಳೆದೆ ; ಆದರೆ
ಒಂದು ವಿಚಿತ್ರ ಘಟನೆ ನಡೆಯಿತು.

ಹಬ್ಬವೊಂದರ ಸಂದರ್ಭದಲ್ಲಿ ಕುಡಿದು ಮತ್ತನಾದ ಒಬ್ಬ
ನನ್ನನ್ನು ತೋರಿಸಿ—ಈತ ತನ್ನ ತಂದೆಯ ಮಗನಲ್ಲ,
ಎಂದು ಕೂಗಿದ.

ಆ ರಾತ್ರಿ ನಾನು ಸಹಿಸಿಕೊಂಡು ಸುಮ್ಮನಿದ್ದೆ ; ಆದರೆ
ನನ್ನನ್ನು ಭಯ ತುಂಬಿತ್ತು ; ನನ್ನ ಹೃದಯ ಭಾರವಾಗಿತ್ತು.
ಮರುದಿನ ನನ್ನ ತಂದೆತಾಯಿಯರನ್ನು ಪ್ರಶ್ನಿಸಿದೆ.
ಅವರು ರೊಚ್ಚಿಗೆದ್ದು
ಅದೆಲ್ಲ ಕುಡುಕನೊಬ್ಬನ ಬೊಗಳೆ, ಎಂದು ಹೇಳಿದಾಗ
ಸಮಾಧಾನಗೊಂಡೆ. ಆದರೆ ನನ್ನ ಸಂಶಯ
ನನ್ನ ಹೃದಯದಲ್ಲಿ ನೋವನ್ನು ಬಿಟ್ಟಿತ್ತು.
ಜನ ಮಾತಾಡಿಕೊಳ್ಳುವುದು ಗೊತ್ತಿತ್ತು. ನನ್ನ ಮನಃಶಾಂತಿ
ನಾಶವಾಗಿತ್ತು. ನನ್ನ ತಂದೆಗೆ ಹೇಳದೆ ಡೆಲ್ಫಿಯ ದೇವಾಲಯಕ್ಕೆ
ಹೋದೆ.
ದೇವದೂತ ನನ್ನ ಪ್ರಶ್ನೆಗಳನ್ನು ನಿರ್ಲಕ್ಷಿಸಿ
ಬೇರೆ ವಿಚಾರ ಮಾತಾಡಿದ.

ಆತ ಹೇಳಿದ ಕೆಲವು ಮಾತು
ಭಯಾನಕವಾಗಿದ್ದವು, ಸ್ಪಷ್ಟವಾಗಿದ್ದವು, ದುರ್ಭರವಾಗಿದ್ದವು.
ಉದಾಹರಣೆಗೆ—ನಾನು ನನ್ನ ಹೆತ್ತವಳ ಜೊತೆ ಕೂಡಿ
ಪಡೆದ ಮಕ್ಕಳು ಲೋಕದ ಕಣ್ಣಿನಲ್ಲಿ ತುಚ್ಛವಾಗುತ್ತವೆ, ಅಂದ.
ನಾನು ನನ್ನ ತಂದೆಯ ಕೊಲೆ ಮಾಡುತ್ತೇನೆಂದು ಹೇಳಿದ.

ಇದನ್ನು ಕೇಳಿದವನೆ ಅಲ್ಲಿಂದ ಓಡಿದೆ. ಅವತ್ತಿನಿಂದ
ನಾನು ದೇವರ ವಾಣಿ ಕೇಳಿಸದ, ತಟ್ಟದ ಹಾಗೆ ಕಾರಿಂಥ್‌ನಿಂದ
ದೂರ, ದೂರಕ್ಕೆ, ಆ ವಾಣಿ ಕೇವಲ ಆಕಾಶದಲ್ಲಿ
ನಗುವ ನಕ್ಷತ್ರಗಳಲ್ಲೊಂದು ಅನ್ನಿಸುವ ತನಕ, ಓಡಿದೆ.
ಓಡುತ್ತ ಇಲ್ಲಿಗೆ ಬಂದಾಗ ಈಗತಾನೇ ನೀನು ಹೇಳಿದಂತೆ,
ಲಾಯಿಸ್ ದೊರೆಯ ಕೊಲೆಯಾಗಿತ್ತು.

ಅಲ್ಲಿ ನಡೆದದ್ದನ್ನೆಲ್ಲ ವಿವರವಾಗಿ ಹೇಳುವೆ ಕೇಳು, ಗೆಳತಿ :

ನಾನು ಹೋದ ಒಂದು ಸ್ಥಳದಲ್ಲಿ ಮೂರು ಹೆದ್ದಾರಿಗಳು
ಕೂಡಿದ್ದವು.
ಒಬ್ಬ ದೂತ ಕಾಣಿಸಿಕೊಂಡ ; ಕುದುರೆಯ ರಥ ಬಂತು ;
ರಥದಲ್ಲಿ ನೀನು ವರ್ಣಿಸಿದಂಥ ವ್ಯಕ್ತಿಯೊಬ್ಬ ಕೂತಿದ್ದ.
ಸಾರಥಿ ನಾನು ರಸ್ತೆಯಿಂದ ಅತ್ತ ಹೋಗುವಂತೆ ಆಜ್ಞಾಪಿಸಿದ.
ನನ್ನ ಕಡೆ ಒತ್ತರಿಸಿಬಂದ. ನಾನು ಸಿಟ್ಟು ತಾಳಲಾರದೆ
ಹೊಡೆದೆ. ಆ ಮುದುಕ ನನ್ನತ್ತ ನೋಡಿ
ನಾನು ಹೊರ ಬಂದೊಡನೆ ತನ್ನ ಬಿಚ್ಚುಗೋಲಿಂದ
ನನ್ನ ತಲೆಗೆ ಹೊಡೆದ.
ನಾನು ಮುಯ್ಯಿ ತೀರಿಸಿಕೊಂಡೆ :
ನನ್ನ ಕೈಯಲ್ಲಿದ್ದ ದೊಣ್ಣೆ ಬೀಸಿ ಆತನನ್ನು
ರಥದಿಂದ ಹೊಡೆದು ನೆಲಕ್ಕೆ ಉರುಳಿಸಿದೆ.
ಅವನನ್ನು ಕೊಂದೆ.
ಅವರೆಲ್ಲರನ್ನೂ ಕೊಂದುಹಾಕಿದೆ.
ಆ ಆಗಂತುಕ ಮತ್ತು ಲಾಯಿಸ್
ಇಬ್ಬರೂ—ಒಬ್ಬನೇ ಆಗಿದ್ದರೆ, ನನ್ನಂಥ ನೀಚ ಇನ್ನಾರು ?
ದೇವರ ಕೋಪ ನನ್ನ ಮೇಲಲ್ಲದೆ ಇನ್ನಾರ ಮೇಲೆ ?
ಪ್ರಜೆಗಳಾಗಲಿ, ಇನ್ನಾರಾಗಲಿ ನನಗೆ ಹೇಗೆ ಆಶ್ರಯ ಕೊಟ್ಟಾರು ?
ಎಲ್ಲರೂ ನನ್ನನ್ನು ದೂರಕ್ಕಟ್ಟುತ್ತಾರೆ.
ಮತ್ತು ನಾನೇ ನನ್ನ ಮೇಲೆ
ಈ ಶಾಪ ಹಾಕಿಕೊಂಡಿದ್ದೇನೆ !
ನೋಡು ; ನಿನ್ನನ್ನು ನಾನು ಈ ಕೈಗಳಿಂದ ಮುಟ್ಟಿದ್ದೇನೆ,
ನಿನ್ನ ಗಂಡನನ್ನು ಕೊಂದ ಕೈಗಳಿಂದ, ಎಂಥ ಸೂತಕ !
ಹಾಗಾದರೆ ನಾನು ಪಾಪಿ ? ಇರಬೇಕು,
ಆದ್ದರಿಂದಲೇ ನಾನು ಥೀಬ್ಸ್‌ನಿಂದ ಪಲಾಯನ ಮಾಡಬೇಕು ;
ನನ್ನ ಜನ, ದೇಶವನ್ನು ಇನ್ನು ನೋಡಕೂಡದು ;
ನನ್ನ ತಾಯಿಯನ್ನು ಕೂಡುವ
ನನ್ನ ತಂದೆ ಪಾಲಿಬಸ್‌ನನ್ನು ಕೊಲ್ಲುವ ಅಪಾಯದಿಂದ
ಓಡಬೇಕು.
ಅಯ್ಯೋ,
ನನ್ನನ್ನು ಆ ದೇವರು ಇದಕ್ಕಾಗಿ, ಈ ಕರ್ಮಕ್ಕಾಗಿ ಸೃಷ್ಟಿಸಿದರೆ,

ಆತ ಕ್ರೂರಿಯಾದ ಕ್ಷುದ್ರನಲ್ಲದೆ ಮತ್ತೇನು ?
ಓ,
ಸ್ವರ್ಗದ ಭವ್ಯ ಪುಣ್ಯ ಶಕ್ತಿಗಳೇ,
ನನ್ನ ಬದುಕಿನಲ್ಲಿ ಆ ದಿನ ಬರದಿರಲಿ ! ಬರದಿರಲಿ !
ಆ ದುರ್ದಶೆಗೆ ಬದಲಾಗಿ ನಾನು ಮಾನವಕೋಟಿಯಿಂದ
ಹೇಳ ಹೆಸರಿಲ್ಲದಂತೆ ಮಾಯವಾಗುವಂತಾಗಲಿ !

ಮೇಳದವ : ಪ್ರಭು, ನಾವು ಕೂಡ ಇದರಿಂದ ಭಯಗೊಂಡಿದ್ದೇವೆ ;
ಆದರೆ ನಿರಾಶೆ ಸಲ್ಲದು. ನೀನಿನ್ನೂ ಆ ಕುರುಬನನ್ನು
ಕೇಳಬೇಕಾಗಿದೆ.

ಈಡಿಪಸ್ : ಆದರೆ
ನಿಜಕ್ಕೂ ಯಾವ ಆಶೆಯೂ ನನ್ನಲ್ಲಿ ಉಳಿದಿಲ್ಲ.

ಯೊಕಾಸ್ಟ : ಆತನಿಂದ ನೀನು ನಿರೀಕ್ಷಿಸುವುದೇನನ್ನ ?

ಈಡಿಪಸ್ : ಇಷ್ಟು :
ಆತ ಕೊಲೆಯ ಬಗ್ಗೆ ಹೇಳುವಂಥದ್ದು
ನೀನು ಹೇಳಿದ್ದರೊಂದಿಗೆ ತಾಳೆಯಾದರೆ
ನನಗೆ ಎಲ್ಲ ಸ್ಪಷ್ಟವಾಗುತ್ತದೆ.

ಯೊಕಾಸ್ಟ : ನಾನು ಹೇಳಿದ್ದರಲ್ಲಿ ಅಷ್ಟು ಮುಖ್ಯವಾದದ್ದು ಯಾವುದು ?

ಈಡಿಪಸ್ : ನೋಡು, ನೀನೇ ಹೇಳಿದೆ,
ಆ ವ್ಯಕ್ತಿಯ ಮಾತಿನಂತೆ ಡಕಾಯಿತರು ದೊರೆಯನ್ನು ಕೊಂದರೆಂದು ;
ಆತ ಅದನ್ನೇ ಈಗಲೂ ಹೇಳಿದರೆ, ತುಂಬ ಜನ ಡಕಾಯಿತರಿದ್ದರೆಂದರೆ,
ಕೊಂದ ಪಾತಕಿ ನಾನಲ್ಲ ; ನಾನೊಬ್ಬನೇ ಇದ್ದೆ.
ಆದರೆ ಆತ ಇದ್ದವನು ಒಬ್ಬನೇ, ಒಬ್ಬನೇ ಕೊಂದನೆಂದರೆ,
ಆತನ ಸಾಕ್ಷಿ ನನ್ನನ್ನು ಕುರಿತದ್ದು.

ಯೊಕಾಸ್ಟ : ಆದರೆ ಆತ
ಬಹಳ ಜನರಿದ್ದರೆಂದು ಹೇಳಿದ್ದು ನಿಜ, ದಯವಿಟ್ಟು ನಂಬು ;
ಅವನು ತನ್ನ ಕತೆಯನ್ನು ಈಗ ಜ್ಞಾಪಿಸಿಕೊಳ್ಳಬಲ್ಲನೆ ? ಇಲ್ಲ.
ಇಡೀ ನಗರ ನನ್ನಷ್ಟೇ ಸ್ಪಷ್ಟವಾಗಿ ಅದನ್ನು ಕೇಳಿತು.
ಈಗ ಆತ ಒಂದುಪಕ್ಷ ಬದಲಿಸಿ ಲಾಯಿಸ್ ಸಾವಿನಿಂದ
ದೇವವಾಣಿ ನಿಜವಾಯಿತೆಂದು ಸಿದ್ಧಪಡಿಸಲು ಸಾಧ್ಯವಿಲ್ಲ.

ಅಪಾಲೋ ಹೇಳಿದ್ದು
ನನ್ನ ಮಗನಿಂದ ಆತನ ಕೊಲೆ ಆಗುತ್ತದೆಂದು—
ಆದರೆ ನನ್ನ ಮಗು—ನನ್ನ ಮುದ್ದಿನ ಮಗು—
ಅಷ್ಟರಲ್ಲೇ ಸತ್ತಿತ್ತು.
ಇಲ್ಲ, ಇವತ್ತಿನಿಂದ ಈ ದೇವವಾಣಿಗಳ ಬಗ್ಗೆ
ಒಂದು ಕ್ಷಣವನ್ನು ಕೂಡ ವ್ಯರ್ಥಮಾಡಬೇಡ.

ಈಡಿಪಸ್ : ನಿನ್ನ ಮಾತು ನಿಜವಿರಬಹುದು. ಆದರೆ,
ಬಾ, ಆ ಕುರುಬನನ್ನು ಕರೆತರಲು ಜನ ಈ ಕೂಡಲೆ
ಹೋಗಲಿ. ಇದು ಇತ್ಯರ್ಥವಾಗಬೇಕು.

ಯೊಕಾಸ್ತಾ : ಅವನನ್ನು ಕರೆಸುತ್ತೇನೆ;
ನಿನ್ನ ಯಾವೊಂದು ಮಾತಿಗೂ ನಾನು ಎದುರಾಡಲಾರೆ,
ಈ ವಿಷಯದಲ್ಲಂತೂ ಖಂಡಿತ ಆಡಲಾರೆ.
ಒಳಗೆ ಹೋಗೋಣ. ನಡೆ.

(ಎಲ್ಲರೂ ಹೋಗುವರು)

* * *

ಮೇಳ : ಋಜು ಮಾರ್ಗ ಬಿಟ್ಟೆನ್ನ ಅಡಿ ಸರಿಯದಿರಲಿ,
ಸ್ವರ್ಗ ಹಾಕಿದ ಗೆರೆಯ ದಾಟದಿರಲಿ;
ಮಾಸಿ ಮಬ್ಬಾಗದಿಹ, ವಿಸ್ಮೃತಿಗೆ ಇಳಿಯದಿಹ
ನಿತ್ಯನೂತನ ದಾರಿ ನನ್ನದಿರಲಿ.

ಸೊಕ್ಕಿನಲಿ ತಲೆಯೆತ್ತಿ ನಡೆವ ನಿರಂಕುಶಮತಿ
ಹೀರಿ ಹಾಳಾಗುವನು ಅಹಂಕಾರದ ಬಟ್ಟಲಿಂದ;
ಮಣ್ಣಲ್ಲಿ ಮಣ್ಣಾಗಿ ಇಲ್ಲವಾಗುವನವನು
ಉರುಳುತ್ತ ತಾನೆ ಕಟ್ಟಿದ ಬೆಟ್ಟದಿಂದ

ಯಾರು ಬೇಕೆನ್ನುವರು ಪರಿಶುದ್ಧ ಆಶೆಗಳ ?
ಯಾರು ಸಹಿಸುವರಯ್ಯ ಸೊಕ್ಕಿನತಿಯಾಶೆಗಳ ?

ತನ್ನ ನಾಡಿಗೆ, ನೀತಿ, ಜನಗಳೆಲ್ಲರ ಸುಖಕೆ
ಸಂಗ್ರಾಮ ನಡೆಸುವವ ಧನ್ಯ ಧನ್ಯ ;
ಎಲ್ಲ ಕೆಲಸಗಳಲ್ಲಿ ಈಶ್ವರನ ನೆನಪನ್ನು
ಉಳಿಸಿಕೊಂಡಿರುವಾತ ಅಗ್ರಗಣ್ಯ.

ಯಾವ ಮಾನವ ಸೊಕ್ಕಿ ದೇವರನು ಕೀಳೆಣಿಸಿ
ದೈವನಿಯಮವ ಕಿತ್ತು ಸಂಭ್ರಮಿಪನೋ,
ಯಾವ ವ್ಯಕ್ತಿಯು ಎಲ್ಲ ಕಟ್ಟಳೆಯ ಕಡೆಗಣಿಸಿ
ಪರಮಾತ್ಮನಾಣತಿಯ ಧಿಕ್ಕರಿಪನೋ,

ಅಂಥವನು ಬೀಳುವನು ಯಾತನೆಯ ಜಾಲದಲ್ಲಿ ;
ಬೆಲೆ ತೆರುತ್ತಾನವನು ಕಾಲಕ್ರಮದಲ್ಲಿ,
ಇಲ್ಲದಿರೆ ಬರಸಿಡಿಲು ಹೊಡೆಯುತ್ತದೆ.
ನೋವು ತುಂಬಿದ ಹೃದಯ ಒಡೆಯುತ್ತದೆ ;

ಸತ್ಯವನ್ನಸತ್ಯಕ್ಕೆ ತಿರುಗಿಸಿದಾತ ಸುರಕ್ಷಿತ ಹೇಗೆ
ದೇವರ ಕೋಪದಿಂದ ?
ಒಳ್ಳೆಯದು ಕೆಡುಕೆಂದು ತೀರ್ಮಾನವಾಗುವೆಡೆ
ಹಾಡುವರೆ ಕಬ್ಬಿಗರು ಆಳದಿಂದ ?

ಅಂಥಲ್ಲಿ ಅಬೇಯನ್ ಒಲಂಪಿಯನ್ ಪೀಠ ಇಲ್ಲ ;
ಪೃಥ್ವಿ ಮಧ್ಯದ ಗುಡಿಗೆ ಸ್ಥಾನವಿಲ್ಲ ;
ಇಂಥ ಕಡುಕಷ್ಟದಲ್ಲಿ ನಿನ್ನ ಧ್ವನಿ ಸುಮ್ಮನಿರೆ
ಮಾನವಗೆ ನಿನ್ನ ನುಡಿ ದಿವ್ಯವಲ್ಲ.

ಸರ್ವೇಶ್ವರ, ಸರ್ವವ್ಯಾಪಿ ದೇವ, ಬಾ ಮತ್ತೆ
ನಿನ್ನ ಧ್ವನಿ ನೆನಪಿನಿಂದ ಬಸಿಯುತ್ತಿದೆ ;
ದೇವ ಅಪಾಲೋ ಹೆಸರ ತೇಜಸ್ಸು ಕುಂದುತ್ತೆ
ಆಸ್ತಿಕತೆ ಜನರಲ್ಲಿ ಕುಸಿಯುತ್ತಿದೆ.

(ಧೂಪ ಮತ್ತು ಹೂವಿನಿಂದ ಅಲಂಕೃತ ಜೀವವೃಕ್ಷದ
ಕೊಂಬೆ ಹಿಡಿದ ಯೊಕಾಸ್ಟಾ ಪ್ರವೇಶ)

ಯೊಕಾಸ್ಟ : ಥೀಬ್ಸ್ ನಗರದ ಗಣ್ಯರೆ, ನಾನು ಈ ಧೂಪ ಹಿಡಿದು
ಜೀವವೃಕ್ಷದ ಕೊಂಬೆ ಹೊತ್ತು
ಭಕ್ತಿಪೂರ್ವಕವಾಗಿ ದೇವಾಲಯಕ್ಕೆ ಹೋಗಲು ನಿರ್ಧರಿಸಿದ್ದೇನೆ.
ನಮ್ಮ ದೊರೆಗೆ ಸ್ವಸ್ಥವಿಲ್ಲ, ಅವನ ಉದಾರ ಹೃದಯ
ಭಯಂಕರ ವಿಭ್ರಮೆಗಳಿಂದ ತುಂಬಿದೆ; ನನ್ನ ಹಿತವಚನ
ಅವನನ್ನು ತಟ್ಟುತ್ತಿಲ್ಲ.
ದುರಂತದ ಪ್ರತಿಯೊಂದು ನುಡಿಗೂ ಕಿವಿಗೊಡುತ್ತಿದ್ದಾನೆ.
ಹಾಗಿಲ್ಲದಿದ್ದರೆ ಆತ ವರ್ತಮಾನದ ಬೆಳಕಲ್ಲಿ
ಭೂತದ ದೇವವಾಣಿಯನ್ನು ತಿಳಿಯುತ್ತಿದ್ದ.
(ದೇವಪೀಠದ ಹತ್ತಿರ ಹೋಗುತ್ತಾಳೆ)
ಆದ್ದರಿಂದ ನಿನ್ನೆಡೆಗೆ
ನಗರಪ್ರಭು, ಪ್ರಾರ್ಥನೆಯೊಂದಿಗೆ ಬಂದಿದ್ದೇನೆ.
ಈ ನಮ್ಮ ನಿವೇದನೆಯನ್ನು ಸ್ವೀಕರಿಸು. ಕಳಂಕದಿಂದ
ನಮ್ಮನ್ನು ಮುಕ್ತಗೊಳಿಸು. ದೊರೆಯ ಚಿತ್ತಭ್ರಮಣೆಯ
ಭಯ ನಮ್ಮೆದೆಯನ್ನು ತುಂಬಿದೆ. ನಾವು
ದಿಕ್ಕೆಟ್ಟ ನಾವೆಯ ಧೃತಿಗೆಟ್ಟ ಜನರಂತೆ
ದಿಗ್ಭ್ರಮೆಗೊಂಡಿದ್ದೇವೆ.
(ದೂತನ ಪ್ರವೇಶ)

ದೂತ : ಸ್ನೇಹಿತರೆ, ನೀವು ನನಗೆ ದಾರಿ ತೋರಿಸುತ್ತೀರೆಂದುಕೊಂಡಿದ್ದೇನೆ.
ಈಡಿಪಸ್ ಮನೆ ಎಲ್ಲಿದೆ ಹೇಳಿ, ಅಥವಾ ಅದಕ್ಕೆ ಬದಲು,
ಆತನೇ ಎಲ್ಲಿದ್ದಾನೆ ಹೇಳಿಬಿಡಿ.

ಮೇಳದವ : ಇದೇ ಸ್ಥಳ; ಆತ ಒಳಗಿದ್ದಾನೆ.
ಈಕೆ ಆತನ ಪತ್ನಿ; ಅವನ ಮಕ್ಕಳ ತಾಯಿ.

ದೂತ : ಈಕೆಗೆ ಸಂಸಾರ ಸುಖ ನೆಮ್ಮದಿ ದೊರೆಯಲಿ,
ತನ್ನ ಮದುವೆಯ ಪೂರ್ಣಫಲ ಲಭಿಸಲಿ.

ಯೊಕಾಸ್ಟಾ : ನಿನಗೂ ಅದೇ ನನ್ನ ಶುಭಹಾರೈಕೆ, ನಿನ್ನ ಸನ್ನಡತೆ
ಅಂಥದೇ ಭಾಗ್ಯಕ್ಕೆ ಯೋಗ್ಯವಾಗಿದೆ. ಆದರೆ, ಹೇಳು,
ನೀನು ಬಂದ ಕಾರಣವೇನು ? ನಮಗೆಹೇಳುವುದೇನಾದರೂ ಉಂಟೆ ?

ದೂತ : ಸುಖವಾರ್ತೆ, ಸನ್ಮಹಿಳೆ
ನಿನಗೆ ಮತ್ತು ನಿನ್ನ ಪತಿಗೆ.
ಯೊಕಾಸ್ತಾ : ಎಂಥ ವಾರ್ತೆ ? ನಿನ್ನನ್ನು ಯಾರು ಕಳಿಸಿದರು ?
ದೂತ : ಕಾರಿಂಥ್‌ನಿಂದ ಬಂದಿದ್ದೇನೆ.
ನನ್ನ ವಾರ್ತೆಯಲ್ಲಿ ನಿನಗೆ ಆನಂದವಿದೆ,
ಕೊಂಚವೇ ದುಃಖವಿರಬಹುದಾದರೂ ಕೂಡ.
ಯೊಕಾಸ್ತಾ : ಏನದು ?
ನಮ್ಮನ್ನು ಎರಡು ಬಗೆಯಲ್ಲೂ ಮುಟ್ಟುವ ವಾರ್ತೆ ಎಂಥದು ?
ದೂತ : ಇದು ;
ಇಸ್ತಮಸ್ ಪ್ರಜೆಗಳು ಈಡಿಪಸ್‌ನನ್ನು ತಮ್ಮ ದೊರೆಯೆಂದು
ಕರೆಯಲು ತೀರ್ಮಾನಿಸಿದ್ದಾರೆ.
ಯೊಕಾಸ್ತಾ : ಆದರೆ ವೃದ್ಧ ಪಾಲಿಬಸ್—
ಅವನಿನ್ನೂ ಅಧಿಕಾರದಲ್ಲಿಲ್ಲವೆ ?
ದೂತ : ಇಲ್ಲ, ಸಾವು ಅವನನ್ನು ಸಮಾಧಿಗೆಳೆದಿದೆ.
ಯೊಕಾಸ್ತಾ : ಏನೆಂದೆ ? ಪಾಲಿಬಸ್ ಸತ್ತನೆ ?
ದೂತ : ಅದು ಸತ್ಯವಲ್ಲದಿದ್ದರೆ ನನಗೆ ಸಾವು ಬರಲಿ.
ಯೊಕಾಸ್ತಾ : (ಸೇವಕಿಯೊಬ್ಬಳಿಗೆ) ಬೇಗ ಹೋಗು,
ಇದನ್ನು ನಿನ್ನ ದೊರೆಗೆ ತಿಳಿಸು.
ಓ ದೇವರ ದ್ವಂಧ್ವವಾಕ್ಯಗಳೆ, ಈಗೆಲ್ಲಿದ್ದೀರಿ ನೀವು ?
ಈಡಿಪಸ್ ಒಂದಾನೊಂದು ಕಾಲಕ್ಕೆ
ಇದೇ ವ್ಯಕ್ತಿಯನ್ನು ಕೊಲ್ಲುವ ಭಯದಿಂದ
ತಪ್ಪಿಸಿಕೊಂಡು ಓಡಿದ್ದ.
ವಿಧಿಯ ಇನ್ನೊಂದು ಬಗೆಯ ಕೈವಾಡದಿಂದ ಆತ ಸತ್ತ.
(ಈಡಿಪಸ್ ಪ್ರವೇಶ)
ಈಡಿಪಸ್ : ಪ್ರಿಯೆ ಯೊಕಾಸ್ತ, ನನಗಾಗಿ ಏಕೆ ಹೇಳಿಕಳಿಸಿದೆ ?
ಯೊಕಾಸ್ತಾ : ಈತ ಹೇಳುವುದು ಕೇಳು,
ಆಮೇಲೆ ಆ ಭವಿಷ್ಯವಾಣಿಯ ಬಗ್ಗೆ ಮಾತಾಡು.
ಈಡಿಪಸ್ : ಯಾರೀತ ?
ಈತನ ವರ್ತಮಾನ ಎಂಥದು ?
ಯೊಕಾಸ್ತಾ : ಕಾರಿಂಥ್‌ನಿಂದ ನಿನ್ನ ತಂದೆಯ ಮರಣದ ಸುದ್ದಿ

ತಂದಿದ್ದಾನೆ!

ಈಡಿಪಸ್ : ನಿಜವೆ ?

ನಿನ್ನ ಮಾತಲ್ಲೇ ಹೇಳು.

ದೂತ : ಇನ್ನಿದಕ್ಕಿಂತ ಸರಳವಾಗಿ ಹೇಳಲಾರೆ ; ದೊರೆ ಸತ್ತಿದ್ದಾನೆ.

ಈಡಿಪಸ್ : ಯಾವುದಾದರೂ ದ್ರೋಹದಿಂದಲೆ ?

ಕಾಯಿಲೆಯಿಂದಲೆ ?

ದೂತ : ಸಣ್ಣ ಕಾರಣಗಳೂ ಮುದುಕರಿಗೆ ಪೂರ್ತಿ ವಿರಾಮ ಕೊಡುತ್ತವೆ.

ಈಡಿಪಸ್ : ಹಾಗಾದರೆ ಇದು ಕಾಯಿಲೆಯ ಸಾವು ?

ದೂತ : ಹೌದು, ಜೊತೆಗೆ ವಯಸ್ಸು,

ಈಡಿಪಸ್ : ಹಾ !

ಹಾಗಾದರೆ ಪೈಥಿಯದ ಒಲೆಯನ್ನೇಕೆ ಲೆಕ್ಕಿಸಬೇಕು ?
ತಲೆಯಮೇಲೆ ಹಾರಾಡುವ ಹಕ್ಕಿಗಳಿಗೇಕೆ ಹೆದರಬೇಕು ?
ಅವನನ್ನು ನಾನು ಎಂದೂ, ಒಮ್ಮೆಯೂ ಮುಟ್ಟಲಿಲ್ಲ ಕೂಡ ; ಆದರೆ
ಅವು, ಆ ಹಕ್ಕಿಗಳು, ನಾನು ಪಾಲಿಬಸ್‌ನನ್ನು ಕೊಲ್ಲುವುದಾಗಿ
ಕೂಗಾಡಿದ್ದವು. ಒಂದು ವೇಳೆ ಆತ ನನ್ನ ವಿಯೋಗದಿಂದ—
—ಈ ಅರ್ಥದಲ್ಲಿ ನನ್ನಿಂದಾಗಿ—ಸತ್ತಿರಬಹುದೇ ಹೊರತು
ನನ್ನ ಕೈಯಿಂದಲೂ ಕೊಲೆಯಾಗಿಲ್ಲ, ಇಲ್ಲ, ಪಾಲಿಬಸ್
ತನ್ನೊಂದಿಗೆ ದೇವವಾಣಿಯನ್ನು ಮೂಟೆಕಟ್ಟಿಕೊಂಡು
ಸಮಾಧಿಯಾಗಿದ್ದಾನೆ. ಅವು ಪೊಳ್ಳು ವಾಣಿಗಳು.

ಯೊಕಾಸ್ತಾ : ಹಾಗೆಂದು ನಾನು ಹೇಳಿರಲಿಲ್ಲವೆ ?

ಈಡಿಪಸ್ : ಹೇಳಿದ್ದೆ, ನನ್ನ ದುರ್ಬಲ ಹೃದಯ ನನಗೆ ಮೋಸಮಾಡಿತು.

ಯೊಕಾಸ್ತಾ : ಇವತ್ತಿನಿಂದ ಆ ಬಗ್ಗೆ ಯೋಚಿಸಬೇಡ.

ಈಡಿಪಸ್ : ಆದರೆ—ನನ್ನ ತಾಯಿಯ ಸಂಗದ ಬಗ್ಗೆ
ಹೆದರಬೇಡವೆ ?

ಯೊಕಾಸ್ತಾ : ವಿಧಿ ನಮ್ಮನ್ನು ಆಳುತ್ತದೆ ; ಯಾವುದೂ ಮುಂಚೆ
ತಿಳಿಯುವುದಿಲ್ಲ. ಆದ್ದರಿಂದ ಯಾವನೇ ಆಗಲಿ
ಯಾಕೆ ಹೆದರಬೇಕು ?
ಮನುಷ್ಯ ಇವತ್ತಿನಲ್ಲಿ ಮಾತ್ರ ಬದುಕಬೇಕು ;
ಆದ್ದರಿಂದ ನಿನ್ನ ತಾಯಿಯೊಂದಿಗೆ ಕೂಡುವ ಭಯ ಬಿಟ್ಟುಬಿಡು.

ಎಷ್ಟು ಜನ ತಮ್ಮ ಕನಸಿನಲ್ಲಿ ತಮ್ಮ ತಾಯಿಯರೊಂದಿಗೆ ಮಲಗಿದ್ದಾರೆ!
ಬುದ್ಧಿಯುಳ್ಳ ಯಾವೊಬ್ಬನೂ ಆ ಬಗ್ಗೆ ಚಿಂತಿಸುವುದಿಲ್ಲ.

ಈಡಿಪಸ್ : ಅದು ನಿಜ ಇಷ್ಟೆ—
ನನ್ನ ತಾಯಿ ಜೀವಂತವಾಗಿ ಇಲ್ಲದೇ ಇದ್ದಿದ್ದರೆ!
ಆದರೆ ಆಕೆ ಬದುಕಿದ್ದಾಳೆ, ನಾನು ಹೆದರದಿರಲಾರೆ.

ಯೊಕಾಸ್ತಾ : ಆದರೂ ನಿನ್ನ ತಂದೆ ಸತ್ತ ಸುದ್ದಿ ಅದ್ಭುತವಾಗಿದೆ!

ಈಡಿಪಸ್ : ಅದ್ಭುತ. ಆದರೆ ಬದುಕಿರುವ ಆ
ಹೆಂಗಸೆಂದರೆ ನನಗೆ ಭಯ—

ದೂತ : ಹೇಳು ; ನೀನು ಹೆದರುವ ಆ ಹೆಂಗಸು ಯಾರು ?

ಈಡಿಪಸ್ : ಮೆರೋಪೆ : ಪಾಲಿಬಸ್‌ನ ಹೆಂಡತಿ.

ದೂತ : ಮೆರೋಪೆ ? ನೀನು ಅವಳಿಗೆ ಯಾಕೆ ಹೆದರಬೇಕು ?

ಈಡಿಪಸ್ : ದೇವರ ವಾಣಿಯೊಂದಿದೆ—ಭಯಾನಕ ಹೇಳಿಕೆಯೊಂದಿದೆ.

ದೂತ : ಅದನ್ನು ನನಗೆ ಹೇಳಬಲ್ಲೆಯಾ ?
ಅಥವಾ ಹೇಳುವುದಿಲ್ಲವೆಂದು ಪ್ರತಿಜ್ಞೆಮಾಡಿದ್ದೀಯೋ ?

ಈಡಿಪಸ್ : ಹೇಳಬಲ್ಲೆ ; ಹೇಳುತ್ತೇನೆ ;
ನಾನು ನನ್ನ ತಂದೆಯನ್ನು ಕೊಂದು ತಾಯಿಯನ್ನು ಮದುವೆ ಯಾಗುವುದಾಗಿ
ಅಪಾಲೋ ತನ್ನ ಭವಿಷ್ಯಕಾರನ ಮೂಲಕ ಹೇಳಿಸಿದ !
ಆದ್ದರಿಂದ, ನನ್ನ ಹೆತ್ತವರನ್ನು ನೋಡುವ ಸುಖದಿಂದ
ದೂರ ಇದ್ದೇನೆ ; ಕಾರಿಂಥ್‌ನಿಂದ ದೂರವಿದ್ದೇನೆ.
ಇಲ್ಲಿಯವರೆಗೆ ಯಾವ ತೊಂದರೆಯೂ ಆಗಿಲ್ಲ.

ದೂತ : ಈ ಭಯ ನಿನ್ನನ್ನು ಕಾರಿಂಥ್‌ನಿಂದ ಓಡಿಸಿತೆ ?

ಈಡಿಪಸ್ : ನಾನು ನನ್ನ ತಂದೆಯನ್ನು ಕೊಲ್ಲುವುದನ್ನು ಒಪ್ಪುತ್ತೀಯ ?

ದೂತ : ಆದರೆ ನಾನು ತಂದ ಸುದ್ದಿ ನಿನಗೆ ನೆಮ್ಮದಿ ತಂದಿರಬೇಕು.

ಈಡಿಪಸ್ : ನಿಮ್ಮ ನೆಮ್ಮದಿಯ ವಾರ್ತೆಗಾಗಿ
ನಾನು ಬಹುಮಾನ ಕೊಡಬಲ್ಲೆ.

ದೂತ : ನಿಜ ಹೇಳಬೇಕೆಂದರೆ,
ನೀನು ಕಾರಿಂಥ್‌ಗೆ ಬಂದರೆ ಬಹುಮಾನ ದೊರಕೀತು
ಎಂದು ಆಶಿಸಿದ್ದೆ.

ಈಡಿಪಸ್ : ಇಲ್ಲ ; ನಾನು ಮತ್ತೆ ಹೆತ್ತವರ ಹತ್ತಿರ ಹೋಗುವುದಿಲ್ಲ.

ದೂತ : ಹಾ, ಮಗು,
ಇನ್ನೂ ನಿನಗೆ ನೀನೇನು ಮಾಡುತ್ತಿದ್ದೀ ಎಂಬುದು ಗೊತ್ತಿಲ್ಲ.
ಈಡಿಪಸ್ : ಏನು ನಿನ್ನ ಅರ್ಥ ? ಹೇಳು, ದೇವರಾಣೆ, ಹೇಳು.
ದೂತ : ಇವು ನೀನು ಹೋಗದಿರುವುದಕ್ಕೆ ಕಾರಣಗಳಾಗಿದ್ದರೆ—
ಈಡಿಪಸ್ : ದೇವವಾಣಿ ನಿಜವಾದೀತೆಂಬ ಭಯ ನನಗೆ.
ದೂತ : —ಮತ್ತು ನಿನ್ನ ಹೆತ್ತವರಿಂದಾಗಿ ಪಾಪ ತಟ್ಟೀತೆಂದು ?
ಈಡಿಪಸ್ : ಅದು ಸದಾ ನನ್ನ ಹೃದಯದಲ್ಲಿರುವ ಭಯ.
ದೂತ : ನಿನ್ನ ಯಾವ ಭಯಕ್ಕೂ
ಕಾರಣವಿಲ್ಲವೆಂಬುದನ್ನು ಕಾಣಲಾರೆಯ ?
ಈಡಿಪಸ್ : ಹಾಗೆ ಹೇಗೆ ಹೇಳುತ್ತೀ ? ಅವರು ನನ್ನ ತಂದೆತಾಯಿ ಅಲ್ಲವೆ ?
ದೂತ : ಪಾಲಿಬಸ್ ನಿನ್ನ ತಂದೆಯಲ್ಲ.
ಈಡಿಪಸ್ : ನನ್ನ ತಂದೆ ಅಲ್ಲ ?
ದೂತ : ನನಗೆ ಆತ ತಂದೆಯಾಗಿದ್ದರೆ ನಿನಗೂ.
ಈಡಿಪಸ್ : ಆತ ನಿನಗೆ ಏನೂ ಅಲ್ಲ.
ದೂತ : ನಿನಗೂ ಅಷ್ಟೆ.
ಈಡಿಪಸ್ : ಹಾಗಾದರೆ ಆತ ನನ್ನನ್ನು ಮಗನೆಂದು ಯಾಕೆ ಕರೆದ ?
ದೂತ : ಹೇಳುವೆ ಕೇಳು,
ಬಹು ಹಿಂದೆ ಆತ ನನ್ನಿಂದ ನಿನ್ನನ್ನು ಉಡುಗೊರೆಯಾಗಿ ಪಡೆದ.
ಈಡಿಪಸ್ : ಹಾಗಾದರೆ ಆತ ಹೇಗೆ ನನ್ನನ್ನು
ಅಷ್ಟು ಪ್ರೀತಿಸಿದ—ಮಗನಲ್ಲದಿದ್ದರೂ ಕೂಡ ?
ದೂತ : ಅವನಿಗೆ ಮಕ್ಕಳಿರಲಿಲ್ಲ; ಅದಕ್ಕೇ ಅವನ ಪ್ರೀತಿ
ನಿನ್ನತ್ತ ತಿರುಗಿತು.
ಈಡಿಪಸ್ : ಹಾಗಾದರೆ ನೀನು ?
ನೀನು ನನ್ನನ್ನು ಕೊಂಡೆಯ ? ಅಥವಾ
ಅಕಸ್ಮಾತ್ ಎಲ್ಲಾದರೂ ಸಿಕ್ಕಿದೆನೆ ?
ದೂತ : ಕೆಥಿರಾನ್ ಕಣಿವೆಯಲ್ಲಿ ನೀನು ನನಗೆ ಸಿಕ್ಕೆ.
ಈಡಿಪಸ್ : ಅಲ್ಲಿ ನೀನೇನು ಮಾಡುತ್ತಿದ್ದೆ ?
ದೂತ : ಕುರಿ ಕಾಯುತ್ತಿದ್ದೆ.
ಈಡಿಪಸ್ : ನೀನೊಬ್ಬ ಅಲೆಮಾರಿ ಕುರುಬ, ತಾನೆ ?
ದೂತ : ಆದರೆ ಅವತ್ತು ನಿನ್ನ ರಕ್ಷಕ, ಮಗು,
ಈಡಿಪಸ್ : ಯಾವುದರಿಂದ ನೀನು ನನ್ನನ್ನು ರಕ್ಷಿಸಿದೆ ?

ದೂತ : ನಿನ್ನ ಕಣಕಾಲು ನಿನಗೆ ಅದನ್ನು ಹೇಳಬೇಕು.

ಈಡಿಪಸ್ : ಹಾ, ದೂತ,
ಚಿಕ್ಕಂದಿನ ಆ ನೋವನ್ನು ಯಾಕೆ ಜ್ಞಾಪಿಸುತ್ತೀ ?

ದೂತ : ಕಟ್ಟಿದ್ದ ನಿನ್ನ ಕಣ ಕಾಲುಗಳನ್ನು ನಾನು ಬಿಚ್ಚಿದೆ.

ಈಡಿಪಸ್ : ಆ ಗುರುತು ನನಗೆ ಪ್ರಜ್ಞೆ ಬಂದಾಗಿನಿಂದ ಇದೆ,

ದೂತ : ಅದರಿಂದಲೇ ಈ ನನ್ನ ಹೆಸರು ನಿನಗೆ ಬಂತು.

ಈಡಿಪಸ್ : ಹಾ ! ಅದಕ್ಕೆ ಕಾರಣ ಯಾರು ? ನನ್ನ ತಂದೆಯೋ ತಾಯಿಯೋ ?

ದೂತ : ನನಗೆ ಗೊತ್ತಿಲ್ಲ.
ನನಗೆ ನಿನ್ನನ್ನು ಕೊಟ್ಟವನಿಗೆ ಅದು ಗೊತ್ತು.

ಈಡಿಪಸ್ : ಹಾಗಾದರೆ ನಾನು ಸಿಕ್ಕಿದ್ದು ನಿನಗಲ್ಲ, ಇನ್ನೊಬ್ಬನಿಗೆ ?

ದೂತ : ಇನ್ನೊಬ್ಬ ನಿನ್ನನ್ನು ಕೊಟ್ಟ.

ಈಡಿಪಸ್ : ಯಾರಾತ ? ಯಾರೆಂದು ಹೇಳಬಲ್ಲೆಯ ?

ದೂತ : ಆತ ಲಾಯಿಸ್ ಕಡೆಯವನೆಂದು ಕಾಣುತ್ತದೆ.

ಈಡಿಪಸ್ : ಇಲ್ಲಿ ಒಮ್ಮೆ ದೊರೆಯಾಗಿದ್ದ ಲಾಯಿಸ್ ?

ದೂತ : ಹೌದು, ದೊರೆ ಲಾಯಿಸ್ ; ಈ ವ್ಯಕ್ತಿ ದೊರೆಯ ಊಳಿಗದ ಕುರುಬ.

ಈಡಿಪಸ್ : ಆತ ಇನ್ನೂ ಇದ್ದಾನೆಯೆ ? ನಾನು ನೋಡಬಹುದೆ ?

ದೂತ : ಇಲ್ಲಿಯ ಜನಕ್ಕೇ
ಆ ವಿಷಯ ಚೆನ್ನಾಗಿ ಗೊತ್ತಿದೆ.

ಈಡಿಪಸ್ : ಇಲ್ಲಿಯ ಯಾರಿಗಾದರೂ
ಈತ ಹೇಳುವ ಆ ಕುರುಬ ಗೊತ್ತೆ ?
ಆತನನ್ನು ಪಟ್ಟಣದೊಳಗೆ, ಹೊರಗೆ ಎಲ್ಲಾದರೂ
ನೋಡಿದ್ದೀರಾ ?
ನೋಡಿದ್ದರೆ ಹೇಳಿ. ಎಲ್ಲ ಈಗಲೆ ಸ್ಪಷ್ಟವಾಗಬೇಕು.

ಮೇಳದವ : ನೀನು ಈಗಾಗಲೆ ಕರೆಕಳಿಸಿರುವ ಕುರುಬನೇ
ಈ ಹೇಳುವ ವ್ಯಕ್ತಿ ಅನ್ನಿಸುತ್ತದೆ. ಬಹುಶಃ ಯೊಕಾಸ್ಟಾಳಿಗೆ
ಗೊತ್ತಿರಬಹುದು.

ಈಡಿಪಸ್ : ಯೊಕಾಸ್ಟಾ, ಆತನ ಬಗ್ಗೆ ಏನಾದರೂ ಗೊತ್ತೆ ?
ನಾನು ಹೇಳಿಕಳಿಸಿರುವ ವ್ಯಕ್ತಿ ಆತನೆ ?
ಈತ ಹೇಳುವ ಕುರಿಗಾಹಿಯೇ ಅವನು ?
ದೇವರಾಣೆ, ಹೇಳು.

ಯೊಕಾಸ್ತಾ : (ಭಯದಿಂದ ಬೆಳ್ಳಗಾಗಿ) ಅವನು ಯಾವನಾದರೆ
ಏನಾಗಬೇಕಾಗಿದೆ ಈಗ ? ಇದ್ದದ್ದು ಏನೂ
ಬೇರೆಯಾಗುವುದಿಲ್ಲ—ಮರೆತುಬಿಡು, ಅದರಿಂದ
ಏಂಥದೂ ಆಗುವುದಿಲ್ಲ.

ಈಡಿಪಸ್ : ಹುಚ್ಚಿ, ನಾನಿದರೊಂದಿಗೆ ಕೊನೆ ಮುಟ್ಟಬೇಕು,
ನನ್ನ ಜನನದ ಗೂಢ ತಿಳಿವವರೆಗೆ.

ಯೊಕಾಸ್ತಾ : ದಯೆಮಾಡಿ—ನಿನ್ನ ಪ್ರಶ್ನೆಗಳನ್ನು ಸಾಕುಮಾಡು ;
ನಿನ್ನ ಪ್ರಾಣ ನಿನಗೆ ಅಷ್ಟು ಕ್ಷುಲ್ಲಕವೆ ?
ನನ್ನ ಗೋಳು ನನಗೆ ಸಾಕಷ್ಟಿಲ್ಲವೆ ?

ಈಡಿಪಸ್ : ಆತಂಕಪಡಬೇಡ :
ಒಂದು ವೇಳೆ ನನ್ನ ತಾಯಿ ಸೇವಕಿಯಾಗಿದ್ದರೆ,
ಗುಲಾಮರ ಕುಲದಲ್ಲಿ ಹುಟ್ಟಿದ್ದರೆ, ಆ ಹೀನತೆ
ನಿನಗೆ ತಟ್ಟಲಾರದು ಇದರಿಂದ.

ಯೊಕಾಸ್ತಾ : ದಯವಿಟ್ಟು ನನ್ನ ಮಾತು ಕೇಳು.
ಬೇಡಿಕೊಳ್ಳುತ್ತೇನೆ : ಇದನ್ನು ಮಾಡಬೇಡ !

ಈಡಿಪಸ್ : ನಾನು ಕೇಳುವುದಿಲ್ಲ ; ಸತ್ಯ ಹೊರಬೀಳಬೇಕು.

ಯೊಕಾಸ್ತಾ : ನಿನ್ನ ಕ್ಷೇಮಕ್ಕಾಗಿ ನಾನು ಕೇಳಿಕೊಳ್ಳುತ್ತಿದ್ದೇನೆ.

ಈಡಿಪಸ್ : ಆದರೆ ನನ್ನ ಕ್ಷೇಮ ನನ್ನ ಸಹನೆಯನ್ನು ಕೊಂದಿದೆ ;
ಅಂಥ ಕ್ಷೇಮ ನನಗೆ ಬೇಕಿಲ್ಲ,

ಯೊಕಾಸ್ತಾ : ನೀನು ತಪ್ಪು ಮಾಡುತ್ತಿದ್ದೀ :
ನೀನು ಯಾರೆಂಬುದು ಎಂದೂ ನಿನಗೆ ಗೊತ್ತಾಗದಿರಲಿ !

ಈಡಿಪಸ್ : ನಿಮ್ಮಲ್ಲೊಬ್ಬ ಹೋಗಿ ಆ ಕುರುಬನನ್ನು ಕರೆದುತನ್ನಿ,
ಈ ಹೆಂಗಸು ತನ್ನ ರಾಜಮರ್ಯಾದೆಯ ಬಗ್ಗೆ ಕೊಚ್ಚಿಕೊಳ್ಳಲಿ.

ಯೊಕಾಸ್ತಾ : ಹಾ, ನಿರ್ಗತಿಕ !
ನಿನ್ನ ಬಗ್ಗೆ ನನ್ನಲ್ಲಿರುವುದು ಅದೊಂದೇ ಮಾತು ;
ನನ್ನಲ್ಲಿ ಕೊನೆಗೂ ಉಳಿಯುವುದು ಅದೊಂದೇ ಮಾತು.
(ಅರಮನೆಯೊಳಕ್ಕೆ ಹೋಗುವಳು)

ಮೇಳದವ : ಆಕೆ ಏಕೆ ನಮ್ಮನ್ನು
ಬಿಟ್ಟುಹೋದಳು ಈಡಿಪಸ್ ? ಯಾಕೆ ದುಃಖಭಾರದಲ್ಲಿ ಹಾಗೆ
ಹೋದಳು ?
ಆಕೆಯ ಮೌನ ನನ್ನಲ್ಲಿ ಭಯ ಹುಟ್ಟಿಸುತ್ತಿದೆ ;

ಇದರಿಂದ ಭೀಕರವಾದದ್ದು ಬಂದೀತು !

ಈಡಿಪಸ್ : ಬರಲಿ !
ನಾನೆಂಥ ಕೀಳುಜನರಲ್ಲಿ ಹುಟ್ಟಿದ್ದರೂ, ಅದು ನನಗೆ ಗೊತ್ತಾಗಬೇಕು.
ಮಹಾರಾಣಿ, ಎಲ್ಲ ಹೆಂಗಸರಂತೆ, ನನ್ನ
ಕೀಳು ಜನ್ಮದ ಬಗ್ಗೆ ಅಸಹ್ಯಪಡುತ್ತಿರಬಹುದು.
ನಾನು ಅದೃಷ್ಟದ ಕೂಸಾಗಿದ್ದೇನು ; ಆದರೆ ಅದರಿಂದ
ನನ್ನ ತೇಜೋಭಂಗವಾಗಲಾರದು.
(ಹೋಗುವರು)

* * *

ಮೇಳದವ : ನಾಳೆ ಹುಣ್ಣಿಮೆಯ ತುಂಬು ಬೆಳುದಿಂಗಳಿಗೆ
ಕೆಥಿರಾನ್ ಕುಣಿಯುವುದು ಹಿಗ್ಗಿ ಹಿಗ್ಗಿ ;
ಹೆತ್ತು ಸಲಹಿದ ನಿನ್ನ ನಮ್ಮ ದೊರೆ ಈಡಿಪಸ್
ಸ್ತುತಿಸುವನು, ಕೆಥಿರಾನ್, ಅಡಿಗೆ ಬಗ್ಗಿ ;
ದೊರೆಯು ನೆಮ್ಮದಿಯಿಂದ ಥೀಬ್ಸ್ ನಗರ
ನಲಿದು ನೆಲೆಗೊಳ್ಳುವುದು ಸುಖದ ಸುಗ್ಗಿ.

ನಿನ್ನ ಹೆತ್ತವಳೆಲ್ಲಿ, ಎಲ್ಲಿ ಮನೆಮಾಡಿಹಳು
ಹೇಳಲಾರೆಯ ಮಗುವೆ, ಹೆಮ್ಮೆಯಲ್ಲಿ ?
ವೃದ್ಧಾಪ್ಯವರಿಯದಿಹ ಕುಲದ ಹೆಣ್ಣನ್ನಪ್ಪಿ
ಪ್ಯಾನ್ ಮೂಡಿಸಿದನೇನು ಗಿರಿಗಳಲ್ಲಿ ?
ವನಜೀವಿ ಲೊಕ್ಸಿಯಸ್ ಜನ್ಮವಿತ್ತನೆ ನಿನಗೆ
ಕಾಡನಲೆಯುವ ಒಬ್ಬ ಚೆಲುವೆಯಲ್ಲಿ ?
ಗಿರಿರಾಜ ದಯೊನಿಸಸ್ ಸಸ್ಯಶಾಮಲೆ ಜೊತೆಗೆ
ಕುಣಿದು ಪಡೆದನೆ ಆಟ, ಬೇಟದಲ್ಲಿ ?

ಈಡಿಪಸ್ : ಹಿರಿಯರೆ, ನಮಗೆ ಬೇಕಾಗಿರುವ ಆ ಕುರುಬ
ನನಗೆ ಗೊತ್ತಿಲ್ಲ; ಆದರೆ, ಅಲ್ಲಿ ಬರುತ್ತಿರುವ
ಅವನ ವಯಸ್ಸು, ಅವನ ಜೊತೆಗಿರುವ ನಮ್ಮ ದೂತನ್ನ

ನೋಡಿದರೆ, ಆತ ಬಂದನೆಂದು ಕಾಣುತ್ತದೆ.
ನೀವು ಅವನನ್ನು ಈಗಾಗಲೆ ನೋಡಿದ್ದರೆ
ನಿಮಗೆ ಗೊತ್ತಾಗುತ್ತದೆ.

ಮೇಳದವ : ನನಗೆ ಗೊತ್ತು, ಆತ ಲಾಯಿಸ್ ದೊರೆಯ ಬಳಿ ಇದ್ದವನು;
ನೀನು ನಂಬಬಹುದು.

ಈಡಿಪಸ್ : ಕಾರಿಂಥ್‌ನ ವ್ಯಕ್ತಿ, ನೀನು ಹೇಳು,
ಈ ಕುರುಬನೇ ಏನು ನೀನು ಹೇಳಿದ್ದು ?

ದೂತ : ಖಂಡಿತ ಇವನೆ.

ಈಡಿಪಸ್ : (ಕುರುಬನಿಗೆ) ಇತ್ತ ಬಾ, ನನ್ನನ್ನು ನೋಡು,
ನಾನು ಕೇಳುವ ಎಲ್ಲ ಪ್ರಶ್ನೆಗಳನ್ನು ಉತ್ತರಿಸಬೇಕು ;
ನೀನು ಲಾಯಿಸ್ ಹತ್ತಿರ ಇದ್ದೆಯ ?

ಕುರುಬ : ಇದ್ದೆ. ಗುಲಾಮನಾಗಿ ಹುಟ್ಟಿದೆ ;
ಅವನ ಮನೆಯಲ್ಲಿ ಬೆಳೆದೆ.

ಈಡಿಪಸ್ : ಹೇಳು :
ನೀನು ಅವನ ಮನೆಯಲ್ಲಿ ಯಾವ ಬಗೆಯ ಕೆಲಸದಲ್ಲಿದ್ದೆ ?

ಕುರುಬ : ಬದುಕಿನ ಬಹುಭಾಗ ಅವನ ಕುರಿಗಾಹಿಯಾಗಿದ್ದೆ.

ಈಡಿಪಸ್ : ಸಾಮಾನ್ಯವಾಗಿ ಕುರಿ ಕಾಯಲು ಎಲ್ಲಿಗೆ ಹೋಗುತ್ತಿದ್ದೆ ?

ಕುರುಬ : ಕೆಲವೊಮ್ಮೆ ಕೆಥಿರಾನ್‌ಗೆ ; ಕೆಲವೊಮ್ಮೆ
ಹತ್ತಿರದ ಬೆಟ್ಟಗಳಿಗೆ.

ಈಡಿಪಸ್ : ಅಲ್ಲಿ ಎಂದಾದರೂ ಈ ವ್ಯಕ್ತಿಯನ್ನು ನೋಡಿದ್ದೆಯ ?

ಕುರುಬ : ಇಲ್ಲ. ನನಗೆ ನೆನಪಿರುವಷ್ಟಿಗೆ ನೋಡಿಲ್ಲ.

ದೂತ : ಅದು ಆಶ್ಚರ್ಯವೇನಲ್ಲ, ಪ್ರಭು.
ನಾನು ಆತನ ನೆನಪನ್ನು ಕೆದಕುತ್ತೇನೆ.
ಇವನಿಗೆ ನೆನಪಿರಬೇಕು ನಾವಿಬ್ಬರೂ ಇಡೀ ಆರುತಿಂಗಳ ಕಾಲ
ಮೂರು ಸಲ ಒಟ್ಟಿಗೇ ಕಳೆದದ್ದು ;
ಗ್ರೀಷ್ಮ, ಶರತ್‌ಗಳಲ್ಲಿ ಕೆಥಿರಾನ್ ಸುತ್ತಮುತ್ತ ಇದ್ದದ್ದು ;
ಶರದೃತುಗಳಲ್ಲಿ ನಿನ್ನ ಮಂದೆಯನ್ನು
ಲಾಯಿಸ್‌ನ ರೊಪ್ಪಕ್ಕೆ ಹೊಡೆದೊಯ್ಯುತ್ತಿದ್ದೆ, ನಾನು
ನನ್ನ ರೊಪ್ಪಕ್ಕೆ ಹೋಗುತ್ತಿದ್ದೆ ; ಅಲ್ಲವೆ ?

ಕುರುಬ : ಹೌದು, ಅದು ನಿಜ. ಆದರೆ ಅದು ಬಹಳ ಹಿಂದೆ.

ದೂತ : ಹಾಗಾದರೆ, ನೆನಪಿದೆಯ, ಆ ಕಾಲದಲ್ಲಿ

		ನೀನು ನನಗೊಂದು ಗಂಡುಮಗು ಕೊಟ್ಟು ನನ್ನ ಮಗನಂತೆ ಬೆಳೆಸಲು ಹೇಳಿದ್ದು ?
ಕುರುಬ	:	ಕೊಟ್ಟರೆ ಏನೀಗ ? ನೀನು ಹೇಳಲು ಪ್ರಯತ್ನಿಸುತ್ತಿರುವುದು ಏನನ್ನ ?
ದೂತ	:	ದೊರೆ ಈಡಿಪಸ್ ಆ ಗಂಡುಮಗು !
ಕುರುಬ	:	ದರಿದ್ರದವನೇ, ನಾಲಗೆ ಬಿಗಿಹಿಡಿ !
ಈಡಿಪಸ್	:	ಅಂಥ ಮಾತು ಸಲ್ಲದು ; ನಾಲಗೆ ಬಿಗಿಹಿಡಿಯಬೇಕಾದವನು ನೀನು ; ಅವನಲ್ಲ.
ಕುರುಬ	:	ನನ್ನ ದೊರೆ, ನನ್ನ ದಣಿ, ನಾನು ಮಾಡಿದ ತಪ್ಪಾದರೂ ಏನು ?
ಈಡಿಪಸ್	:	ಮಗುವಿನ ಬಗ್ಗೆ ಅವನ ಪ್ರಶ್ನೆಗಳಿಗೆ ನೀನು ಉತ್ತರ ಹೇಳಿಲ್ಲ.
ಕುರುಬ	:	ಅವನಿಗೆ ಗೊತ್ತಿಲ್ಲ....ಕೇವಲ ತೊಂದರೆ ಹುಟ್ಟಿಹಾಕುತ್ತಾನೆ.
ಈಡಿಪಸ್	:	ಸ್ಪಷ್ಟವಾಗಿ ಹೇಳು, ಇಲ್ಲದಿದ್ದರೆ ನಿನಗೆ ತೊಂದರೆ ಕಾದಿದೆ.
ಕುರುಬ	:	ದೇವರಾಣೆ, ಮುದುಕನೊಬ್ಬನನ್ನು ಗೋಳಾಡಿಸಬೇಡಿ !
ಈಡಿಪಸ್	:	ನಿಮ್ಮಲ್ಲೊಬ್ಬ ಬನ್ನಿ ; ಈತನ ಕೈಗಳನ್ನು ಗಟ್ಟಿಯಾಗಿ ಕಟ್ಟಿಹಾಕಿ.
ಕುರುಬ	:	ಸುಖ ತೊರೆದ ದೊರೆ, ನಿನಗೆ ಇನ್ನೆಷ್ಟು ಗೊತ್ತಾಗಬೇಕು ?
ಈಡಿಪಸ್	:	ಈತ ಹೇಳುತ್ತಿರುವ ಕೂಸನ್ನು ಈತನಿಗೆ ಕೊಟ್ಟೆಯ ?
ಕುರುಬ	:	ಕೊಟ್ಟೆ : ನಾನವತ್ತು ಸತ್ತಿದ್ದರೆ ಒಳ್ಳೆಯದಿತ್ತು.
ಈಡಿಪಸ್	:	ನೀನಿವತ್ತು ಸಾಯುತ್ತೀ, ಸತ್ಯ ಹೇಳದಿದ್ದರೆ.
ಕುರುಬ	:	ಸತ್ಯ ಹೇಳಿದರೆ, ನಾನು ಸತ್ತವನಿಗಿಂತ ಕಡೆ.
ಈಡಿಪಸ್	:	ಸರಿ, ತಡಮಾಡಲು ನೀನು ನಿರ್ಧರಿಸಿದ್ದರೆ—
ಕುರುಬ	:	ಇಲ್ಲ ! ಹುಡುಗನನ್ನು ಕೊಟ್ಟುದಾಗಿ ನಾನಾಗಲೇ ಹೇಳಿದ್ದೇನೆ.
ಈಡಿಪಸ್	:	ಆತ ಎಲ್ಲಿ ಸಿಕ್ಕಿದ ? ನಿನ್ನ ಮನೆಯಲ್ಲೆ ? ಮತ್ತೆಲ್ಲಾದರೂ ಬೇರೆ ಕಡೆಯೆ ?

ಕುರುಬ : ಮನೆಯಲ್ಲಲ್ಲ. ಯಾವನೋ ಒಬ್ಬ ನನಗೆ ಆತನ್ನ ಕೊಟ್ಟ.
ಈಡಿಪಸ್ : ಯಾರು ಕೊಟ್ಟವರು ? ಆತ ಯಾರ ಜೀತದಲ್ಲಿದ್ದ ಗೊತ್ತೆ ?
ಕುರುಬ : ನನ್ನ ದೊರೆ, ದೇವರಾಣೆ, ಇನ್ನು ಹೆಚ್ಚು ಕೇಳಬೇಡ !
ಈಡಿಪಸ್ : ನಾನು ಮತ್ತೆ ಕೇಳಬೇಕಾಗಿ ಬಂದರೆ
ನೀನು ಸತ್ತಂತೆ ಎಂದು ತಿಳಿ.
ಕುರುಬ : ಹಾಗಾದರೆ........ಹೇಳುವೆ : ಲಾಯಿಸ್‌ನ ಅರಮನೆಯಿಂದ
ತಂದ ಮಗು ಅದು.
ಈಡಿಪಸ್ : ಜೀತದವರ ಮಗುವೆ ? ಲಾಯಿಸ್ ವಂಶಕ್ಕೆ ಸೇರಿದ್ದೆ ?
ಕುರುಬ : ಹಾ ! ನಾನು ಭೀಕರ ಹೇಳಿಕೆಗಳಿಗೆ ಹತ್ತಿರ ಇದ್ದೇನೆ.
ಈಡಿಪಸ್ : ನಾನೂ ಭೀಕರ ಅರಿವಿನ ಹತ್ತಿರ ;
ಆದರೆ ನಾನು ಕೇಳಲೇಬೇಕು.
ಕುರುಬ : ಹೇಳಲೇಬೇಕಾಗಿದ್ದರೆ........ಅದು ಲಾಯಿಸ್‌ನ ಮಗುವೆಂದು
ಅವರು ಹೇಳಿದರು, ಆದರೆ ನಿನ್ನ ಹೆಂಡತಿ ಅದನ್ನು ತಿಳಿಸಬಲ್ಲಳು.
ಈಡಿಪಸ್ : ನನ್ನ ಹೆಂಡತಿ ?
ಆಕೆ ಅದನ್ನು ನಿನಗೆ ಕೊಟ್ಟಳೆ ?
ಕುರುಬ : ಹೌದು ಪ್ರಭು, ಆಕೆಯೇ ಕೊಟ್ಟದ್ದು.
ಈಡಿಪಸ್ : ಯಾಕೆಂದು ನಿನಗೆ ಗೊತ್ತೆ ?
ಕುರುಬ : ಅದರ ಕತೆ ಮುಗಿಸಲಿಕ್ಕೆ—ಅಂದರು.
ಈಡಿಪಸ್ : ಎಂಥ ಹೇಯ ತಾಯಿ !
ಕುರುಬ : ಭವಿಷ್ಯವಾಣಿ ಗೊತ್ತಿತ್ತು........
ಈಡಿಪಸ್ : ಹೇಳು.
ಕುರುಬ : ಹುಡುಗ ತನ್ನ ತಂದೆಯನ್ನು ಕೊಲ್ಲುತ್ತಾನೆಂದು—
ಈಡಿಪಸ್ : ಹಾಗಾದರೆ ನೀನು ಈ ಮುದುಕನಿಗೇಕೆ
ಆ ಕೂಸನ್ನು ಕೊಟ್ಟೆ ?
ಕುರುಬ : ನನಗೆ ಮಗುವಿನ ಬಗ್ಗೆ ಕರುಣೆ ಬಂತು ಪ್ರಭು ;
ಅಬನ್ನೀತ ಈ ದೇಶದಿಂದ ದೂರಕ್ಕೆ,
ತನ್ನ ದೇಶಕ್ಕೆ ಒಯ್ಯಬಹುದೆಂದು ತಿಳಿದೆ.
ಈ ಮಗುವನ್ನು ರಕ್ಷಿಸಿದ :
—ಆದರೆ ಈ ಭಾಗ್ಯಕ್ಕೆ !
ಯಾಕೆಂದರೆ ನೀನು ನಿಜಕ್ಕೂ ನೀನು ಹೇಳುವ ನೀನಾಗಿದ್ದರೆ,
ಯಾವೊಬ್ಬನೂ ಈಡಿಪಸನಷ್ಟು ನಿರ್ಗತಿಕನಲ್ಲ !

ಈಡಿಪಸ್ : ಹಾ ದೇವರೇ
ಅದು ಸತ್ಯ !
ಎಲ್ಲ ಭವಿಷ್ಯವಾಣಿಗಳು ಸತ್ಯ !
ಈಗ,
ಹುಟ್ಟಿನಲ್ಲಿ ಪಾಪಿ ಈಡಿಪಸ್, ಮದುವೆಯಲ್ಲಿ ಪಾಪಿ,
ತನ್ನ ಕೈಯಿಂದ ಹರಿಸಿದ ರಕ್ತದಲ್ಲಿ ಕೂಡ ಪಾಪಿ ಈತ ;
ಓ ಬೆಳಕೆ, ಎಲ್ಲ ಬಯಲಾದ ಬದುಕುಳ್ಳ ನನ್ನನ್ನ ಮುಚ್ಚು,
ನಾನು ಮತ್ತೆ ನಿನ್ನನ್ನು ನೋಡದಂತಾಗಲಿ !
(ಅರಮನೆಯೊಳಕ್ಕೆ ನುಗ್ಗುತ್ತಾನೆ)

*   *   *

ಮೇಳ : ಅಯ್ಯೋ ಮನುಷ್ಯ ಕುಲವೇ....

ನಿನ್ನ ಬದುಕೊಂದು ಸೊನ್ನೆ !
ಮನುಷ್ಯನಾದವಗೆ ನಿನ್ನಂಥ ಭಾಗ್ಯವಿತ್ತೆ ?
ಎಲ್ಲ ಭಾಗ್ಯವಿತ್ತೆಂದು ತಿಳಿದಿದ್ದೆ, ತೋರಿದ್ದೆ, ಕೊನೆಗೆ
ಎಲ್ಲರಿಗಿಂತ ಕೆಳಗೆ ಬಿದ್ದೆ.

ನಿನ್ನ ವಿಧಿ ವಿನಾಶದ್ದು ಈಡಿಪಸ್ ;
ಮನುಜನಾದವಗೆ ತಟ್ಟದಂಥ ಪಾಡು,

ಓ ಕ್ರೂರ ಕಂಬನಿಯ ನಗ್ನ ರಾಜ,
ಓ ಎಲ್ಲ ಬದಲಾದ ಈಡಿಪಸ್ ;
ನಿನ್ನ ಭಾಗ್ಯವ ಕಂಡಾತ ತಿಳಿಯುವನು
ಹುಟ್ಟಿದವ ಸುಖಿಯಾಗಲಾರ ಎಂದು ;
ಅಂದಿನಿಂದಿನ ನಿನ್ನ ಪಾಡ ಕಂಡು.

ಅಂಬಿನಂತಿದ್ದ ನಿನ್ನ ಮನವ
ಎಷ್ಟು ಬಿಗಿಯಾಗೆಳೆದೆ ಓ ಅಂಬುಗಾರ !
ಮಬ್ಬುಗತ್ತಲ ಲಕ್ಷ್ಯದತ್ತ ತಿರುಗಿ
ಬಿಗಿದೆಂತುಬಿಟ್ಟೆ ಓ ಬಿಲ್ಲುಗಾರ !

7]

ವಶಪಡಿಸಿಕೊಂಡೆ ನೀನರಿಯುದವಳ ;
ಸಿಂಹನಖಗಳ ಹೆಣ್ಣ ಗೆದ್ದೆ ;
ಥೀಬ್ಸ್ ಜನರ ಎದೆಗೆ ನೆಮ್ಮದಿಯು ತಂದೆ,
ಕಾಲನ ಎದುರು ಕಲ್ಲಾಗಿ ನಿಂತೆ.
ನಮ್ಮ ದುಗುಡಕ್ಕೊಂದು ಕೋಟೆಯಾಗಿದ್ದೆ.

ರಾಜಾಧಿರಾಜ, ಕಟ್ಟಳೆಯ ಕಟ್ಟಾಳು,
ಗಾಂಭೀರ್ಯ ವ್ಯೈವೆತ್ತ ಈಡಿಪಸ್ ;
ಯಾರಿದ್ದ ನಿನ್ನಂತೆ ಖ್ಯಾತಿವೆತ್ತು,
ಯಾರಿದ್ದ ನಿನ್ನಂತೆ ಅಧಿಕಾರ ವ್ಯೈವೆತ್ತು.

ಈಗ ಯಾರಿದ್ದಾರೆ ಇವನಂತೆ
ಕರುಳ ಕಲಕುವ ಜೀವ,
ಯಾವ ಜೀತದ ಆಳು ಈತನಿಗೆ ಕಡೆ,
ಯಾವನ ವಿಧಿ ಈ ಸ್ಥಿತಿಗಿಳಿಸಿದೆ ?

ಓ ಈಡಿಪಸ್, ಅಖಂಡ ದೇಶಪ್ರೇಮಿ,
ನಿನ್ನನ್ನ ಬೆಳಕಿಂದಟ್ಟಿ ಬಾಗಿಲು
ನಿನಗೆ ಕತ್ತಲ ಸೂಡಿದೆ ;
ತಂದೆ ಮಲಗಿದ್ದಲ್ಲಿ ಮಗನೂ ಮಲಗಿ,
ಒಬ್ಬನಿಗೆ ಆದ ವಧು ಇನ್ನೊಬ್ಬಗೂ ಆಗಿ
ಒಬ್ಬ ಬಿತ್ತಿದ್ದ ಭೂಮಿ ಇನ್ನೊಬ್ಬನನ್ನೂ ಸಹಿಸಿ,
ಈಗೆಲ್ಲ ಸೈರಣೆ ಮುಗಿದಿದೆ !

ಆದರೆ ಕಾಲ ಮುಚ್ಚುವನು ನಮ್ಮ ಎಲ್ಲ ಕಣ್ಣ,
ಎಲ್ಲ ಕೃತ್ಯಗಳ ನ್ಯಾಯ ಅವನಲ್ಲಿ ದೊರೆವುದಣ್ಣ ;
ಸಂಪೂರ್ಣ ಅರಿಯದೆ ಭೂತದಲಿ ಹೂತಿಟ್ಟ ನಿನ್ನ ಗುಟ್ಟು,
ತಂದೆಯನ್ನು ಕೊಂದು ತಾಯಿ ಜೊತೆ ಮಲಗಿದ್ದ ನಿನ್ನ ಪಟ್ಟು,
ನ್ಯಾಯ ದೊರೆತಂದು ಕೂಡಲೇ ಹೊರಗೆ ಬಿತ್ತು.

ವಿಧಿಯ ಕೈವಾಡದಂತೆ ಶಿಕ್ಷೆ ಬಂತು,
ಅವನೆಲ್ಲ ಭಾಗ್ಯ ಕೆಳಗೆ ಬಿತ್ತು ;
ನಾನಿಲ್ಲಿ ಬದುಕಿ ಉಸಿರಾಡಲಾರೆ,
ಆತನಿಗೆ ಜೀವವಿರುವಷ್ಟು ಹೊತ್ತು.

ನಾನು ಅಳುತ್ತಿದ್ದೇನೆ ಜಗದ ಪರದೇಶಿಗಾಗಿ,
ಎಲ್ಲ ಸೂತಕಕ್ಕೆಳೆದ ಪಾಪಿಗಾಗಿ ;
ನಾನು ನೋಡದ ವೇಳೆ ನನ್ನ ಪೊರೆವನ ಹಾಗೆ
ನನ್ನ ದೋಷಕ್ಕೆಳೆದ ಪಾಪಿಗಾಗಿ.

ಎರಡನೆ ದೂತ : ಥೀಬ್ಸ್ ನಗರದ ಜನರೆ, ರಾಷ್ಟ್ರದ ಮಾನ್ಯ ವ್ಯಕ್ತಿಗಳೇ,
ನೀವು ಲ್ಯಾಬ್ಡಕಸ್ ಮನೆತನದ ಧ್ವನಿ ಕೇಳಬೇಕಿದ್ದರೆ,
ಸಹಿಸಬೇಕಿದ್ದರೆ, ಮರ್ಯಾದೆ ತೋರಬೇಕಿದ್ದರೆ,
ಎಂಥ ಅವಮಾನಕರ ಸಂಗತಿ !

ಗೊತ್ತಿಲ್ಲದೆ ಮಾಡಿದ್ದಲ್ಲ,
ಬೇಕೆಂತಲೇ ಮಾಡಿದ ಪಾಪವನ್ನು ಈ ನಗರ ಪಡೆದಿದೆ ;
ಇದು ಅತ್ಯಂತ ಭ್ರಷ್ಟ ಸ್ಥಳವಾಗಿದೆ ; ಪುಣ್ಯನದಿ
ಇಸ್ಟರ್, ಫ್ಯಾಸಿಸ್‌ಗಳು ಸಹ ತೊಳೆಯಲಾರದಂಥ ಕೊಳಕು
ಈ ನಗರದಲ್ಲಿದೆ.
ನಾವು ಗೊತ್ತಿದ್ದೂ ಕಟ್ಟಿಕೊಂಡ ಪಾಪ ಅತ್ಯಂತ ಹೇಯ
ವಾದದ್ದು.

ಮೇಳದವ : ಗೆಳೆಯ, ಈಗಾಗಲೇ ನಮಗೆ ಸಾಕಷ್ಟು ದುಃಖವಿದೆ ;
ನೀನು ತಂದಿರುವ ಹೊಸ ವ್ಯಥೆ ಯಾವುದು ?

ಎರಡನೆ ದೂತ : ಮಹಾರಾಣಿ ಮರಣಹೊಂದಿದ್ದಾಳೆ.

ಮೇಳದವ : ಯೊಕಾಸ್ಟಳಿಗೆ ಮರಣವೆ ? ಯಾರಿಂದ ?

ಎರಡನೆ ದೂತ : ತನ್ನಿಂದಲೇ. ದುರಂತದ ಪೂರ್ಣ ಕಲ್ಪನೆ ನಿನಗೆ ಬರಲಾರದು,
ಯಾಕೆಂದರೆ ನೀನೇ ನೋಡಲಿಲ್ಲ. ಕಣ್ಣಾರೆ ಕಂಡ ನಾನು
ಹೇಗೆ ಸತ್ತಳೆಂದು ಆದಷ್ಟೂ ಸ್ಪಷ್ಟವಾಗಿ ಹೇಳುತ್ತೇನೆ ಕೇಳು.
ನಿಮ್ಮನ್ನಿಲ್ಲಿ ಬಿಟ್ಟು ಹೋದಮೇಲೆ,
ಬಿರ್ರನೆ ದುಗುಡದಲ್ಲಿ ಆಸ್ಥಾನದ ಹತ್ತಿರ ಸಾಗಿ

ಅಂತಃಪುರಕ್ಕೆ ಓಡಿದಳು ;
ಕೂದಲನ್ನೆರಡೂ ಕೈಗಳಿಂದ ಕಿತ್ತುಕೊಳ್ಳುತ್ತ ಬಾಗಿಲನ್ನು
ಮುಚ್ಚಿಕೊಂಡು

ವಿನಾಶಕರ ಕೂಸು ಪಡೆದ ಹಾಸಿಗೆಯ ಹತ್ತಿರ ಹೋಗಿ—
ತನ್ನ ಹೆತ್ತಪನನ್ನು ಕೊಂದ ಮಗು ಹೆತ್ತಲ್ಲಿಗೆ ಹೋಗಿ—
ಸತ್ತ ಗಂಡ ಲಾಯಿಸ್ ಹೆಸರು ಹಿಡಿದು ಕೂಗಿದಳು ;
ಗಂಡನಿಂದ ಗಂಡನ್ನ ಪಡೆದ, ಮಗನಿಂದ ಮಗನನ್ನು ಪಡೆದ
ಹಾಸಿಗೆಯ ಹತ್ತಿರ ಅತ್ತಳು.

ಅಷ್ಟೇ ನಮಗೆ ಕೇಳಿಸಿದ್ದು. ಸತ್ತದ್ದು ನಮಗೆ ಕಾಣಿಸಲಿಲ್ಲ ;
ನಾವು ಅವಳ ದುರಂತ ನೋಡುವುದಕ್ಕೆ ಮುನ್ನ ದೊರೆ
ಈಡಿಪಸ್ ಅಳುತ್ತ ನುಗ್ಗಿ ಬಂದ ; ಆತನ ಮೇಲೆ ನಮ್ಮ
ಕಣ್ಣು ನೆಟ್ಟೆವು. ಇತ್ತ ಅತ್ತ ನಮ್ಮ ಹತ್ತಿರ ನಡೆದು
“ಖಡ್ಗ ಕೊಡು, ಖಡ್ಗ !” ಎಂದು ಚೀರಾಡುತ್ತ
“ಆ ಹೆಂಡತಿಯೆಲ್ಲಿ ? ಅಲ್ಲ, ನಾನು ಬಿತ್ತಿದ ಮಣ್ಣು,
ನನ್ನ ಪಾಪವೆ ಬೆಳೆದ ಜಾಗ ?” ಎಂದು ಕೂಗಾಡುತ್ತ.
ಯಾವ ದೈತ್ಯ ಅವನಿಗೆ ಶಕ್ತಿ ಕೊಟ್ಟನೋ, ಅರ್ಭಟಿಸುತ್ತ
ತನ್ನನ್ನು ತಾನು ಕಿತ್ತುಕೊಳ್ಳುವವನಂತೆ ಬಾಗಿಲಿಗೆ
ತನ್ನ ಬಲವನ್ನೆಲ್ಲ ತಾಗಿಸಿ ನುಗ್ಗಿದ ; ಕೀಲು ಮುರಿದು,
ಕದ ಬಿಚ್ಚಿಕೊಂಡೊಡನೆ ಹೋದ. ಆಗ ಆಕೆಯ ದೇಹ
ಹಗ್ಗವೊಂದಕ್ಕೆ ನೇತು ಬಿದ್ದುದು ನಮಗೆ ಕಾಣಿಸಿತು.
ನೋಡಿದೊಡನೆ ಹಗ್ಗ ಬಿಚ್ಚುತ್ತ ಆಕೆಯ ದೇಹ ನೆಲಕ್ಕಿಳಿವಾಗ
ದೊಡ್ಡದಾಗಿ ಬಿಕ್ಕಳಿಸಿ ಅತ್ತ.

ಆಮೇಲೆ ಕಂಡದ್ದ ಮನಸ್ಸಿನಿಂದ ಕಿತ್ತೊಗೆಯಲಾರೆ !
ದೊರೆ ಆಕೆಯ ನಿಲುವಂಗಿಯಿಂದ ಚಿನ್ನದ ಪದಕಗಳನ್ನು
ಕಿತ್ತು ಕಿತ್ತು ಮೇಲಕ್ಕೆತ್ತಿ ನೇರವಾಗಿ ಕಣ್ಣುಗುಡ್ಡೆಗೆ ಇಟ್ಟುಕೊಂಡು,
“ಇನ್ನು ಸಾಕು. ನಿನ್ನ ಸುತ್ತಣ ಕರ್ಮ ನೋಡುವುದು ಸಾಕು,
ನೀನೇ ಸೃಷ್ಟಿಸಿದ ರುದ್ರ ದೃಶ್ಯ ಸಾಕು. ನೀನು ನೋಡಲೇಬೇಕಾಗಿದ್ದ
ಜನರನ್ನು ಬಹುಕಾಲ ನೋಡಿದ್ದೀ—ನೋಡಲೇಬೇಕಾಗಿದ್ದ
ಪಾಪಕ್ಕೆ
ಬಹುಕಾಲ ಕುರುಡಾಗಿದ್ದೀ—ಇವತ್ತಿನಿಂದ ಕತ್ತಲಿಗೆ ಹೋಗು !”

ಅನ್ನುತ್ತ ಮತ್ತೆ ಮತ್ತೆ ಕಣ್ಣಿಗೆ ತಿಕ್ಕಿಕೊಂಡ ;
ಕೆಂಪು ಮಳೆಯ ಹಾಗೆ ಕಣ್ಣಾಲಿಗಳಿಂದ ರಕ್ತ ಸುರಿಯಿತು.
ಮುಖದ ಮೇಲೆ.
ಇಬ್ಬರ ಪಾಪ ಹೀಗೆ ಕೊನೆಗೊಂಡಿತು ;
ಗಂಡಹೆಂಡಿರ ದುಃಖ ಒಂದುಗೂಡಿತು.
ಒಮ್ಮೆ ಅವಳು ಪಟ್ಟ ಸುಖ ನಿಜಕ್ಕೂ ಸುಖವೆನ್ನಿಸಿತ್ತು.
ಆದರೆ ಇವತ್ತು, ಸಾವು, ಕಂಬನಿ, ಶೋಕ, ತೇಜೋಭಂಗ
ಮಾತು ವಿವರಿಸಬಲ್ಲ ಎಲ್ಲ ಇಲ್ಲಿವೆ.

ಮೇಳದವ : ಆದರೆ ಈಗ
ಅವನ ನೋವು ಕಡಿಮೆಯಾಗಿದೆಯೆ ? ಸಮಾಧಾನ ಸಿಕ್ಕಿದೆಯಲ್ಲಿ ?

ಎರಡನೆ ದೂತ : ಜನರನ್ನು ಕರೆದು
ತನ್ನ ತಂದೆಯನ್ನು ಕೊಂದ, ತನ್ನ ತಾಯಿಯನ್ನು—ಅಯ್ಯೋ ಹೇಳಲಾರೆ,
—ತನ್ನನ್ನು ಊರ ಹೆಬ್ಬಾಗಿಲಿಗೆ ಕರೆದೊಯ್ಯಲು ಕೇಳಿಕೊಳ್ಳುತ್ತಿದ್ದಾನೆ.
ಥೀಬ್ಸ್ ನಗರ ಬಿಡಲಿದ್ದಾನೆ ;
ತಾನು ಈ ನಗರಕ್ಕೆ ಕಟ್ಟಿದ ಶಾಪವನ್ನ ತೊಳೆಯಲು
ತನ್ನನ್ನು ತಾನೇ ದೇಶಾಂತರ ಮಾಡಿಕೊಳ್ಳಲಿದ್ದಾನೆ.
ನಿಶ್ಶಕ್ತನಾಗಿದ್ದಾನೆ ; ಯಾರೂ
ಆತನಿಗೆ ದಾರಿ ತೋರುತ್ತಿಲ್ಲ ; ಅವನ ನೋವು ದಾರುಣವಾಗಿದೆ.
ಆದರೆ ಅಗೋ :
ಬಾಗಿಲು ತೆರೆದುಕೊಳ್ಳುತ್ತಿದೆ. ಕ್ಷಣದಲ್ಲಿ
ಕಲ್ಲೆದೆ ಕೂಡ ಕರಗಿಸಬಲ್ಲ ದೃಶ್ಯ ನೋಡುತ್ತೀ ನೀನು.

(ಮಧ್ಯದ ಬಾಗಿಲು ತೆರೆಯುತ್ತದೆ. ಕುರುಡಾದ ಈಡಿಪಸ್‌ನನ್ನು ಕರೆದು ತರುತ್ತಾರೆ)

ಮೇಳದವ : ನಿಜಕ್ಕೂ ಭೀಕರ,
ಇಷ್ಟು ಭಯಂಕರ ನೋಟ ನನ್ನ ಕಣ್ಣಿಂದೂ ನೋಡಿಲ್ಲ.
ಈಡಿಪಸ್ !
ಮನುಷ್ಯನಾಗಿ ಹುಟ್ಟಿದವ ಸಹಿಸಲಾರದಂಥ ಶಿಕ್ಷೆ ಪಡೆಯಲು
ಎಂಥ ಹುಚ್ಚು ನಿನ್ನನ್ನ ಆವರಿಸಿತು, ಎಂಥ ದೈತ್ಯ
ನಿನ್ನ ಬದುಕಿಗೆ ಬಂದೆರಗಿದ ?

ನೋಡಲು ಕೂಡ ಸಾಧ್ಯವಿಲ್ಲ ನನಗೆ ;
ಕರುಣಾಜನಕ, ಗತಿಗೆಟ್ಟ ಈಡಿಪಸ್ : ನನಗೆ
ಮಾತಾಡಬೇಕೆನ್ನಿಸಿದೆ, ಚಿಂತಿಸಬೇಕೆನ್ನಿಸಿದೆ, ಪ್ರಶ್ನಿಸಬೇಕೆನ್ನಿಸಿದೆ—
ಇಲ್ಲ, ನನ್ನ ಮೈ ನಡುಗುತ್ತಿದೆ.

ಈಡಿಪಸ್ : ದೇವರೇ, ದೇವರೇ,
ನನ್ನ ದುಃಖಕ್ಕಿಂತ ಗಾಢವಾದದ್ದೆಲ್ಲಿ ?
ಈ ಜಗತ್ತಿನಲ್ಲಿ ನನಗೆ ನೆಲೆ ಎಲ್ಲಿ ?
ನನ್ನ ಧ್ವನಿ ಕಪ್ಪುಗಾಳಿಯ ಮೇಲೆ ಬೀಳುತ್ತಿದೆ,
ದೇವರು ನನ್ನನ್ನು ಯಾವ ಸ್ಥಿತಿಗಿಳಿಸಿದ !

ಮೇಳದವ : ಯೋಚನೆಗೆ, ನೋಟಕ್ಕೆ ಅಸಾಧ್ಯವಾದುದು.

ಈಡಿಪಸ್ : ಓ, ರಾತ್ರಿಯ ಮುಟ್ಟಿಗೆ ಇನ್ನು ಕೊನೆಯಿಲ್ಲ,
ಬರುತ್ತಲೇ ಇದೆ ರಾತ್ರಿ,
ಶವದ ಹೊದಿಕೆಯಂಥ ರಾತ್ರಿ.
ಹೇಗೆ ನನ್ನನ್ನು ಇರಿಯುತ್ತಿವೆ—
ಸ್ಪಂದಿಸುವ ನೋವುಗಳು, ಎಲ್ಲ ನೆನಪುಗಳು,
ನನ್ನಿಂದ ಹರಿದುಹೋಗದ ನೆನಪುಗಳು.

ಮೇಳದವ : ಇದು ಅಸಹಜವೇನಲ್ಲ, ನೀನು
ಎಲ್ಲದನ್ನೂ ಎರಡು ಬಾರಿ ಅನುಭವಿಸುತ್ತೀ—
ಪಶ್ಚಾತ್ತಾಪದಲ್ಲಿ ಯಾತನೆ, ಯಾತನೆಯಲ್ಲಿ ಪಶ್ಚಾತ್ತಾಪ.

ಈಡಿಪಸ್ : ಪ್ರಿಯ ಗೆಳೆಯ,
ನೀನಿನ್ನೂ ಗೆಳೆಯನಾಗಿ ಉಳಿದಿದ್ದೀಯ ?
ನೀನು ಮಾತ್ರ ನನ್ನ ಗೆಳೆಯನಾಗಿ ಉಳಿದಿದ್ದೀಯ ?
ನೀನಿನ್ನೂ ನನ್ನ ಹತ್ತಿರ ನಿಂತಿದ್ದೀಯ, ಇಲ್ಲಿ,
ಸಹನೆಯಿಂದ, ಈ ಕುರುಡನನ್ನು ಸಂತೈಸಲಿಕ್ಕೆ ?
ಕುರುಡ !
ನನ್ನ ಹೊಸ ಕತ್ತಲು ನಿನ್ನನ್ನೂ ನೋಡಗೊಡುತ್ತಿಲ್ಲ,
ಆದರೆ ನಿನ್ನ ಧ್ವನಿಯಿಂದ ಯಾರೆಂದು ಬಲ್ಲೆ,

ಮೇಳದವ : ಎಂಥ ಕ್ರೂರ ಕೈವಾಡ ?
ನಿನ್ನ ಕಣ್ಣಿಗೆ ಕತ್ತಲು ಕಟ್ಟಿದ ಆತ
ಎಂಥ ದೇವರು ?

ಈಡಿಪಸ್ : ಅಪಾಲೋ, ಅಪಾಲೋ,

ಮಕ್ಕಳೆ, ಆ ದೇವರು ಅಪಾಲೋ.
ಆತ ನನ್ನ ದುರ್ವಿಧಿಯನ್ನು ನನ್ನ ಕೊರಳಿಗೆ ಕಟ್ಟಿದ.
ಆದರೆ ಕಣ್ಣು ಕಿತ್ತುಕೊಂಡವ ನಾನೇ.
ನಾನು ಮಾಡಿದ್ದೆಲ್ಲ ಅಸಹ್ಯವಾಗಿದ್ದಾಗ
ಅದನ್ನು ನಾನು ಹೇಗೆ ನೋಡಿ ಸಹಿಸಿಕೊಳ್ಳುವುದು ಸಾಧ್ಯವಿತ್ತು ?

ಮೇಳದವ : ಹೌದು ; ಅದು ನಿಜ.

ಈಡಿಪಸ್ : ಈಗ ಉಳಿದಿದ್ದೇನು ?
ರೂಪು ? ರಾಗ ? ಮನಸ್ಸು ಪುಲಕಿಸುವ ಆದರ ?
ಯಾವುದುಳಿದಿದೆ ಈಗ ? ಇಲ್ಲ, ಇಲ್ಲ, ಸ್ನೇಹಿತರೆ,
ದಾರಿ ತೋರಿಸಿ. ಥೀಬ್ಸ್‌ನಿಂದ ನನ್ನನ್ನು ಕರೆದೊಯ್ಯಿರಿ.
ಈಡಿಪಸ್‌ನನ್ನ, ಈ ಪತಿತನನ್ನ, ದೇವರೊಲ್ಲದ ಇವನನ್ನ
ಕರೆದೊಯ್ಯಿರಿ.

ಮೇಳದವ : ನಿನ್ನ ಕರ್ಮಕ್ಕೆ ನೀನು ಕುರುಡಲ್ಲ !
ನೀನದನ್ನು ಪತ್ತೆಹಚ್ಚಲು ಹೋಗದಿದ್ದರೆ ಎಷ್ಟು
ಸುಖವಾಗಿರುತ್ತಿದ್ದೆ ಅನ್ನಿಸುತ್ತಿದೆ, ನನಗೆ.

ಈಡಿಪಸ್ : ಆ ಬೆಟ್ಟದ ತಪ್ಪಲಲ್ಲಿ
ನನ್ನನ್ನು ಸಾವಿನಿಂದ ಬದುಕಿಗೆಳೆದ ವ್ಯಕ್ತಿಗೆ ಸಾವು ಬರಲಿ !
ಎಂಥ ಬದುಕು ? ಆಗ ನಾನು ಸತ್ತಿದ್ದರೆ
ನನ್ನ ಗತಿ ಹೀಗಾಗುತ್ತಿರಲಿಲ್ಲ ; ನನ್ನ ನೆಚ್ಚಿದವರು
ಹಾಳಾಗುತ್ತಿರಲಿಲ್ಲ.

ಮೇಳದವ : ನನಗೂ ಹಾಗೇ ಅನ್ನಿಸುತ್ತದೆ.

ಈಡಿಪಸ್ : ಓ, ನಾನು ನನ್ನ ತಂದೆಯ ರಕ್ತ ಚೆಲ್ಲಿ
ಇತ್ತ ಬರಬಾರದಿತ್ತು ! ತಾಯಿಯ ಗಂಡನಾದ ಮನುಷ್ಯ
ಎಂಬ ಕಳಂಕ ತಟ್ಟಬಾರದಿತ್ತು !
ಓ, ಪಾಪಿ, ಪಾಪದ ಕೂಸಾಗಿ
ಆ ಹಾಸಿಗೆ ಹೊಕ್ಕದ್ದರಿಂದ—
—ಅದೇ,
ಪಾಪಕ್ಕಿಂತ ಘೋರ ಶಾಪ ನನ್ನ ಮೇಲೆ ಬಿತ್ತು.

ಮೇಳದವ : ಮಾತಾಡುವುದಕ್ಕೇ ನನಗೆ ತಿಳಿಯುತ್ತಿಲ್ಲ :
ಕಣ್ಣಿಲ್ಲದ ಬದುಕಿಗಿಂತ ಸಾವು ಮೇಲು ನಿನಗೆ.

ಈಡಿಪಸ್ : ಬುದ್ಧಿ ಹೇಳುವ ಗೋಜಿಗೆ ಹೋಗಬೇಡ. ನನಗೆ ನಾನು

ಕೊಟ್ಟುಕೊಂಡ ಶಿಕ್ಷೆ ಸರಿಯಾದದ್ದು.
ಕಣ್ಣಿದ್ದಿದ್ದರೆ,
ಕಾಲನ ಮನೆಗೆ ಹೋದಂದು ನನ್ನ ತಂದೆ, ತಾಯಿಯನ್ನು
ಹೇಗೆ ನೋಡುತ್ತಿದ್ದೆ, ಗೊತ್ತಿಲ್ಲ ; ಯಾಕೆಂದರೆ,
ಅವರಿಬ್ಬರ ಬಗ್ಗೆ ನಾನೆಸಗಿದ ದ್ರೋಹ
ನನ್ನ ಜೀವ ತೆತ್ತರೂ ನನಗೆ ನೆಮ್ಮದಿ ತರುತ್ತಿರಲಿಲ್ಲ.

ಅಲ್ಲದೆ ನನ್ನ ಕಣ್ಣಿಗೆ ನನ್ನ ಮಕ್ಕಳು ಚೆಂದವಾಗಿ ಕಾಣುತ್ತಿದ್ದರೆ ?
ಇಲ್ಲ ; ಇಲ್ಲ ; ಈ ಕೋಟೆಕೊತ್ತಲದ ನಗರ
ಮತ್ತು ಸಕಲ ಜೀವಗಳನ್ನು ನೋಡಲು ಅಸಾಧ್ಯವಾಗುತ್ತಿತ್ತು.
ಯಾಕೆಂದರೆ ನಾನು—
ದರಿದ್ರನಾದ ನಾನು—ಕ್ಯಾಡ್‌ಮಸ್ ವಂಶದ ಗಣ್ಯನಾದ ನಾನು
ಲಾಯಿಸ್ ಮನೆತನಕ್ಕೆ ಕಳಂಕ ಹಚ್ಚಿ ನಾಡ ಕ್ರೋಧಕ್ಕೆ ತುತ್ತಾಗಿ
ಸ್ವತಃ ದೇಶಾಂತರಗೊಂಡು ಎಲ್ಲದರಿಂದ ವಂಚಿತನಾಗಿದ್ದೇನೆ ,
ನನ್ನ ತಪ್ಪಿನ ಗಾಢ ಗೊತ್ತಾಗಿಯೂ ಹೇಗೆ
ಎಲ್ಲರನ್ನು ಧೈರ್ಯವಾಗಿ ನೋಡಲು ಸಾಧ್ಯವಿತ್ತು ?
ಇಲ್ಲ, ಪ್ರಮಾಣವಾಗಿ ಹೇಳುತ್ತೇನೆ,
ನನ್ನ ಶ್ರವಣ ಶಕ್ತಿಯನ್ನೂ ಅದರ ಬೇರಿನಲ್ಲೇ ಕೊಲ್ಲಬಲ್ಲನಾಗಿದ್ದರೆ,
ಹಾಗೆ ಕೊಂದು ಇಡೀ ದೇಹವನ್ನು ನೋವಿನ ಕೋಶವನ್ನಾಗಿಸಿ,
ಗಟ್ಟಿ ಕೋಶವನ್ನಾಗಿಸಿ ಎಲ್ಲ ಶಬ್ದ, ಬೆಳಕನ್ನು ಹೊರಗಟ್ಟಿ
ಖಾಲಿಗೊಳಿಸುತ್ತಿದ್ದೆ ; ಎಲ್ಲ ನೋವುಗಳಿಂದ, ನೆನಪುಗಳಿಂದ
ಮುಕ್ತನಾಗುತ್ತಿದ್ದೆ.
ಹಾ, ಸಿಥಿರಾನ್,
ಏಕೆ ಕಾಪಾಡಿದೆ ನನ್ನ ? ನನ್ನನ್ನು ನಿನ್ನಲ್ಲಿ ಎಸೆದಾಗ
ಏಕೆ ಬದುಕಗೊಟ್ಟೆ ? ಸತ್ತಿದ್ದರೆ ಈ ಜಗತ್ತು
ನನ್ನ ಅಹಸ್ಯ ಬದುಕನ್ನು ನೋಡುತ್ತಿರಲಿಲ್ಲ.
ಹಾ ಪಾಲಿಬಸ್ ! ಕಾರಿಂಥ್, ನನ್ನ ಪೂರ್ವಜರ ಸ್ಥಳವೆಂದು
ನಾನು ನಂಬಿದ ನಗರವೇ, ನಾನೆಂಥ ಮುದ್ದಿನ ಕೂಸಾಗಿದ್ದೆ ನಿನಗೆ !
ಆದರೆ ಸದಾ ಈ ನನ್ನ ರೋಗ ನನ್ನಲ್ಲಿ ಬೆಳೆಯುತ್ತಲೇ ಇತ್ತು.
ಯಾಕೆಂದರೆ ನಾನು
ಬದುಕಿನಲ್ಲಿ ಅಸ್ವಸ್ಥ, ಹುಟ್ಟಿನಲ್ಲಿ ರೋಗಗ್ರಸ್ಥ.

ಓ, ಮೂರು ಹೆದ್ದಾರಿಗಳೆ, ಕತ್ತಲು ಕಣಿವೆಯ ಕಾಡಲ್ಲಿ
ಸಂಧಿಸುವ ಮೂರು ಹೆದ್ದಾರಿಗಳೇ ; ನನ್ನ ಹೆತ್ತವನ ನೆತ್ತರನ್ನು,
ಅಂದರೆ,
ನನ್ನ ನೆತ್ತರನ್ನು ನನ್ನ ಕೈಯಿಂದಲೇ ಕುಡಿದ ತಾಣವೇ ; ನಾನಲ್ಲಿ
ಮಾಡಿದ ಅಸಹ್ಯ ಕೃತ್ಯಗಳು ನಿಮಗೆ ಗೊತ್ತು—ಅಲ್ಲಿಂದ ಬಂದು
ಮಾಡಿದ್ದೆಲ್ಲ ಗೊತ್ತು ನಿಮಗೆ.
ಮದುವೆ, ಮದುವೆ,
ನನ್ನನ್ನು ಹುಟ್ಟಿಸಿದ, ಮಗನಾಗಿ ಅದೇ ಹಾಸಿಗೆಯಲ್ಲಿ ಕೂಡಿಸಿದ
ಘಟನೆ.
ಹಾ, ಸ್ವಜನಸಂಗದ ಜಾಲ :
ಮಕ್ಕಳು, ಪತ್ನಿಯರು, ತಾಯಿಯರು—ಎಲ್ಲರು ಕೂಡುವ
ಪಾಪಪರಾಕಾಷ್ಠೆ.
ಹೇಯ ಕೃತ್ಯ ;
ಇಲ್ಲ, ದೇವರ ಪ್ರೀತಿಗಾಗಿ ನನ್ನನ್ನು
ಥೀಬ್ಸ್‌ನಿಂದ ಎಲ್ಲಿಗಾದರೂ ತೊಲಗಿಸಿ ; ಅಥವಾ ಕೊಂದುಹಾಕಿ ;
ಅಥವ ಎಲ್ಲರ ಕಣ್ಣಿನಿಂದ ಮರೆಯಾಗುವಂತೆ
ಸಮುದ್ರ ತಳಕ್ಕೆ ನನ್ನ ಎಸೆಯಿರಿ.
ಬನ್ನಿ, ದಾರಿ ತೋರಿರಿ,
ನನ್ನನ್ನು ಅಂಜಿಕೊಂಡು ಮುಟ್ಟಬೇಕಾದ್ದಿಲ್ಲ, ಇಲ್ಲ.
ನಾನೊಬ್ಬನೇ ಈ ಪಾಪ ಹೊರಬಲ್ಲೆ,
(ಕ್ರೆಯಾನ್ ಪ್ರವೇಶ)

ಮೇಳದವ : ಯಾವ ತೀರ್ಮಾನವೂ ನಮಗೆ ಸೇರಿದ್ದಲ್ಲ ;
ಕ್ರೆಯಾನ್ ಬರುತ್ತಿದ್ದಾನೆ. ನಿನ್ನ ತರುವಾಯ
ನಗರದ ಪಾಲನೆ ಅವನಿಗೆ ಸೇರಿದ್ದು.
ನಿನ್ನ ಕೋರಿಕೆಯ ಬಗ್ಗೆ ಆತ ತೀರ್ಮಾನ ಕೈಗೊಳ್ಳಬಹುದು.

ಈಡಿಪಸ್ : ಅಯ್ಯೋ ಅವನನ್ನು ಹೇಗೆ ಮಾತಾಡಿಸಲಿ ? ಅವನ
ಮನನೋಯಿಸಿದ ನನಗೆ ಆ ಹಕ್ಕೆಲ್ಲಿದೆ ?

ಕ್ರೆಯಾನ್ : ನಿನ್ನನ್ನು ಹೀಯಾಳಿಸಲು ಬಂದಿಲ್ಲ ನಾನು, ಈಡಿಪಸ್,
ನಿನ್ನನ್ನು ಬೈಯಲು ಕೂಡ ಬಂದಿಲ್ಲ.
(ಸೇವಕನಿಗೆ)
ಅಲ್ಲಿ ನಿಂತರುವ ನೀವು—

ನೀವು ಮಾನವನ ಘನತೆಯ ಬಗ್ಗೆ ನಂಬಿಕೆ ಕಳೆದುಕೊಂಡಿದ್ದರೆ,
ಸೂರ್ಯದೇವನ ಬೆಳಕನ್ನಾದರೂ ಗೌರವಿಸಿ :
ಆ ಬೆಳಕಿಗೆ, ಭೂಮಿಗೆ, ಸ್ವರ್ಗದ ತೇಜಕ್ಕೆ—ಎಲ್ಲಕ್ಕೆ
ಕಳಂಕಪ್ರಾಯನಾದ ಈತ ಈ ಬೀದಿಯಲ್ಲಿ ನಿಲ್ಲಲು
ಬಿಡಬೇಡಿ ; ಮನೆಯೊಳಕ್ಕೆ ಕರೆದೊಯ್ಯಿರಿ. ಇವನದು
ಈತನ ಸಂಸಾರ ಮಾತ್ರ ನೋಡಬೇಕಾದ ವ್ಯಥೆ.

ಈಡಿಪಸ್ : ನನ್ನೆಲ್ಲ ಎಣಿಕೆ ಸುಳ್ಳಾಗಿಸಿ ಘನತೆಯಿಂದ
ನನ್ನಲ್ಲಿಗೆ, ಪಾಪಿಯಾದ ನನ್ನಲ್ಲಿಗೆ, ಬಂದಿರುವ ಕ್ರೆಯಾನ್,
ನನ್ನದೊಂದು ಬೇಡಿಕೆ ಈಡೇರಿಸು—
ನನ್ನ ಕ್ಷೇಮಕ್ಕಾಗಿ ಅಲ್ಲ, ನಿನ್ನ ಕ್ಷೇಮಕ್ಕಾಗಿ.

ಕ್ರೆಯಾನ್ : ನನ್ನಿಂದ ಆಗಬೇಕಾದ್ದು ಅದೇನು ?

ಈಡಿಪಸ್ : ಇಲ್ಲಿಂದ ನನ್ನನ್ನು
ಯಾವ ಮನುಷ್ಯಪ್ರಾಣಿಯೂ ತಲುಪದಂಥ ಸ್ಥಳಕ್ಕೆ ತೊಲಗಿಸು.

ಕ್ರೆಯಾನ್ : ಅದನ್ನು ನಾನು ಎಂದೋ ಮಾಡಬೇಕಿತ್ತು ; ಆದರೆ
ದೇವರ ಇಚ್ಛೆ ಪೂರ್ತಿ ಗೊತ್ತಿರಲಿಲ್ಲ.

ಈಡಿಪಸ್ : ಈಗ ಅದು ಸ್ಪಷ್ಟ, ಪಿತೃಹಂತಕನನ್ನು
ನಾಶಗೊಳಿಸಬೇಕು. ಅಂಥ ಹಂತಕ ನಾನು.

ಕ್ರೆಯಾನ್ : ಅದು ಸರಿ. ಆದರೆ ಈ ಪರಿಸ್ಥಿತಿಯಲ್ಲಿ
ಏನು ಮಾಡಬೇಕೆಂಬುದನ್ನು ನಾನು ನೋಡಬೇಕಾಗಿದೆ,

ಈಡಿಪಸ್ : ನನ್ನಂಥವನ ಬಗ್ಗೆ ಇನ್ನೂ ಹೆಚ್ಚು ತಿಳಿಯಬೇಕೆನ್ನುವೆಯ ?

ಕ್ರೆಯಾನ್ : ಈಗ
ದೇವರ ಮಾತು ಆಲಿಸಲು ತಕ್ಕ ಸ್ಥಿತಿಯಲ್ಲಿದ್ದೀ ನೀನು.

ಈಡಿಪಸ್ : ಇದ್ದೇನೆ. ಆದರೆ ನೀನು ನನ್ನ ನೆರವಿಗೆ ಬೇಕು.
ಬೇಡಿಕೊಳ್ಳುತ್ತೇನೆ, ಕೇಳು :
ಆ ಹೆಂಗಸು ಅಲ್ಲಿದ್ದಾಳೆ—
ನಿನಗೆ ಸರಿಕಂಡಂತೆ ಆಕೆಯ ಸಂಸ್ಕಾರ ನಡೆಸು ;
ನಿನ್ನ ಸೋದರಿ ಆಕೆ.
ಆದರೆ ನನ್ನ ಕಳಿಸು ಕ್ರೆಯಾನ್,
ಕಳಿಸಿ ನನ್ನ ತಂದೆಯ ಈ ಥೀಬ್ಸ್‌ನಗರ ಶುದ್ಧಿಗೊಳಿಸು.
ನಾನು ಕೈಥರಾನ್‌ಗೆ, ನನ್ನಿಂದ ಹೆಸರಾದ ಸ್ಥಳಕ್ಕೆ,
ಬೆಟ್ಟಗುಡ್ಡಗಳ ನಾಡಿಗೆ, ನನ್ನ ಹೆತ್ತವರು ನನಗಾಗಿ

ಕಟ್ಟಿದ್ದ ಸಮಾಧಿಗೆ ಹೋಗಿ ಸಾಯಲು ಬಿಡು :
ನನಗೆ ಗೊತ್ತು
ಸಾವು ನನಗೆ ರೋಗರುಜಿನಗಳಿಂದ ಬರುವುದಿಲ್ಲ,
ನನ್ನ ಜೀವ ಯಾವುದೋ ಯೋಜನಾತೀತ
ವಿಧಿ ಪೂರೈಕೆಗಾಗಿ ಉಳಿದಿದೆ. ಬಂದದ್ದು ಬರಲಿ.
ಆದರೆ ನನ್ನ ಪುತ್ರರ ಬಗ್ಗೆ—
ಅದನ್ನು ನಾನು ಚಿಂತಿಸಬೇಕಿಲ್ಲ.
ಅವರು ಗಂಡಸರು, ಹೇಗೋ ಬದುಕುತ್ತಾರೆ.
ಆದರೆ ನನ್ನ ಹೆಣ್ಣುಮಕ್ಕಳು—ನನ್ನನ್ನು ತೊರೆದು ಗೊತ್ತಿಲ್ಲದ,
ನನ್ನ ಜೊತೆಗೆ ಉಂಡು ಆಡಿಕೊಂಡಿದ್ದ ಅವರನ್ನ ನೋಡಿಕೋ
ಕ್ರಿಯಾನ್,
ನನಗಾಗಿ ಅಷ್ಟು ಮಾಡು. ದಯವಿಟ್ಟು ಕೊನೆಯ ಬಾರಿಗೆ,
ಅವರನ್ನು ನಾನು ಮುಟ್ಟಲು ಬಿಡುತ್ತೀಯ ? ಅವರನ್ನಪ್ಪಿ
ಕಂಬನಿಗರೆಯಲು ಅಪ್ಪಣೆ ಕೊಡುತ್ತೀಯ ?
ದಯವಿಟ್ಟು ಅನುಮತಿ ಕೊಡು, ಪ್ರಭು,
ಚಕ್ರವರ್ತಿ, ನನಗೆ ದಯೆ ತೋರು.
ನಾನು ಕೇವಲ ಒಮ್ಮೆ ಅಪ್ಪಿಕೊಳ್ಳಬಲ್ಲೆನಾದರೆ,
ಅವರು ಮತ್ತೆ ನನ್ನವರೆಂಬಂತೆ, ನನಗೆ
ಕಣ್ಣುಗಳಿದ್ದಷ್ಟು ಆನಂದವಾಗುತ್ತದೆ.
(ಅಂತಿಗೊನೆ ಮತ್ತು ಇಸ್ಮೇನೆ ಪ್ರವೇಶ)
ಓ ದೇವರೇ,
ಅಳುತ್ತಿರುವವರು ನನ್ನ ಮುದ್ದಿನ ಹಸುಳೆಗಳೆ ?
ಕ್ರಿಯಾನ್ ದಯೆತೋರಿ ನನ್ನ ಕಂದಮ್ಮಗಳ ಕರೆಸಿದನೆ ?

ಕ್ರಿಯಾನ್ : ಹೌದು ಈಡಿಪಸ್; ಅವರು ನಿನ್ನ ಕಣ್ಣುಗಳಾಗಿದ್ದರೆಂಬುದು
ನನಗೆ ಗೊತ್ತು ; ನಿನ್ನ ಪ್ರೀತಿ
ಕುಂದಿಲ್ಲವೆಂದು ಬಲ್ಲೆ.

ಈಡಿಪಸ್ : ಇದಕ್ಕಾಗಿ ದೇವರು ನಿನಗೆ ಒಳ್ಳೆಯದು ಮಾಡಲಿ !
ನನಗೆ ತೋರಿದ್ದಕ್ಕಿಂತ ಉತ್ತಮ ಬಗೆಯಲ್ಲಿ
ನಿನಗೆ ಮಾರ್ಗದರ್ಶಕನಾಗಲಿ.
ಮಕ್ಕಳೆ, ಎಲ್ಲಿದ್ದೀರಿ ?
ನನ್ನ ಆಲಂಗಿಸಿಕೊಳ್ಳಿ, ಬೇಗ ಬನ್ನಿ ; ಇವು ನಿಮ್ಮ ಸೋದರನವು

—ಒಮ್ಮೆ ನಿಚ್ಚಳವಿದ್ದ ನಿಮ್ಮ ತಂದೆಯ ಕಣ್ಣುಗಳನ್ನು ಹೀಗೆ
ಮಾಡಿದ ಕೈಗಳು.
ಅಹ್, ಪ್ರಿಯ ಚಿಣ್ಣರೆ,
ನಾನು ಹುಟ್ಟಿದಲ್ಲಿಯೆ ನಿಮ್ಮ ಜನ್ಮಕ್ಕೆ ನಾನು ಕಾರಣನಾದಂದು
ನನಗೆ ಕಣ್ಣಿರಲಿಲ್ಲ, ವಿವೇಕವಿರಲಿಲ್ಲ ; ಈಗ ಅಳುತ್ತೇನೆ—
ನಿಮ್ಮನ್ನು ನೋಡಲಾಗದೆ ಅಳುತ್ತಿದ್ದೇನೆ. ಜನ ಸೇರಿದಲ್ಲೆಲ್ಲ
ನೀವು ಪಡಲಿರುವ ಅವಮಾನ ನೆನೆದು ಅಳುತ್ತಿದ್ದೇನೆ.
ಜನ ಯಾವ ಮನೆ, ಯಾವ ಹಬ್ಬದಿಂದ ನಿಮ್ಮನ್ನು ಅಟ್ಟಿ
ಹೀಯಾಳಿಸದೆ ಇದ್ದಾರು ? ನಿಮ್ಮ ಯೌವನದಲ್ಲಿ ಯಾರು
ನಿಮ್ಮ ವರಿಸಲು ಮುಂದೆ ಬಂದಾರು ?
ಯಾವ ದೋಷ ಕಡಿಮೆಯಾಗಿದೆ ?
ಜನ ಮತ್ತೆ ಮತ್ತೆ ಹಳೆಯದನ್ನು ಎತ್ತಿ ಹೇಳುತ್ತಾರೆ,
ಆದರಿಂದ ನಿಮಗೆ ಮದುವೆಯಲ್ಲಿ ? ಸಂಗಾತಿಗಳಿಲ್ಲದೆ
ನಿಮ್ಮ ಬದುಕು ಕನಸುಗಳಲ್ಲಿಯೇ ಮುರುಟಿ ಹೋಗುತ್ತದೆ.
ಓ ಕ್ರೆಯಾನ್, ಮಿನೊಕಿಯಾಸ್ ಪುತ್ರ
ಈ ನನ್ನ ಮಕ್ಕಳಿಗೆ ನೀನೆ ತಂದೆ ; ಹೆತ್ತವರು ಹೋದಮೇಲೆ
ನೀನೇ ನೋಡಿಕೊಳ್ಳಬೇಕು ; ನಿನ್ನವರು ತಬ್ಬಲಿ ಭಿಕ್ಷುಕರಾಗದಂತೆ
ನೋಡಿಕೋ. ನನ್ನ ನೋವು ಅವರನ್ನು ತಟ್ಟದಂತೆ ಕಾಪಾಡು.
ದಯವಿಟ್ಟು ಈ ಬಗ್ಗೆ ಭಾಷೆ ಕೊಡು, ಮಹಾರಾಜ,
ನನ್ನ ಕೈ ಹಿಡಿದು ಭಾಷೆ ಕೊಡು.
(ಕ್ರೆಯಾನ್ ಅವನ ಬಲಗೈ ಹಿಡಿಯುತ್ತಾನೆ)
ಮಕ್ಕಳೆ,
ನಿಮಗೆ ತಿಳಿದಿದ್ದರೆ ಇನ್ನೂ ಹೇಳುತ್ತಿದ್ದೆ ;
ಆದರೆ ಇಷ್ಟು ಮಾತ್ರ ನನ್ನ ಕೋರಿಕೆ :
ಬದುಕಿ, ಪ್ರಾರ್ಥಿಸಿ ;
ದೇವರ ದಯೆಯಿಂದ ನಿಮ್ಮ ತಂದೆಗಿಂತ ಉತ್ತಮವಾಗಿ ಬಾಳಿ.

ಕ್ರೆಯಾನ್ : ಸಾಕು, ಸಾಕಷ್ಟು ರೋದಿಸಿದ್ದೀ—ಒಳಗೆ ಹೋಗು.
ಈಡಿಪಸ್ : ಹೋಗಬೇಕು, ಆದರೆ ಇದು ತೀರಾ ದುರ್ಭರ.
ಕ್ರೆಯಾನ್ : ಕಾಲ ಎಲ್ಲವನ್ನೂ ಹಗುರಗೊಳಿಸುತ್ತದೆ.
ಈಡಿಪಸ್ : ಆದರೆ ನೀನು ಮಾತು ಕೊಡಬೇಕು.
ಕ್ರೆಯಾನ್ : ನಿನಗೇನು ಬೇಕು—ಹೇಳು

ಈಡಿಪಸ್ : ನನ್ನನ್ನು ಥೀಬ್ಸ್‌ನಿಂದ ಹೊರಗೆ ಕಳಿಸು.
ಕ್ರೆಯಾನ್ : ಅದು ದೇವರ ಅನುಮತಿಯಿಂದ ಆಗತಕ್ಕದ್ದು.
ಈಡಿಪಸ್ : ಆದರೆ ದೇವರಿಗೆ ನನ್ನ ಮೇಲೆ ಕೋಪ ಇದೆ.
ಕ್ರೆಯಾನ್ : ಇಲ್ಲ, ದೇವರು ನಿನ್ನ ಆಶೆ ನೆರವೇರಿಸುತ್ತಾನೆ.
ಈಡಿಪಸ್ : ನೀನು ವಚನವೀಯುತ್ತೀಯ ?
ಕ್ರೆಯಾನ್ : ನನ್ನ ಶಕ್ತಿಗೆ ಮೀರಿದ್ದನ್ನು ನಾನು ಹೇಳಲಾರೆ.
ಈಡಿಪಸ್ : ಹಾಗಾದರೆ ನನಗೆ ದಾರಿ ತೋರಿಸು.
ಕ್ರೆಯಾನ್ : ಸರಿ, ಮಕ್ಕಳನ್ನು ಬಿಡು.
ಈಡಿಪಸ್ : ಇಲ್ಲ ! ಅವರನ್ನು ನನ್ನಿಂದ ಬೇರ್ಪಡಿಸಬೇಡ !
ಕ್ರೆಯಾನ್ : ಹಿಂದೊಮ್ಮೆ ಆಗಿದ್ದ ಚಕ್ರವರ್ತಿಯಂತೆ ಮಾತಾಡಬೇಡ. ನಿನ್ನ ವಿನಾಶ ಹೇಗೆ ತಂದುಕೊಂಡೆ, ಯೋಚಿಸು.

(ಎಲ್ಲರೂ ಒಳಗೆ ಹೋಗುತ್ತಾರೆ)

ಮೇಳದವ : ಥೀಬ್ಸ್ ಜನರೆ, ಈಡಿಪಸ್‌ನನ್ನು ನೋಡಿ :
ಈತನೊಮ್ಮೆ ವಿಖ್ಯಾತ ಸ್ಫಿಂಕ್ಸ್ ಒಡಪ ಉತ್ತರಿಸಿ
ಅಭ್ಯುದಯಗೊಂಡ. ಜಗದ ಎಲ್ಲರಿಗಿಂತ ಶಕ್ತನಾದ ;
ಮನುಷ್ಯಕುಲ ಅವನ ವೈಭವಕ್ಕೆ ಅಸೂಯೆಪಟ್ಟಿತು.
ಕೊನೆಯಲ್ಲಿ ಎಲ್ಲವೂ ಮುರಿದುಬಿತ್ತು.
ಪ್ರತಿಯೊಬ್ಬ ಮಾನವನೂ ತನ್ನ ಸಾಮಾನ್ಯತೆಗೆ ತಕ್ಕಂತೆ
ಇದನ್ನು ಚಿಂತಿಸಲಿ : ಸಾಯುವ ವೇಳೆ
ತನ್ನ ಬದುಕೊಂದು ನೋವಿಲ್ಲದ ನೆನಪೆನ್ನಿಸುವ ತನಕ
ಆತ ತನ್ನ ಅದೃಷ್ಟದ ಬಗ್ಗೆ ಹೆಮ್ಮೆಪಡದಿರಲಿ.

● ●

ಅಂತಿಗೊನೆ

ಪಾತ್ರಗಳು

ಅಂತಿಗೊನೆ		
ಇಸ್ಮೇನೆ	:	ಈಡಿಪಸ್‌ನ ಹೆಣ್ಣುಮಕ್ಕಳು
ಕ್ರೆಯಾನ್	:	ಥೀಬ್ಸ್‌ನ ದೊರೆ
ಯುರಿಡೀಸಿ	:	ಕ್ರೆಯಾನನ ಹೆಂಡತಿ
ಹಯ್‌ಮೋನ್	:	ಕ್ರೆಯಾನನ ಮಗ
ಟೈರೀಸಿಯಸ್	:	ಅಂಧ ಭವಿಷ್ಯಕಾರ

ಕಾವಲುಗಾರ
ದೂತ
ಥೀಬ್ಸ್ ಹಿರಿಯರ ಮೇಳ
ಮೇಳ ನಾಯಕ
ರಾಜನ ಪರಿವಾರ
ರಾಣಿಯ ಪರಿವಾರ
ಸೈನಿಕರು

ದೊರೆ ಈಡಿಪಸ್ ನಾಟಕದಲ್ಲಿನಂತೆಯೇ ಥೀಬ್ಸ್‌ನ ಅರಮನೆಯ ಎದುರು.

(ಮಧ್ಯದ ಬಾಗಿಲಿನಿಂದ ಇಸ್ಮೇನೆಯು ಪ್ರವೇಶ. ಅಂತಿಗೊನೆ ತ್ವರೆಯಿಂದ ಅವಳನ್ನು ಹಿಂಬಾಲಿಸಿ ಬಂದು ತನ್ನ ಹಿಂದೆ ಸದ್ದು ಮಾಡದೆ ಬಾಗಿಲು ಹಾಕಿಕೊಳ್ಳುವಳು.)

ಅಂತಿಗೊನೆ : ಓ ಇಸ್ಮೇನೆ, ನನ್ನೊಡನೆ ರಕ್ತದಲಿ ಪಾಲ್ಗೊಂಡ ಸೋದರಿ,
ತಂದೆ ಈಡಿಪಸ್ ವಂಶಕ್ಕೆ ತಂದಿತ್ತ ಪಾಪಕ್ಕೆ
ಮುನಿದ ಸ್ಯೂಸ್ ನಮ್ಮನ್ನು ಅಪ್ಪಳಿಸಿ
ನಾನು, ನೀನು ಕಾಣದ ನೋವು, ಅವಹೇಳನ
ಅನುಭವಿಸದ ಘೋರ ದುರಂತ, ಸಂಕಷ್ಟ ಇಲ್ಲ ;
ಬಲ್ಲೆಯಾ ? ಕೇಳಿದ್ದೀಯ ? ನಗರಕ್ಕೆ ದೊರೆಯ ಘೋಷಣೆ ?
ಅಥವಾ ನಮ್ಮ ಒಡಹುಟ್ಟಿದವರಿಗೆ ದೊರೆತ
ಶಿಕ್ಷೆಗೆ ಕೂಡ ಮನಮುಚ್ಚಿ ಕೂತೆಯೋ ?

ಇಸ್ಮೇನೆ : ನನ್ನ ಹತ್ತಿರದವರ ಬಗ್ಗೆ
ಒಳ್ಳೆಯದು, ಕೆಟ್ಟದು ಏನೊಂದೂ ಗೊತ್ತಿಲ್ಲ ನನಗೆ ;
ನಮ್ಮ ಸೋದರರಿಬ್ಬರೂ ಒಂದೇ ದಿನದಲ್ಲಿ
ಸತ್ತು ಉರುಳಿದ ಮೇಲೆ ನಡೆದದ್ದು ನಾನರಿಯೆ ;
ಆರ್ಗಸ್ ಸೈನ್ಯ ಕಳೆದಿರುಳು ಹಿಮ್ಮೆಟ್ಟಿತಂತೆ—
ಅದಹೊರತು ಸುಖದ, ದುಃಖದ ವಾರ್ತೆ ಮತ್ತೊಂದು ಗೊತ್ತಿಲ್ಲ.

ಅಂತಿಗೊನೆ : ನಿನಗೆ ಗೊತ್ತಿಲ್ಲವೆಂದು ಬಲ್ಲೆ.
ಅದಕ್ಕಾಗಿಯೇ ಇತ್ತ, ಯಾರೊಬ್ಬರೂ ಇರದ ಹತ್ತಿರ, ಕರೆತಂದೆ ;
ಗುಟ್ಟಾಗಿ ನಿನಗೊಬ್ಬಳಿಗೇ ಹೇಳುವುದಕ್ಕಾಗಿ.

ಇಸ್ಮೇನೆ : ಏನದು ಅಂತಿಗೊನೆ ? ಕರಾಳ ಸುದ್ದಿ ಹೇಳುತ್ತಿದೆ
ನಿನ್ನ ಮುಖ.

ಅಂತಿಗೊನೆ : ಇಸ್ಮೇನೆ, ಹೇಳು : ಈ ಬಗ್ಗೆ ನಿನಗೇನೆನ್ನಿಸುತ್ತದೆ—
ತಮ್ಮ ಅಕ್ಕರೆಯ ಅಣ್ಣಂದಿರಿಬ್ಬರು—ಅವರಲ್ಲೊಬ್ಬನಿಗೆ ಮಾತ್ರ
ಶವಸಂಸ್ಕಾರ ನಡೆಸಿ ಮತ್ತೊಬ್ಬನಿಗೆ ನಡೆಸಿಲ್ಲ ಕ್ರೆಯಾನ್ ;
ಅವನಿಗೆ ತಿರಸ್ಕಾರ, ಕಳಂಕ ಇಕ್ಕಿದ್ದಾನೆ.
ಎತೆಯೊಕ್ಲೆಸ್‌ಗೆ ಮಾತ್ರ ಸತ್ತವಗೆ ತಕ್ಕಂತೆ
ಸಕಲ ಮರ್ಯಾದೆಗಳ ಸಂಸ್ಕಾರ ಸಿಕ್ಕಿದೆ ; ಆದರೆ
ಹಾಗೆಯೇ ಸತ್ತ ಪಾಲಿನೈಕೆಸ್ ದೇಹ. ದೊರೆಯ
ಅಪ್ಪಣೆಯಂತೆ, ಮಣ್ಣುಗೂಡದೆ ಬಯಲಲ್ಲಿ ಬಿದ್ದಿದೆ.
ವಿಧಿ, ಆಚರಣೆ ಇಲ್ಲ—ಮಾರಿಕಣ್ಣಿನ ಹದ್ದುಗಳ
ಬಾಯಿಗೆ ದಕ್ಕುವ ಮಾಂಸದ ಮುದ್ದೆಯಾಗಿದೆ ದೇಹ.
ಮಹಾಪುರುಷ ಕ್ರೆಯಾನ್ ! ನನ್ನ ಮತ್ತು ನಿನ್ನ
ವಿರುದ್ಧ ಆತನ ಶಾಸನ ! ಹೌದು, ನಮ್ಮ ವಿರುದ್ಧ.
ಇನ್ನೇನು ಇತ್ತ ಬರುತ್ತಾನೆ ಮತ್ತೆ ಘೋಷಿಸಲು ;
ತನ್ನ ಶಾಸನವನ್ನು ಚಲಾಯಿಸಲು. ಇದು
ಬರಿಯ ಬೆದರಿಕೆಯಲ್ಲ : ಉಲ್ಲಂಘನೆಗೆ ಆತನ ಶಿಕ್ಷೆ—
ಕಲ್ಲಿನೇಟಿನ ಸಾವು. ಗೊತ್ತಾಯಿತೆ—ಇದೀಗ ನಾವು
ನಮ್ಮ ನೆತ್ತರಿನ ಉತ್ತಮಿಕೆ ತೋರಲು ತಕ್ಕ ಸಮಯ.

ಇಸ್ಮೇನೆ : ನನ್ನ ಪ್ರೀತಿಯ ಅಂತಿಗೊನೆ, ಇದು ನಿಜವೇ ಆಗಿದ್ದರೆ,
ನಾನು ಹೇಗೆ, ಏನನ್ನ ಮಾಡಿ ನಿನಗೆ ನೆರವಾಗಬಲ್ಲೆ ?

ಅಂತಿಗೊನೆ : ನೆರವಾಗುತ್ತೀಯ ? ನನ್ನೊಂದಿಗೆ ಕೈ ಹಾಕುತ್ತೀಯ ? ಹೇಳು.

ಇಸ್ಮೇನೆ : ಎಂಥ ನೆರವು ? ಯಾತಕ್ಕೆ ? ಏನು ನಿನ್ನ ಅರ್ಥ ?

ಅಂತಿಗೊನೆ : ಎತ್ತುವುದಕ್ಕೆ....ಆ ದೇಹ ಎತ್ತುವುದಕ್ಕೆ
ನೆರವಾಗುತ್ತೀಯ ?

ಇಸ್ಮೇನೆ : ಅಂದರೆ...ಆ ದೇಹ ಹೂಳುವುದಕ್ಕೆ ? ಶಾಸನ ಉಲ್ಲಂಘಿಸಿ ?

ಅಂತಿಗೊನೆ : ಏನೇ ಆದರೂ
ಆತ ನಮ್ಮ ಸೋದರನಲ್ಲವೆ ? ನಾನು ಮಾತ್ರ
ಖಂಡಿತ ಒಡಹುಟ್ಟಿದವರ ಕೈಬಿಡಲಾರೆ.

ಇಸ್ಮೇನೆ : ಕ್ರೆಯಾನನ ಪ್ರತಿಷೇಧ ಗೊತ್ತಿದ್ದೂ
ಹೇಗೆ ಇಂಥ ಧೈರ್ಯ ಮಾಡಬಲ್ಲೆ ?

ಅಂತಿಗೊನೆ : ನನ್ನನ್ನು ನನ್ನವರಿಂದ ಬೇರ್ಪಡಿಸುವ ಹಕ್ಕು ಅವನಿಗಿಲ್ಲ.

ಇಸ್ಮೇನೆ : ಓ ತಂಗಿ, ಮರೆತು ಬಿಟ್ಟೆಯಾ ನಮ್ಮ ತಂದೆ

ಯಾತನೆ ಅವಹೇಳನದಲ್ಲಿ ನಾಶವಾದದ್ದನ್ನ, ಭಯಂಕರ
ಪಾಪದ ಬೆನ್ನುಹತ್ತಿ ಶೋಧಿಸಿ ಪಡೆದದ್ದನ್ನ, ಸ್ವಂತ ಕೈಯಿಂದಲೇ
ಕಣ್ಣು ಕಿತ್ತುಕೊಂಡು ಅಳಿದದ್ದನ್ನ ? ಮತ್ತೆ ಅವನ ತಾಯಿ
ಮತ್ತು ಹೆಂಡತಿ—ಒಬ್ಬಳೇ ಆಕೆ—ತನ್ನ ಹಗ್ಗಕ್ಕೆ ತಾನೇ
ನೇತುಬಿದ್ದದ್ದನ್ನ ? ಈಗ ಅಣ್ಣಂದಿರಿಬ್ಬರು
ಪರಸ್ಪರ ಸಾವನ್ನಿಕ್ಕಿ, ರಕ್ತಕ್ಕೆ ರಕ್ತ ಹರಿಸಿ,
ಒಂದೇ ದಿನ ಒಂದೇ ರಣರಂಗದಲ್ಲಿ ತರಿದುಕೊಂಡು
ಉರುಳಿದ್ದನ್ನ ? ಉಳಿದವರು ನಾವಿಬ್ಬರೇ ;
ದೊರೆಯ ಆಜ್ಞೆಯ ಉಲ್ಲಂಘನೆಗೆ ಕಾದಿಹ ಶಿಕ್ಷೆ
ಗೊತ್ತಿಲ್ಲವೇ ನಿನಗೆ ? ಯೋಚಿಸು, ಅಂತಿಗೊನೆ ;
ಗಂಡಸರೆದುರು ಹೋರಾಡುವುದು ನಮ್ಮಂಥ
ಹೆಂಗಸರಿಗಲ್ಲ ; ಅಧಿಕಾರದಲ್ಲಿರುವವರು ಬಲಿಷ್ಠರು ;
ಅವರ ಶಾಸನವ ಒಪ್ಪಬೇಕು ನಾವು, ಅದೆಷ್ಟೇ
ಕ್ಷುದ್ರವಾದರೂ ಸಹಿಸಬೇಕು. ಸತ್ತವರು ದಯವಿಟ್ಟು
ಕ್ಷಮಿಸಲಿ ನನ್ನ ; ಆಜ್ಞೆಗೆ ಬದ್ಧಳಾದವಳು ನಾನು.
ಅದಕ್ಕೆ ಮೀರಿದ್ದು ನನ್ನ ಪಾಲಿಗೆ ಹುಚ್ಚುತನ.

ಅಂತಿಗೊನೆ : ಇಲ್ಲ, ಹಾಗಾದರೆ ನನಗೆ ನಿನ್ನ ಸಹಾಯ ಬೇಕಿಲ್ಲ,
ನೀನಿನ್ನು ಕೊಟ್ಟರೂ ಅದಕ್ಕೆ ನನ್ನ ಕೃತಜ್ಞತೆ ಇಲ್ಲ.
ನಿನ್ನ ದಾರಿ ನಿನಗೆ ; ನಾನು ನನ್ನಣ್ಣನಿಗೆ ಸಮಾಧಿ ಮಾಡುತ್ತೇನೆ.
ಅದಕ್ಕಾಗಿ ಸಾಯುವುದಾದರೆ ಎಂಥ ಅದೃಷ್ಟವಂತೆ ನಾನು ;
ಪವಿತ್ರ ಪಾಪಕ್ಕಾಗಿ ಪಡೆವ ಶಿಕ್ಷೆ ! ಅದರಿಂದಾಗಿ
ದೊರೆವ ಸತ್ತ ಸೋದರನ ಸಾನ್ನಿಧ್ಯ ಸಾಕು ನನಗೆ.
ಬದುಕಿನಲ್ಲಿ ನೆಮ್ಮದಿ ನೀಡಲು ಬೇಕಾದ್ದು ಅಲ್ಪ ಸಮಯ ;
ಆದರೆ ಸತ್ತವರ ಪ್ರೇಮ ಮಾತ್ರ ಚಿರಂತನ.
ನಾನು ತೆರಳುತ್ತೇನೆ ಅಲ್ಲಿಗೆ ; ನಿನಗಿಷ್ಟವಾದರೆ ಬದುಕು,
ಬದುಕಿದ್ದು ದೇವರ ಪುಣ್ಯಶಾಸನಗಳನ್ನು ಧಿಕ್ಕರಿಸು.

ಇಸ್ಮೇನೆ : ನಾನು ಧಿಕ್ಕರಿಸುತ್ತಿಲ್ಲ—ಆದರೆ
ಶಾಸನಕ್ಕೆ ಸವಾಲೊಡ್ಡುವಷ್ಟು ಶಕ್ತಿ ನನಗಿಲ್ಲ.

ಅಂತಿಗೊನೆ : ಆ ನೆಪದಲ್ಲಿ ನೀನು ಸುರಕ್ಷಿತವಾಗಿರು ; ಹೋಗುತ್ತೇನೆ, ನಾನು—
ನನ್ನ ಸೋದರನ ದೇಹವನ್ನು ಮಣ್ಣುಗೂಡಿಸುತ್ತೇನೆ.

ಇಸ್ಮೇನೆ : ಭಯವಾಗುತ್ತಿದೆ ನನಗೆ ಅಂತಿಗೊನೆ—ನಿನಗಾಗಿ

ಭಯಗೊಂಡಿದ್ದೇನೆ.

ಅಂತಿಗೊನೆ : ನನಗಾಗಿ ಹೆದರುವ ಅಗತ್ಯವಿಲ್ಲ. ನಿನ್ನ ಹಿತ ನೀನು ನೋಡಿಕೋ.

ಇಸ್ಮೇನೆ : ಕೊನೆಯ ಪಕ್ಷ ಗುಟ್ಟಾಗಿ ಮಾಡು ;
ನಾನು ಕೂಡ ಗುಟ್ಟು ಕಾಪಾಡುತ್ತೇನೆ.

ಅಂತಿಗೊನೆ : ಎಲ್ಲೆಲ್ಲೂ ಪ್ರಸಿದ್ಧಪಡಿಸು ;
ಇದು ಜಗತ್ತಿಗೆ ಗೊತ್ತಾಗುವಂತೆ ಸಾರಿಹೇಳು ;
ಇಲ್ಲದಿದ್ದರೆ ನಾನು ನಿನ್ನನ್ನು ದ್ವೇಷಿಸುತ್ತೇನೆ.

ಇಸ್ಮೇನೆ : ಈ ಕೃತ್ಯ ನೆನೆದು ನಿನ್ನೆದೆ ಬೆಂಕಿಯಾಗಿ ಧಗಧಗಿಸುತ್ತಿದೆ ;
ನನ್ನದು ತಣ್ಣಗೆ ಹೆಪ್ಪುಗಟ್ಟುತ್ತಿದೆ.

ಅಂತಿಗೊನೆ : ಕರ್ತವ್ಯದಿಂದ ಏನನ್ನು ನೆರವೇರಿಸಬೇಕೆಂದು
ನನಗೆ ಗೊತ್ತು.

ಇಸ್ಮೇನೆ : ಆದರೆ ಅದು
ನಿನ್ನಿಂದ ಸಾಧ್ಯವಾದರೆ ಮಾತ್ರ ; ಸೋಲು ನಿನಗೆ ಕಟ್ಟಿಟ್ಟದ್ದು.

ಅಂತಿಗೊನೆ : ಪ್ರಯತ್ನಿಸಿ
ಸೋತರೆ ಮಾತ್ರ ಸೋತದ್ದು ಸತ್ಯ.

ಇಸ್ಮೇನೆ : ವ್ಯರ್ಥ ಪ್ರಯತ್ನಕ್ಕೆ ಮನಸ್ಸು ಮಾಡಬೇಡ.

ಅಂತಿಗೊನೆ : ವ್ಯರ್ಥ ;
ಓ, ಅಂಥ ಮಾತಾಡುವ ನಿನ್ನ ನಾನೆಷ್ಟು ದ್ವೇಷಿಸುತ್ತೇನೆ !
ಮಡಿದ ಆತ ಕೂಡ ನಿನ್ನನ್ನು ತುಚ್ಛವಾಗಿ ಕಾಣುತ್ತಾನೆ.
ನನ್ನ ಹುಚ್ಚಿನೊಂದಿಗೆ ನನ್ನನ್ನ ಬಿಟ್ಟು ತೊಲಗು, ನನ್ನ
ಉದಾತ್ತ ಮರಣದಿಂದ ನನ್ನನ್ನು ವಂಚಿಸಬಲ್ಲ ಶಿಕ್ಷೆ ಈ ಜಗತ್ತಿ
ನಲ್ಲಿಲ್ಲ.

ಇಸ್ಮೇನೆ : ಆಗಲೇ ತೀರ್ಮಾನಿಸಿದ್ದರೆ ಹೋಗು,
ನಿನ್ನ ಅವಿವೇಕಕ್ಕೆ ; ಆದರೆ ನೆನಪಿಡು :
ನಿನ್ನ ಪ್ರಿಯ ಜನಕ್ಕೆ ಎಂದೂ ಬೇಕಾದವಳು ನೀನು.

(ಇಸ್ಮೇನೆ ಅರಮನೆಯೊಳಕ್ಕೆ ಹೋಗುತ್ತಾಳೆ ; ಅಂತಿಗೊನೆ
ಪಕ್ಕದ ಬಾಗಿಲ ಮೂಲಕ)

* * *

ಮೇಳ : ಓ ಸೂರ್ಯ ! ಸಪ್ತದ್ವಾರಗಳ ನಗರದಲ್ಲೆಂದಿಗೂ
ಮೂಡದಂಥ ಸೂರ್ಯ ! ಥೀಬ್ಸ್ ಪುರದ ಸೂರ್ಯ !
ದಿರ್ಕೆ ದೇವಿಯು ಹೊಳೆಗೆ ಹೇಳಿಸದಂಥ ಬೆಳಗು ;
ಮೇಲೇರಿ ಬಂದ ಶತ್ರುಗಳ ಕರಗಿಸಿದ,
ಆರ್ಗೀವ್ ವೀರರನ್ನೆಲ್ಲ ಬಡಿದೋಡಿಸಿದ
ನಮ್ಮ ಬಂಗಾರ ಬೆಳಗು !

ಪಾಲಿನೈಕಸ್ ಸೈನ್ಯ ನಮ್ಮನ್ನು ಬಳಸಿತ್ತು,
ಅವನ ಕ್ರೋಧದ ಸದ್ದು ನಮ್ಮನ್ನು ತಾಗಿತ್ತು,
ಲಕ್ಷ ಸೈನಿಕರೊಡನೆ ಬಂದಿದ್ದ ನಮ್ಮ ಮೇಲೆ,
ಬೆಳ್ಳಿ ರೆಕ್ಕೆಯ ಹರಡಿ, ಹಾರುಪುಕ್ಕವ ತೋರಿ,
ಚೀರುಪಕ್ಷಿಯ ಹಾಗೆ ಎರಗಿದ್ದ ನಮ್ಮ ಮೇಲೆ.

ಸಪ್ತದ್ವಾರದಿಂದ ಆತ ನಗರದೊಳಗೆ ನೋಡಿ,
ಗೋಪುರಗಳ ನೆತ್ತಿಯಿಂದ ಒಳನುಗ್ಗಲು ಹೊಂಚಿ,
ಹಸಿದ ಭರ್ಚಿ ನಮ್ಮ ಸುತ್ತ ಬೇಲಿಯಾಗಿ ಕೂಡಿ,
ಇನ್ನೇನು ರಕ್ತ ಚೆಲ್ಲಬೇಕು
ಮನೆಗೋಪುರ ಮುಕುಟವನ್ನು ಅಗ್ನಿದೇವ ಮುಕ್ಕಬೇಕು,
ಅಷ್ಟರಲ್ಲಿ ರಣಮಾರಿಯ ಸದ್ದ ಕೇಳಿ ಓಡಿದ ;
ರಣಗರ್ಜನೆ ಕಿವಿಯ ಗಿಡಿಯೆ,
ರಣದ ಸಿಡಿಲು ಸುತ್ತ ಸಿಡಿಯೆ,
ಅಲ್ಲಿ ನಿಲ್ಲದೋಡಿದ.

ಆತನಹಂಕಾರದಲ್ಲಿ, ಚಿನ್ನದಂಬಾರಿಯಲ್ಲಿ, ಚಣಗುಟ್ಟಿದ ಸಜ್ಜಿನಲ್ಲಿ,
ಉಕ್ಕಿ ಬರುವುದನ್ನು ಕಂಡು, ಮಿಂಚಿ ಹರಿವುದನ್ನು ಕಂಡು,
ನಮ್ಮ ಕೋಟೆ ಹತ್ತಿ ಆತ ಗೆಲುವ ಘೋಷಿಸುವುದ ಕಂಡು,
ಅಗ್ನಿಯೆಬ್ಬಿಸಿದನು ಆಗ, ಹೊಡೆದುರುಳಿಸಿ ಗೆದ್ದನು.

ಚಂಡಮಾರುತದಂತೆ ಹೊಡೆದವ ಬಂದ ಕೆಳಗಡೆಗಾಕ್ಷಣ ;
ಬಿದ್ದ ಉರಿಯುವ ಕೊಳ್ಳಿಯಂದದಿ ನೆಲಕೆ ತನ್ನವರೊಂದಿಗೆ ;

ನಮ್ಮ ಪೊರೆಯುವ ದೇವ ಹೊಡೆದನು ಕೊಂದು ಬದುಕುವ
ಮಂದಿಗೆ.

ಏಳು ಬಾಗಿಲಿಗೇಳು ಪಡೆಗಳು ; ಹಾಕಿ ಪಡೆಗಳು ಹೊಂಚನು,
ಸ್ಯೂಸ್ ದೇವನ ಪಾದಕಿಕ್ಕಲು ಕಿತ್ತುಕೊಂಡರು ಕಂಚನು ;
ಆದರಿಬ್ಬರು ಅಣ್ಣತಮ್ಮ ಸೆಣಸಿ ಬಿದ್ದರು ಭೂಮಿಗೆ ;
ಸೋಲುಗೆಲುವಿನ ಸೀಮೆ ದಾಟಿ ಹೋದರಿಬ್ಬರು ಸಾವಿಗೆ.

ಗೆಲುವು ನಮ್ಮದು, ನಮ್ಮ ಸೂಡಿದೆ ಸಂಭ್ರಮ ;
ರಥಗಳಾಗರ ಥೀಬ್ಸ್ ತುಂಬಿದೆ ಸಂಭ್ರಮ ;
ಯುದ್ಧ ಮುಗಿದಿದೆ—ಈಗ ನೀಡುವ ಕಾಣಿಕೆ,
ಮಣಿಯೊ ದೇವಗೆ. ತೆರಳೊ ದೇವಸ್ಥಾನಕೆ,
ಇರುಳ ತುಂಬುವ ಬನ್ನಿ ಹಿಗ್ಗಿನ ನೃತ್ಯದಿ,
ಬದುಕು ಹಿಗ್ಗಲಿ ದಯೋನಿಸಸ್ ಕೃತ್ಯದಿ.

ಆದರಿದಿಗೋ ಇತ್ತ ಬರುತಿಹ ಕ್ರೆಯಾನ್,
ಮೆನೋಕಿಯಾಸ್ ಪುತ್ರನು ;
ನಮ್ಮ ದೇವರು ನಮಗೆ ನೀಡಿದ ಹೊಸತನ,
ಈತ ನಗರದ ರಾಜನು.
ಹೊಸತನೇನನು ಕೊಡುವನೋ—
ಎಂಥದೀತನ ಮನವ ಕಲಕಿತೋ
ಏನು ಶಾಸನ ತರುವನೋ.

(ಮಧ್ಯದ ಬಾಗಿಲು ತೆಗೆದುಕೊಳ್ಳುತ್ತದೆ , ಕ್ರೆಯಾನ್ ಪ್ರವೇಶಿಸು ತ್ತಾನೆ)

ಕ್ರೆಯಾನ್ : ನನ್ನ ನಗರದ ಗಣ್ಯರೆ,
ದೇವತೆಗಳು ಈ ನಗರವನ್ನು ಕಷ್ಟಕೋಟಲೆಗಳ
ಬಿರುಗಾಳಿಯಿಂದ ಪ್ರಶಾಂತ ಸ್ಥಿತಿಗೆ ಸಾಗಿಸಿದಮೇಲೆ
ಈ ನಗರದ ಪ್ರಜೆಗಳಲ್ಲಿ ಪ್ರಾಜ್ಞರಾದ ನಿಮ್ಮನ್ನು,
ದೊರೆ ಲಾಯಿಸ್ ಕಾಲದಲ್ಲಿ ನಿಷ್ಠರಾಗಿದ್ದವರನ್ನು,

ದೊರೆ ಈಡಿಪಸ್‌ನ ವಿವೇಕಯುಕ್ತ ಆಡಳಿತಕ್ಕೆ ನೆರವಾಗಿದ್ದವರನ್ನು,
ತರುವಾಯ ಆತನ ಮಕ್ಕಳ ಆಳ್ವಿಕೆಯಲ್ಲಿ ಸೇವೆಗೈದವರನ್ನು
ಮಂತ್ರಾಲೋಚನೆಗೆ ಕರೆದಿದ್ದೇನೆ. ಈಡಿಪಸ್ ಪುತ್ರರಿಬ್ಬರೂ
ರಣದಲ್ಲಿ ಒಬ್ಬರನ್ನೊಬ್ಬರು ಕೊಂದು ಭ್ರಾತೃರಕ್ತದಲ್ಲಿ
ತೊಯ್ದ ಮೇಲೆ ಅವರ ಸಂಬಂಧಿಯಾದ ನಾನು
ಸ್ಥಾನ, ಸಂಸ್ಥಾನಗಳ ಅಧಿಕಾರ ಸ್ವೀಕರಿಸಿದ್ದೇನೆ.
        ಮಾನವನ ಬುದ್ಧಿ,
ಚೇತನದ ಸತ್ಯ ಗೊತ್ತಾಗುವುದು ಅಧಿಕಾರ ವಹಿಸಿ
ಆಡಳಿತಕ್ಕೆ ತೊಡಗಿದಾಗ. ಆದರೆ ನನ್ನಮಟ್ಟಿಗೆ ಮಾತ್ರ,
ನಾನೆಂದೂ ನಂಬಿರುವಂತೆ, ಯಾವ ದೊರೆ
ಭಯದಿಂದಾಗಿ ಮತ್ತೊಬ್ಬರ ಸಲಹೆ ಕೇಳದೆ
ತೆಪ್ಪಗಿರುತ್ತಾನೋ ಆತ ಹಾಳಾದಂತೆಯೇ.
ಅಂತೆಯೇ ನಾಶವಾಗುತ್ತಾನೆ ಮನುಷ್ಯ
ತನ್ನ ದೇಶಕ್ಕಿಂತ ತನ್ನವರ ಹಿತ ಮುಖ್ಯವೆಂದು ನಂಬಿದರೆ.
ಅಂಥವರನ್ನು ನಾನು ಸಹಿಸಲಾರೆ.
ನಮ್ಮೆಲ್ಲರ ಮೇಲೆ ಕಣ್ಣಿಟ್ಟಿರುವ ಆ ದೇವರ ಸಾಕ್ಷಿಯಾಗಿ!
ಈ ದೇಶಕ್ಕೆ ಅಪಾಯವೆಂದು ತೋರಿದ್ದನ್ನು ನಾನು
ಹೊರಗೆಡಹುತ್ತೇನೆ. ಈ ರಾಜ್ಯಕ್ಕೆ ಕೇಡೆಣಿಸುವ
ಯಾವನೂ ನನ್ನ ಗೆಳೆಯನಲ್ಲ. ಈ ಬಗ್ಗೆ ನಾನು ಸ್ಪಷ್ಟ :
ಈ ರಾಷ್ಟ್ರವೇ ನಮ್ಮ ಬದುಕು ; ಇದು ಸುರಕ್ಷಿತವಾಗಿರುವ ವರೆಗೆ
ನಮಗೆ ಸ್ನೇಹಿತರಿರಲು ಸಾಧ್ಯ. ಇದು
ನಮ್ಮೆಲ್ಲರ ಕ್ಷೇಮಕ್ಕಾಗಿ ನನ್ನ ರಾಜ್ಯನೀತಿ.
        ಇದಕ್ಕನುಗುಣವಾಗಿ
ಈಡಿಪಸ್ ಮಕ್ಕಳ ಬಗ್ಗೆ ನಾನೊಂದು ಶಾಸನ ಹೊರಡಿಸಿದ್ದೇನೆ ;
ಅದು ಹೀಗಿದೆ : ಈ ದೇಶದ ರಕ್ಷಣೆಯಲ್ಲಿ
ಧೀರನಾಗಿ ಹೋರಾಡುತ್ತ ಸತ್ತ ಎತೆಯೊಕ್ಲೆಸ್‌ಗೆ
ತಕ್ಕ ಮನ್ನಣೆಯೊಂದಿಗೆ, ಸಕಲ ವಿಧಿಯುಕ್ತ
ಆಚರಣೆಯೊಂದಿಗೆ ಶವಸಂಸ್ಕಾರವಾಗಬೇಕು.
ಇನ್ನೊಬ್ಬ–ನಿಮಗಾತ ಯಾರೆಂದು ಗೊತ್ತು–
ದೇಶಾಂತರದಿಂದ ದಂಡೆತ್ತಿ ಹಿಂದಿರುಗಿ
ತಾಯ್ನಾಡ ದೇವರುಗಳನ್ನು ಭಸ್ಮಗೊಳಿಸಲು, ಧ್ವಂಸಮಾಡಲು

ಬಂದು,
ತನ್ನವರ ರಕ್ತ ಹೀರಲು, ಗುಲಾಮರನ್ನಾಗಿಸಲು ಹೋರಾಡಿದ
ಅವನ ಸೋದರ ಪಾಲಿನೈಕಸ್‌ಗೆ
ಸಮಾಧಿ ಸಿಗಕೂಡದು, ಸಂಸ್ಕಾರವಿರಕೂಡದು ;
ಶೋಕಪ್ರದರ್ಶನವನ್ನು ಯಾರೂ ಆಚರಿಸಕೂಡದು ;
ಹೂಳದೆ ಅವನ ದೇಹವನ್ನು ಹದ್ದುನಾಯಿಗಳಿಗೆ
ಎಸೆಯಬೇಕು ; ಎಲ್ಲರ ಕಣ್ಣಿಗೆ ಘೋರ ನೋಟವಾಗಬೇಕು.
ಕೆಡುಕು ಒಳಿತಿನ ಮೇಲೆ ಜಯ ಗಳಿಸಲು
ಬಿಡಕೂಡದೆಂದು ನಿರ್ಧರಿಸಿದ್ದೇನೆ ; ಸತ್ತಿರಲಿ, ಬದುಕಿರಲಿ,
ಈ ನಾಡ ನಿಷ್ಠನಿಗೆ ಮಾತ್ರ ಮಾನ್ಯತೆ ದೊರೆಯಬೇಕು.

ಮೇಳನಾಯಕ : ಮೆನೊಕಿಯಾಸ್ ಪುತ್ರ, ಕ್ರೆಯಾನ್,
ಶತ್ರುವಿಗೆ, ಮಿತ್ರರಿಗೆ ನಿನ್ನ ಶಾಸನ ಪಥ್ಯ.
ಸತ್ತವರಿಗೆಂತೋ ಬದುಕಿರುವವರಿಗೆ ಅಂತೆಯೇ
ನಿನ್ನ ಇಷ್ಟವೇ ಈ ನಾಡ ಶಾಸನ.

ಕ್ರೆಯಾನ್ : ಹಾಗಾದರೆ ಅದಕ್ಕೆ ಬದ್ಧರಾಗಿ ನಡೆಯಿರಿ,
ನಡೆಸಿರಿ.

ಮೇಳನಾಯಕ : ಪ್ರಭು, ಅದಕ್ಕೆ ತರುಣರನ್ನು ನೇಮಿಸಿದರೆ ಉತ್ತಮ.

ಕ್ರೆಯಾನ್ : ಹೆಣವನ್ನು ಕಾಯಲು ಕಾವಲುಗಾರರನ್ನು ಹಾಕಿದ್ದೇನೆ.

ಮೇಳನಾಯಕ : ಹಾಗಾದರೆ ನಮ್ಮ ಕರ್ತವ್ಯ ಏನು ?

ಕ್ರೆಯಾನ್ : ಉಲ್ಲಂಘನೆಯನ್ನು ಸಹಿಸದೆ ಇರುವುದು.

ಮೇಳನಾಯಕ : ಉಲ್ಲಂಘಿಸಿ ಮರಣ ಬಯಸುವ ಹುಚ್ಚರೂ—

ಕ್ರೆಯಾನ್ : ಹೌದು, ಅದೇ ಶಿಕ್ಷೆ ;
ಸ್ವಂತ ಲಾಭಕ್ಕಾಗಿ ವಿನಾಶದತ್ತ ಸಾಗುವ ಜನ
ಯಾವಾಗಲೂ ಇರುತ್ತಾರೆ,

(ಹೋಗಲಿದ್ದಾನೆ—ಕಾವಲುಗಾರ ಪಕ್ಕದಿಂದ ಪ್ರವೇಶಿಸುತ್ತಾನೆ ; ಕ್ರೆಯಾನ್ ಅರಮನೆಯ ಬಾಗಿಲಲ್ಲಿ ನಿಲ್ಲುತ್ತಾನೆ)

ಕಾವಲುಗಾರ : ಮಹಾಪ್ರಭು,
ನನ್ನ ಏದುಸಿರ ಕಂಡು ಬಹುವೇಗವಾಗಿ ಓಡಿಬಂದದ್ದಾಗಿ
ಭಾವಿಸಬೇಡ. ಗಡಿಬಿಡಿಯ ಓಟದಿಂದಲ್ಲ ಹೀಗಾದದ್ದು ;
ಬರುತ್ತ ಕೆಲವೊಮ್ಮೆ ನಿಂತೆ, ಯೋಚಿಸಿದೆ, ನನ್ನನ್ನೆ ಕೇಳಿಕೊಂಡೆ :
"ನಿನ್ನ ವಿನಾಶಕ್ಕೆ ಯಾಕೆ ಓಡುತ್ತಿದ್ದೀ, ಪಾಪಿ ?" ಅಂದುಕೊಂಡೆ,

ಮತ್ತೆ, "ಓಡು, ಮುಠ್ಠಾಳ, ಈ ಸುದ್ದಿಯನ್ನು
ಕ್ರೆಯಾನ್ ಬೇರೊಬ್ಬನಿಂದ ಕೇಳಿದರೆ ನಿನ್ನ ತಲೆ ಹಾರಿದಂತೆಯೇ",
ಅಂದುಕೊಂಡೆ. ಅಂತೂ ಇಲ್ಲಿದ್ದೇನೆ ನನ್ನ ಭಯದ
ಅವಸರ ನನ್ನನ್ನು ಕರೆತಂದಷ್ಟು ಬೇಗ—ನಿಜಕ್ಕೂ
ಅಂಥ ವೇಗವಲ್ಲದಿದ್ದರೂ ಸಹ. ಶಿಕ್ಷೆಗೆ ತುತ್ತಾದರೂ
ದೇವರಿಟ್ಟಿದ್ದಕ್ಕೆ ಹೆಚ್ಚೇನೂ ಇರಲಾರದೆಂದು
ಒಂದು ಬಗೆಯ ಸಮಾಧಾನಕ್ಕೆ ಅಂಟಿಕೊಂಡಿದ್ದೇನೆ.

ಕ್ರೆಯಾನ್ : ಅಯ್ಯೋ ದೇವರೇ, ಹೇಳು ವ್ಯಕ್ತಿ, ಆಗಿರುವುದಾದರೂ ಏನು ?

ಕಾವಲುಗಾರ : ನನ್ನ ಬಗ್ಗೆ ಹೇಳುವುದಾದರೆ,
ಪ್ರಭು, ನಾನಿದನ್ನು ಖಂಡಿತ ಮಾಡಿದವನಲ್ಲ,
ಮಾಡಿದ್ದ ನೋಡಿದವನೂ ಅಲ್ಲ. ಇಷ್ಟಕ್ಕೆ
ಯಾರೂ ನನ್ನನ್ನು ಶಿಕ್ಷಿಸಲಾರರು.

ಕ್ರೆಯಾನ್ : ನೀನು
ನಾಜೂಕಿನ ಎಚ್ಚರದಿಂದ ಹೇಳುವುದು ನೋಡಿದರೆ
ಸುದ್ದಿ ವಿಲಕ್ಷಣವಾಗಿರಬೇಕು.

ಕಾವಲುಗಾರ : ಇದೆ, ಎಷ್ಟು ವಿಲಕ್ಷಣವೆಂದರೆ,
ಅಪ್ರಿಯ ಸುದ್ದಿ ನಿಜಕ್ಕೂ ಅಪ್ರಿಯ !

ಕ್ರೆಯಾನ್ : ಸರಿ, ಹೇಳುವುದನ್ನು ಹೇಳಿ ತೊಲಗು.

ಕಾವಲುಗಾರ : ಇಷ್ಟು ಪ್ರಭು :
ಹೆಣ... ಅದನ್ನು ಯಾರೋ ಸಮಾಧಿ ಮಾಡಿ ಹೋಗಿದ್ದಾರೆ,
ಅದರ ಮೇಲೆ ವಿಧಿಯುಕ್ತ ಸಂಸ್ಕಾರದ ರೀತಿಯಲ್ಲಿ
ಹುಡಿಮಣ್ಣು ಚೆಲ್ಲಿದ್ದಾರೆ.

ಕ್ರೆಯಾನ್ : ಏನು ? ಅಷ್ಟು ಧೈರ್ಯ ಯಾರಿಗೆ ?

ಕಾವಲುಗಾರ : ಗೊತ್ತಿಲ್ಲ, ಪ್ರಭು ;
ಪಿಕಾಸಿಯ ಸುಳಿವಿರಲಿಲ್ಲ, ಗುದ್ದಲಿಯ ತುಣುಕಿರಲಿಲ್ಲ ;
ನೆಲ ಒಣಗಿ ಕಲ್ಲಾಗಿತ್ತು, ಗಾಲಿಗಳ ಗುರುತಿರಲಿಲ್ಲ ;
ಮೊದಲ ಹಂತದ ಕಾವಲುಗಾರ ಅದನ್ನು ತೋರಿಸಿದಾಗ
ನಾವು ದಿಗ್ಭ್ರಾಂತರಾದೆವು. ಹೆಣವನ್ನು ಸ್ವಲ್ಪವೇ ಮುಚ್ಚಿತ್ತು,
ನಿಜವಾದ ಸಮಾಧಿಯಂತಲ್ಲ, ಕರುಣೆಗೊಂಡ ದಾರಿಹೋಕ
ಮಾಡಿದಂತೆ. ಯಾವೊಂದು ಪ್ರಾಣಿ, ನೆಲ ಕೆದಕಿ ಮುಚ್ಚಬಲ್ಲ
ನಾಯಿ, ಮತ್ತೊಂದು ಏನೂ ಇರಲಿಲ್ಲ. ಸರಿ,

ನಾವು ಒಬ್ಬರ ಮೇಲೊಬ್ಬರು ತಪ್ಪು ಹೊರಿಸಹತ್ತಿದೆವು.
ಕಿತ್ತಾಡಲಿದ್ದೆವು, ತಡೆವವರಿಲ್ಲದೆ ; ಯಾಕೆಂದರೆ
ಅದನ್ನು ನಮ್ಮಲ್ಲಿ ಯಾರಾದರೂ ಮಾಡಲು ಸಾಧ್ಯವಿತ್ತು,
ಸಾಧಿಸಿ ತೋರಿಸುವುದು ಕಷ್ಟವಿತ್ತು, ಆ ಮಾತು ಬೇರೆ.
ಪ್ರತಿಯೊಬ್ಬರೂ ಕಾದ ಕಬ್ಬಿಣ ಹಿಡಿದು
ದೇವರ ಹೆಸರಲ್ಲಿ ಪ್ರಮಾಣ ಮಾಡಿ, ಬೆಂಕಿಯಲ್ಲಿ ಓಡಾಡಿ
ನಾನು ಮಾಡಿಲ್ಲ, ನೋಡಿಲ್ಲ ಎನ್ನಲು ಸಿದ್ಧರಿದ್ದೆವು
ಆದರೆ ಎಲ್ಲರೂ ಅಪ್ರತಿಭರಾಗಿದ್ದೆವು.
ಆಗ ನಮ್ಮಲ್ಲೊಬ್ಬ ನಮ್ಮ ರಕ್ತ ಹೆಪ್ಪುಗಟ್ಟುವಂಥ ಸೂಚನೆ ಕೊಟ್ಟ :
ಅಪಾಯವಿಲ್ಲದೆ ಮಾಡಲಾರೆವು, ಬಿಡಲಾರೆವು—ಅವನೆಂದ :
"ಇದನ್ನು ದೊರೆಗೆ ಹೇಳಬೇಕು ; ಮುಚ್ಚಿಡಲು ಸಾಧ್ಯವಿಲ್ಲ."
ಅದನ್ನು ಒಪ್ಪಿದೆವು. ಯಾರು ಹೋಗಬೇಕೆಂಬುದಕ್ಕೆ
ಪಗಡೆ ದಾಳ ಹಾಕಿದೆವು ; ನನ್ನನ್ನು ಅದೃಷ್ಟ ಆರಿಸಿತು.
ಇಷ್ಟಾಗಿ ಬಂದಿದ್ದೇನೆ—ನನ್ನ, ನಿನ್ನ ಇಷ್ಟಕ್ಕೆ ವ್ಯತಿರಿಕ್ತವಾಗಿ.
ಕೇಡಿನ ಸುದ್ದಿ ತರುವಾತನಿಗೆ ಎಲ್ಲಿಯೂ ಸ್ವಾಗತವಿಲ್ಲ.

ಮೇಳನಾಯಕ : ಪ್ರಭು, ನನಗೆ
ಮೊದಲಿನಿಂದ ಸಂಶಯವಿದ್ದೇ ಇತ್ತು
ಇದರಲ್ಲಿ ಪರಮಾತ್ಮನ ಕೈವಾಡವಿದ್ದೀತೆಂದು.

ಕ್ರೆಯಾನ್ : ಸಾಕು ನಿಲ್ಲಿಸು, ನನ್ನ ಕೆರಳಿಸಬೇಡ.
ಮುದಿಯ ನೀನು ಮೂರ್ಖ ಮುದುಕನಂತೆ ಗಳಹಬೇಡ ;
ದೇವತೆಗಳು ಈ ಕೊಳೆತ ಮಾಂಸದ ಬಗ್ಗೆ ಚಿಂತಿಸುವರೆಂಬ
ದೈವಭ್ರಷ್ಟ ಮಾತನ್ನಾಡಬೇಡ. ಅವನು ಅವರಿಗೆ ಗೊತ್ತಿಲ್ಲವೇ ?
ದೇವಾಲಯಗಳ ಉರುಳಿಸಲು, ಪುಣ್ಯ ಸ್ಥಳಗಳ ಕೆಡಹಲು,
ಅವರ ಭೂಮಿ, ಧರ್ಮಗಳನ್ನೆಲ್ಲ ಧ್ವಂಸ ಮಾಡಲು
ಬಂದವನ ಸಂಸ್ಕಾರ ಅವರಿಗೆ ಬೇಕೆಂದು
ನಿನಗೆನ್ನಿಸುತ್ತದೆಯೆ ? ಇಲ್ಲ, ಖಂಡಿತ ಇಲ್ಲ.
ಈ ನನ್ನ ರಾಷ್ಟ್ರದಲ್ಲಿಯೇ
ನನ್ನ ಶಾಸನಗಳತ್ತ ಕೊಂಕಿ ತಲೆಯಾಡಿಸುವ
ಒಳಗೊಳಗೆ ಬಂಡಾಯದಿಂದ ಬೇಯುತ್ತಿರುವ
ಆಡಳಿತಕ್ಕೆ ಹೊಂದಿಕೊಳ್ಳದ ಗುಂಪು

ಇದೆಯೆಂಬುದು, ಗುಂಪು ತನ್ನ
ಚೇಲರಿಗೆ ಲಂಚ ತೆತ್ತು ಮಾಡಿಸಿದ್ದೆಂಬುದು ನನಗೆ ಸ್ಪಷ್ಟ.
ಹಣ ! ಹಣಕ್ಕಿಂತ ದೊಡ್ಡ ಶಾಪ ಮನುಷ್ಯನಿಗಿಲ್ಲ.
ನಗರಗಳ ಕಿತ್ತೆಸೆವ, ಮಾನವರ ಗಡಿಯಾಚೆಗಟ್ಟುವ,
ಎಲ್ಲ ಶುದ್ಧಾತ್ಮಗಳ ಚಂಡಾಲರನ್ನಾಗಿಸುವ,
ಎಲ್ಲ ನಿರ್ದೈವ, ಪಾಪಕೃತ್ಯಗಳ ಬಿತ್ತುವ ಹಣ !
ಆದರೆ ಆ ಎಲ್ಲಕ್ಕೆ ಈ ಗುಂಪು ಬೆಲೆ ತೆರಬೇಕಾಗುತ್ತದೆ.
(ಕಾವಲುಗಾರನಿಗೆ)
ನೀನು, ನಿನಗೆ ಹೇಳುತ್ತಿದ್ದೇನೆ,
ಸ್ಯೂಸ್ ದೇವರ ಮೇಲೆ ಆಣೆಯಿಟ್ಟು ನಿನಗೆ ಹೇಳುತ್ತಿದ್ದೇನೆ,
ಕೇಳು : ಈ ಶವಸಂಸ್ಕಾರಕ್ಕೆ ಕಾರಣನಾದವನನ್ನು
ಕರೆತಂದು ನೀನು ನನ್ನೆದುರು ನಿಲ್ಲಿಸಬೇಕು,
ಇಲ್ಲದಿದ್ದರೆ ನಿನ್ನ ಆತ್ಮವನ್ನು ನರಕ ಪಡೆಯಲಾರದು ;
ನಿನಗೆ ಕೇವಲ ಮರಣವಲ್ಲ,
ನಿನ್ನ ಅನಾಚಾರಕ್ಕಾಗಿ, ಲಾಭಕ್ಕೆ ಎಲ್ಲೆಲ್ಲೂ ಕೈಚಾಚುವ ಬದಲು
ದಕ್ಕುವೆಡೆ ಮಾತ್ರ ಕೇಳುವುದನ್ನು ನಿನಗೆ ಕಲಿಸುವುದಕ್ಕಾಗಿ,
ಸತ್ಯ ಹೇಳುವ ತನಕ ನಿನ್ನನ್ನು ಕೊಚ್ಚಿಹಾಕುತ್ತೇನೆ,
ಖೂಳತನದಿಂದ ಲಾಭಕ್ಕಿಂತ ಹೆಚ್ಚು ನಷ್ಟ
ಎಂಬುದರ ಪಾಠ ಕಲಿಸುತ್ತೇನೆ.

ಕಾವಲುಗಾರ : ಇನ್ನೊಂದು ಮಾತು ಹೇಳಲೆ, ಪ್ರಭು,
ಅಥವಾ ಹೊರಟುಹೋಗಲೋ ?

ಕ್ರೆಯಾನ್ : ಸಾಕು ; ನಿನ್ನ ಪ್ರತಿಯೊಂದು ಮಾತೂ ನನ್ನನ್ನು
ಚುಚ್ಚುತ್ತಿರುವುದು ತಿಳಿಯುತ್ತಿಲ್ಲವೆ ?

ಕಾವಲುಗಾರ : ಚುಚ್ಚುತ್ತಿರುವುದು
ಕಿವಿಯಲ್ಲೋ, ಮನಸ್ಸಿನಾಳದಲ್ಲೋ ?

ಕ್ರೆಯಾನ್ : ನನ್ನ ಮನಸ್ಸನ್ನು ವಿಶ್ಲೇಷಿಸಲು ನೀನಾರು ?

ಕಾವಲುಗಾರ : ನಾನು ನೋಯಿಸುತ್ತಿರುವುದು
ಕಿವಿಗಳನ್ನ, ಪ್ರಭು ; ಮನಸ್ಸು ನೋಯಿಸುತ್ತಿರುವವನು
ತಪ್ಪು ಮಾಡಿದಾತ.

ಕ್ರೆಯಾನ್ : ನೀನೊಬ್ಬ ಹುಟ್ಟು ಕಾಡುಹರಟೆ.

ಕಾವಲುಗಾರ : ಇರಬಹುದು ; ಆದರೆ ನಾನು ತಪ್ಪು ಮಾಡಿದವನಲ್ಲ.

ಕ್ರಿಯಾನ್ : ಅಲ್ಲ, ಆದರೆ ಹಣಕ್ಕೆ ಆತ್ಮವನ್ನು ಮಾರಿಕೊಂಡೆ.

ಕಾವಲುಗಾರ : ಅಯ್ಯೋ !
ಯೋಚಿಸಬಲ್ಲ ಮನುಷ್ಯನೊಬ್ಬ ಇಷ್ಟು ತಪ್ಪಾಗಿ ಯೋಚಿಸುವುದೆಂದರೆ !

ಕ್ರಿಯಾನ್ : ಮನಸ್ಸಿಗೆ ಬಂದಂತೆ ಅಂದುಕೋ,
ಆದರೆ ತಪ್ಪು ಮಾಡಿದವನನ್ನು ಹಿಡಿದುಕೊಡದಿದ್ದರೆ
ನೀನಿದನ್ನ ಕಲಿಯುತ್ತೀ :
ಭ್ರಷ್ಟ ಸಂಪಾದನೆ ಎಂದೂ ಒಳ್ಳೆಯದು ಮಾಡುವುದಿಲ್ಲ.
(ಅರಮನೆಯೊಳಕ್ಕೆ ಹೋಗುತ್ತಾನೆ)

ಕಾವಲುಗಾರ : ದೇವರ ದಯದಿಂದ
ಅವನಾಗಿಯೇ ಸಿಕ್ಕುವಂತಾಗಲಿ ! ಆದರೆ
ಸಿಕ್ಕಲಿ, ಬಿಡಲಿ, ನಾನು ಮಾತ್ರ ಮತ್ತೆ ಸಿಕ್ಕುವುದಿಲ್ಲ.
ಇದು ಖಂಡಿತ ; ಸಾವಿನ ದವಡೆಯಿಂದ
ಒಮ್ಮೆ ಹೊರಬಿದ್ದಿದ್ದೇನೆ—ನನ್ನೆಣಿಕೆ ಮೀರಿ ;
ನನ್ನ ಅದೃಷ್ಟಕ್ಕೆ ಋಣಿಯಾಗಿ ಬದುಕುತ್ತೇನೆ.
(ಹೋಗುತ್ತಾನೆ)

ಮೇಳ : ಜಗದ ಆಶ್ಚರ್ಯಗಳು ಅಸಂಖ್ಯ,
ಎಲ್ಲದಕ್ಕೂ ಶ್ರೇಷ್ಠ ಈ ಮಾನವ ;
ಸಾಗರವ ಹೊಗುವ, ಹೋರಾಡಿ ಪಳಗಿಸುವ,
ಬಿರುಗಾಳಿಯೆದೆಯಲ್ಲಿ ಹೊಡೆದಾಡುವ
ಅದರೆಲ್ಲ ತುಂಟಾಟ, ತಿಮಿರನ್ನು ಹತ್ತಿಕ್ಕಿ
ಎದ್ದು ನಿಲ್ಲುವ ಧೀರ ಈ ಮಾನವ.

ಮುಪ್ಪು ಸಾವರಿಯದಿಹ ಭೂಮಿಯನ್ನುತ್ತು
ಪಳಗಿಸಿದನವಳನ್ನು ಮಾಡಿ ಫಲವತ್ತು
ದೇವದೇವನ ತಾಯಿಂಗಿಕ್ಕುವನು ಬಿತ್ತ
ಫಸಲ ಬೆಳಸುವನೀತ ಬೆವರ ಸುರಿಸುತ್ತ.

ಜೀವಕೋಟಿಗೆ ಇವನೆ ಅಧಿಪತಿ
ದಣಿಯು ಮುಂಗಿಲಿನ ಹಕ್ಕಿಗೆ ;

ಚಾಚುವನು ತನ್ನುದ್ದ ತೋಳನು
ಭೂಮಿ ನೀರಿನ ಹಕ್ಕಿಗೆ !
ಎಲ್ಲ ಪಶುಪಕ್ಷಿಗಳ ಸೆಳೆ—
ದೀತ ಪಡೆವನು ತೆಕ್ಕೆಗೆ.

ಕಾಡುಮೇಡಿನ ಜನವ ಓಡಿಸಿ ಹಿಡಿವನು ;
ಗಿರಿಯರಾಜನ ಬಗ್ಗಿಸೀತನು ಹೊಡೆವನು ;
ಹುಚ್ಚು ಕುದುರೆಯ ಹಿಡಿದು ಹತ್ತುವನೀತನು,
ಅಲೆವ ನರಿಗೂ ನೆಲೆಯ ತೋರುವ ಧೀರನು.

ಭಾಷೆ ರೂಪಿಸಿ ಬುದ್ಧಿ ಬೆಳೆಸಿದ ಮಾನವ,
ಪೌರಗುಣಗಳ ಜೊತೆಗೆ ಕಟ್ಟಿದ ನಗರವ,
ಗೆದ್ದು ಮಳೆ ಚಳಿಯನ್ನು ಈತನು ನಿಂತನು,
ಜೀವಕೋಟಿಯನೆಲ್ಲ ಗೆದ್ದವ ; ದಿಟದ ಶ್ರೀಮಂತನು,

ಇವನ ಶಕ್ತಿಯ ಮೀರಿ ಏನಿದೆ ?
ತಲೆಯ ಬಲದಿಂದೆಲ್ಲವನ್ನೂ ಗೆಲ್ಲುತ
ಎಲ್ಲ ರೋಗಕ್ಕಿವನ ಮದ್ದಿದೆ
ಮರಣಮಾತ್ರಕ್ಕೀತ ನಡುಗುವ ನಿಲ್ಲುತ.

ಓ ಶಕ್ತಿಯುಕ್ತಿಯ ಮಾನವ ! ಒಳಿತು ಎಂತೋ
ಅಂತೆ ಕೆಡುಕಿಗೆ ಬಲವಿದೆ ;
ನಾಡ, ದೇವರ ಧರ್ಮ ರಕ್ಷಿಸೆ
ನಿನಗೆ ಸೌಖ್ಯದ ಫಲವಿದೆ.

ಆದರೀತನು ಸೊಕ್ಕಿ ಮೆರೆದರೆ
ನನ್ನ ಜೊತೆಯುವನೆನ್ನಲಾರೆ.
ನನ್ನ ಬಾಗಿಲ ತೆರೆಯಲಾರೆ,
ನಾಡದೇವರ ತೊರೆದರೆ.

(ದೂರದಲ್ಲಿ ಜನ ಬರುತ್ತಿರುವುದನ್ನು ಗಮನಿಸಿ)

ಓ ದೇವರೇ, ಇದು ವಿಚಿತ್ರ!
ಇರಲಾರದು, ಇದು ಇರಲಾರದು ;
ಅಂತಿಗೊನೆ ? ಅಯ್ಯೋ ಅವಳೇ,
ಇರಲಾರದಲ್ಲವೆ, ಇರಲಾರದು !

ಅಯ್ಯೊ ಹತಭಾಗ್ಯೆ ತರುಣಿ, ಈಡಿಪಸ್ ಕುವರಿ ;
ಕರೆದು ತರುತ್ತಿದ್ದಾರೆ ಆಕೆಯನ್ನ ;
ದೊರೆಯ ಆಜ್ಞೆಯ ಮುರಿದ ಹುಡುಗಿಯನ್ನ,
ದುರದೃಷ್ಟದ ಅವಿವೇಕಿ ಕನ್ಯೆಯನ್ನ.

(ಸೈನಿಕರಿಬ್ಬರ ಕಾವಲಿನಲ್ಲಿ ಅಂತಿಗೊನೆಯನ್ನು ಕಾವಲುಗಾರ ಕರೆತರುವನು)

ಕಾವಲುಗಾರ : ಈಕೆಯೇ ತಪ್ಪಿತಸ್ಥಳು—ಇವಳು ಹೆಣವನ್ನ ಹೂಳುತ್ತಿದ್ದ
ವೇಳೆಯಲ್ಲೆ ಹಿಡಿದು ಬಂಧಿಸಿದ್ದೇನೆ.
ಕ್ರೆಯಾನ್ ಎಲ್ಲಿ ?

ಮೇಳದವ : ಸಮಯಕ್ಕೆ ಸರಿಯಾಗಿ ಕ್ರೆಯಾನ್
ಅರಮನೆಯೊಳಗಿಂದ ಬರುತ್ತಿದ್ದಾನೆ.

ಕ್ರೆಯಾನ್ : ಏನಿದು ? ನಾನು ನೋಡುತ್ತಿರುವುದೇನನ್ನು ?

ಕಾವಲುಗಾರ : ಮಹಾಪ್ರಭು, ಪ್ರತಿಜ್ಞೆ ಮಾಡುವುದು ಅಪಾಯಕರ,
ಮತ್ತೆ ಯೋಚಿಸಿದೊಡನೆ ಎಲ್ಲ ಸುಳ್ಳಾಗಿ ಕಾಣುತ್ತದೆ.
ಪ್ರಾಣ ತೆಗೆಯುವುದಾಗಿ ಬೆದರಿಸಿದ ನಿನ್ನನ್ನು
ನೋಡುವುದಿಲ್ಲವೆಂದು ನಾನು ಪ್ರತಿಜ್ಞೆ ಮಾಡಿದ್ದೆ ; ನಿನ್ನ ಬೈಗುಳಕ್ಕೆ
ನಾನು ಗಡಗಡ ನಡುಗಿದ್ದೆ. ಆದರೆ ಅನಿರೀಕ್ಷಿತ
ಸಂತೋಷಕ್ಕೆ ಸಮನಾದ್ದು ಯಾವುದಿದೆ ?
ನನ್ನ ಪ್ರತಿಜ್ಞೆಯನ್ನು ಒತ್ತಟ್ಟಿಗಿಟ್ಟು ಬಂದಿದ್ದೇನೆ.
ಈ ಮಹಿಳೆಯನ್ನು ಕರೆತಂದಿದ್ದೇನೆ ; ಸಮಾಧಿಯನ್ನು
ಸರಿಪಡಿಸುತ್ತಿದ್ದ ಈಕೆ ಸಿಕ್ಕಿಬಿದ್ದಿದ್ದಾಳೆ. ಕರೆತರುವುದಕ್ಕೆ
ನಾವು ಪಗಡೆ ದಾಳ ಹಾಕಲಿಲ್ಲ ; ನಾನೇ ಇವಳನ್ನ ಹಿಡಿದದ್ದು,
ಬೇರೆ ಯಾರೂ ಅಲ್ಲ. ಇವಳನ್ನು ಒಪ್ಪಿಸಿಕೋ,
ವಿಚಾರಿಸು, ಶಿಕ್ಷಿಸು. ನಾನೀಗ ಎಲ್ಲ ಮುಜುಗರದಿಂದ
ಕೈತೊಳೆದುಕೊಂಡಿದ್ದೇನೆ ಅಂತ ತಿಳಿಯುತ್ತೇನೆ,

ಕ್ರೆಯಾನ್ : ಈಕೆ ಎಲ್ಲಿ ಸಿಕ್ಕಳು ? ಎಲ್ಲಿಂದ ಕರೆತಂದೆ ?
ಕಾವಲುಗಾರ : ಈಕೆ ಖುದ್ದು ತಾನೇ ಹೆಣ ಹೂಳುತ್ತಿದ್ದಳು—ಇದು ಸತ್ಯ.
ಕ್ರೆಯಾನ್ : ನೀನು
ಹೇಳುತ್ತಿರುವುದು ಏನೆಂಬುದು ನಿನಗೆ ಗೊತ್ತೆ ?
ನಿನ್ನ ಬುದ್ಧಿ ನೆಟ್ಟಗಿದೆ ತಾನೆ ?
ಕಾವಲುಗಾರ : ನೀನು ಪ್ರತಿಷೇಧಿಸಿದ್ದ
ಹೆಣ ಹೂಳುತ್ತಿದ್ದುದನ್ನು ಕಣ್ಣಾರೆ ಕಂಡಿದ್ದೇನೆ ;
ನನ್ನ ಮಾತು ಸ್ಪಷ್ಟವಿಲ್ಲವೆ ?
ಕ್ರೆಯಾನ್ : ಹೇಗೆ ; ಹೆಣ ಹೂಳುವ ಕೃತ್ಯದಲ್ಲಿಯೇ ಹೇಗೆ ಬಂಧಿಸಿದೆ ?
ಕಾವಲುಗಾರ : ನಡೆದದ್ದು ಹೀಗೆ :
ನಿನ್ನ ಬೆದರಿಕೆ ನನ್ನ ಕಿವಿಯಲ್ಲಿ ಇನ್ನೂ ಮೊಳಗುತ್ತಿತ್ತು,
ನಾನು ಆ ಜಾಗಕ್ಕೆ ಹಿಂದಿರುಗಿದೆ. ನಾವು
ದೇಹದ ಮೇಲಿನ ಮಣ್ಣನ್ನೆಲ್ಲ ತೆಗೆದು ಬತ್ತಲೆ ಹೆಣ ಬಿಟ್ಟೆವು,
ವಾಸನೆ ತಡೆಯಲಾರದೆ ಆದಷ್ಟೂ ದೂರ ಹೋಗಿ
ಗಾಳಿಯ ದಿಕ್ಕು ಬದಲಿಸಿ ಬೆಟ್ಟದ ಮೇಲೆ ಕಾವಲು ಕೂತೆವು.
ತೂಕಡಿಸಿದಾಗ ಒಬ್ಬರನ್ನೊಬ್ಬರು ಎಚ್ಚರಿಸುತ್ತ
ಸಾಧ್ಯವಾದಷ್ಟೂ ಎಚ್ಚರದಿಂದ ಕಾಯುತ್ತಿದ್ದೆವು. ಹೀಗೆ
ಹಲವು ಘಂಟೆ ಕಳೆಯಿತು ; ಹೊತ್ತು ನೆತ್ತಿಗೆ ಬಂದು
ಪ್ರಜ್ವಲಿಸಿ ಸೆಖೆ ವಿಪರೀತವಾಗಿತ್ತು : ಆಗ ಇದ್ದಕ್ಕಿದ್ದಂತೆ
ಸ್ವರ್ಗದ ಬೇನೆ ಭೂಮಿಗಿಳಿದಂತೆ ಸುಂಟರಗಾಳಿಯೆದ್ದು
ದೂಳು ಮುಗಿಲನ್ನು ತುಂಬಿ ಮರದೆಲೆಗಳ ಕಿತ್ತು ತೂರಿ,
ನಮ್ಮ ಕಣ್ಣು ಕಾಣದಾದವು. ಅದು ಕೊನೆಗೆ ನಿಂತಾಗ
ಮರಿಯ ತೊರೆದ ಕುಪಿತ ಹಕ್ಕಿಯ ಹಾಗೆ ಚೀರುತ್ತಿದ್ದ
ಹುಡುಗಿಯೊಬ್ಬಳು ಕಂಡಳು. ಹೆಣದ ಬತ್ತಲೆ ಕಂಡು
ಚೀರಿ, ಶಪಿಸಿ ಅಳುತ್ತಿದ್ದಳು ಆಕೆ. ಆಮೇಲೆ ಮಣ್ಣನ್ನೆತ್ತಿ
ತನ್ನ ಇನ್ನೊಂದು ಕೈಯಲ್ಲಿದ್ದ ಗಿಂಡಿಯಿಂದ ನೀರು ಚಿಮುಕಿಸಿ
ಸತ್ತವಗೆ ವಿಧಿಯುಕ್ತ ಸಂಸ್ಕಾರ ನಡೆಸಿದಳು.
ಕಂಡೊಡನೆ ನಾವು ಬೆಟ್ಟದಿಂದ ಓಡಿ ಬಂದು ಹಿಡಿದೆವು,
ಅವಳು ಹೆದರಲಿಲ್ಲ. ಹಿಂದೆ, ಈಗ—ಎರಡುಸಲದ ತಪ್ಪು
ಹೊರಿಸಿದೆವು ; ಇವಳು ಒಪ್ಪಿಕೊಂಡಳು ಎನ್ನಲು ಸಂತೋಷ ನನಗೆ.
—ಒಂದು ಬಗೆಯಲ್ಲಿ ದುಃಖವಾದರೂ ಸಹ.

ನಮ್ಮ ಜೀವ ನಾವು ಉಳಿಸಿಕೊಳ್ಳುವುದು ಒಳ್ಳೆಯದು,
ಇನ್ನೊಬ್ಬರು ಸಿಕ್ಕಿಹಾಕಿಕೊಂಡದಕ್ಕೆ ಕೊಂಚ ಬೇಸರವಾದರೂ.
ಏನೇ ಆದರೂ, ನನ್ನದಕ್ಕಿಂತ ಇನ್ನೊಬ್ಬರ ಜೀವ ಮುಖ್ಯ
ಎಂದು ನನಗೆಂದೂ ಅನ್ನಿಸಿಲ್ಲ--ಇದು ನಾನು ಕಂಠೋಕ್ತ
ಹೇಳುವ ಸತ್ಯ.

ಕ್ರೆಯಾನ್ : (ಅಂತಿಗೊನೆಗೆ) ಸರಿ, ಹೇಳು—ನೀನು, ತಲೆತಗ್ಗಿಸಿ ನಿಂತಿರುವ ನೀನು :
ಇದಕ್ಕೇನು ಹೇಳುತ್ತಿ ? ಇದನ್ನು ಮಾಡಿದ್ದಾಗಿ
ಒಪ್ಪಿಕೊಳ್ಳುತ್ತೀಯೋ, ನಿರಾಕರಿಸುತ್ತೀಯೋ ?

ಅಂತಿಗೊನೆ : ಒಪ್ಪಿಕೊಳ್ಳುತ್ತೇನೆ—ಏನನ್ನೂ ನಿರಾಕರಿಸುವುದಿಲ್ಲ.

ಕ್ರೆಯಾನ್ : (ಕಾವಲುಗಾರನಿಗೆ) ನೀನು ಹೋಗು—ಎಲ್ಲದರಿಂದ
ಬಿಡುಗಡೆ ಹೊಂದಿದ್ದೀ.

(ಕಾವಲುಗಾರ ಹೋಗುವನು)

(ಅಂತಿಗೊನೆಗೆ) ಹೇಳು, ಅದಷ್ಟೂ ಸಂಗ್ರಹವಾಗಿ ;
ಈ ಕೃತ್ಯವನ್ನು ನಿಷೇಧಿಸಿ ಹೊರಡಿಸಿದ ಆಜ್ಞೆ ಗೊತ್ತೆ ?

ಅಂತಿಗೊನೆ : ಗೊತ್ತು ; ಸಾರ್ವಜನಿಕವಾಗಿ ಘೋಷಿಸಿದ ಆಜ್ಞೆಯಲ್ಲವೆ ?

ಕ್ರೆಯಾನ್ ಆದರೂ ನೀನು ಅದನ್ನು ಉಲ್ಲಂಘಿಸುವ ಧೈರ್ಯ ಮಾಡಿದೆ ?

ಅಂತಿಗೊನೆ : ಹೌದು.
ಅದೇನು ದೇವರಿಂದ ಹೊರಟ ಆಜ್ಞೆಯಲ್ಲ.
ಕೆಳಲೋಕದ ದೇವತೆಗಳಿಗೆ ಅಂಥ ಶಾಸನದ ಪರಿವೆಯಿಲ್ಲ.
ಮನುಷ್ಯ ಮಾತ್ರನಾದ ನಿನ್ನ ಶಾಸನ ದೇವರ ಶಾಸನವನ್ನು
ಕಿತ್ತು ಹಾಕಬಲ್ಲದೆಂದು ನನಗನ್ನಿಸುವುದಿಲ್ಲ.
ಅದರ ಮೂಲ ಯಾರಿಗೂ ಗೊತ್ತಿಲ್ಲದಿದ್ದರೂ
ದೇವರ ಆ ಶಾಸನ ನಿನ್ನೆ ಮೊನ್ನೆಯದಲ್ಲ, ಚಿರಂತನವಾದದ್ದು.
ದೇವರ ಶಾಸನ ಧಿಕ್ಕರಿಸುವ ಮನುಷ್ಯನ ಪರ
ನಾನಿರಲು ಸಾಧ್ಯವಿಲ್ಲ ; ನಿನ್ನ ಆಜ್ಞೆ ಇರಲಿ ಇಲ್ಲದಿರಲಿ,
ನಾನೊಂದು ದಿನ ಸಾಯಲೇಬೇಕು—ಬೇಗ ಸತ್ತಷ್ಟೂ ಒಳ್ಳೆಯದು.
ನಿತ್ಯಯಾತನೆಯ ನನ್ನಂಥ ಯಾರು ತಾನೆ ಸಾಯಲು
ಸಂತೋಷಿಸುವುದಿಲ್ಲ ? ಈ ಶಿಕ್ಷೆ ನನ್ನನ್ನು ನೋಯಿಸದು ;
ನನ್ನ ಒಡಹುಟ್ಟಿದವ ಸಂಸ್ಕಾರ ಹೊಂದದಿದ್ದರೆ ಮಾತ್ರ
ಅಸಹ್ಯವೆನ್ನಿಸುತ್ತಿತ್ತು ನನಗೆ ; ಶಿಕ್ಷೆ ಸಹಿಸಬಲ್ಲೆ.

ಇದು ಮೂರ್ಖತನವಾಗಿ ಕಾಣುತ್ತದೆಯೆ ನಿನಗೆ—ಅಥವಾ
ನಿನ್ನ ಮೂರ್ಖ ಆಜ್ಞೆಯಿಂದ ಈ ಮೂರ್ಖತನ ಹುಟ್ಟಿರಬಹುದೆ ?

ಮೇಳನಾಯಕ : ತಂದೆಯ ಹಾಗೆಯೇ ಈಕೆ ಮೊಂಡು ಹುಡುಗಿ ;
ಸೋಲುವುದ ಕಲಿತವಳಲ್ಲ, ಖಂಡಿತ.

ಕ್ರೆಯಾನ್ : ಹಾ. ನೋಡುತ್ತಿರಿ.
ಮಾಡಿದ ಹದ ಹೆಚ್ಚಾದಷ್ಟೂ ತುಂಡರಿಸುವ ಕಬ್ಬಿಣದ ಹಾಗೆ
ಮೊಂಡು ಚೇತನ ಬೇಗ ಸಿಡಿಯುತ್ತದೆ. ತುಂಟು ಕುದುರೆಯ
ಪಳಗಿಸಲು ಚೂರು ಕಡಿವಾಣ ಸಾಕು.
ಸಣ್ಣವರ ಸೊಕ್ಕು ಅವರಿಗೇ ಹಿತವಲ್ಲ.
ಈ ಹುಡುಗಿಯ ಧಿಮಾಕು ಶಾಸನ ಉಲ್ಲಂಘಿಸಿದಾಗಲೇ
ತಿಳಿಯಿತು. ಈಗ ಗಾಯಕ್ಕೆ ಉಪ್ಪು ಹಾಕಿದ ಹಾಗೆ
ಬಡಾಯಿ ಬೇರೆ ಕೊಚ್ಚುತ್ತಿದ್ದಾಳೆ. ಆದರೆ
ನಾನು ಬದುಕಿರುವ ತನಕ ಈಕೆ
ಆಜ್ಞೆ ಉಲ್ಲಂಘಿಸಿ ಉಳಿಯುವುದು ಅಸಾಧ್ಯ.
ನನ್ನ ಸೋದರಿಯ ಮಗಳಲ್ಲದಿದ್ದರೆ ಅದಕ್ಕಿಂತ ಹತ್ತಿರದವರಿರಲಿ,
ತಪ್ಪಿಗೆ ತಕ್ಕ ಶಿಕ್ಷೆ ಆಗಲೇಬೇಕು.
ಈಕೆ ಮತ್ತು ಇವಳೊಂದಿಗೆ ಮಸಲತ್ತು ನಡೆಸಿರಬಹುದಾದ
ಇವಳ ತಂಗಿ—ಇವರಿಗೆ ಬಿಡುಗಡೆ ಇಲ್ಲ.
ಆಕೆಯನ್ನೂ ಕರೆತನ್ನಿ ! ಈಗತಾನೇ ಒಳಗಿದ್ದಳು,
ನಾನು ನೋಡಿದಾಗ ಮನಸ್ಸಿನ ತೊಳಲಾಟದಲ್ಲಿದ್ದಳು ;
ಕರಾಳ ಕೃತ್ಯಕ್ಕೆ ಮುನ್ನವೇ ಕೆಲವೊಮ್ಮೆ
ಮುಖ ಎಲ್ಲವನ್ನೂ ಬಿಚ್ಚಿಡುತ್ತದೆ.
ಮೇಲಾಗಿ, ಸಿಕ್ಕಿಕೊಂಡ ಅಪರಾಧಿ
ತನ್ನ ಅಪರಾಧ ಹೊಗಳಿಕೊಂಡರೆ
ಅಂಥ ವ್ಯಕ್ತಿಯ ಅಂತ್ಯ ಸನ್ನಿಹಿತ.

ಅಂತಿಗೊನೆ : ನನ್ನನ್ನು ಬಂಧಿಸಿದ್ದೀ,
ಕೊಲ್ಲುವುದಕ್ಕಿಂತ ಹೆಚ್ಚೇನನ್ನು ನೀನು ಮಾಡಬಲ್ಲೆ ?

ಕ್ರೆಯಾನ್ : ಹೆಚ್ಚೇನಲ್ಲ ; ಅದನ್ನು ಮಾಡಿದರೆ ಎಲ್ಲ ಮಾಡಿದಂತೆ.

ಅಂತಿಗೊನೆ : ಅದಕ್ಕೇಕೆ ತಡ ?
ನಾನು ಹೇಳುವುದು ನಿನಗೆ ಬೇಕಿಲ್ಲ, ಹಾಗೆಯೇ
ನಿನ್ನ ಮಾತು ನನಗೆ ಬೇಡ. ನನ್ನ ಅಣ್ಣನಿಗೆ ನಾನು

ಸಂಸ್ಕಾರ ಮಾಡಿದ್ದೇನೆ. ಅದಕ್ಕೆ ಹೆಚ್ಚಿನ ಘನತೆ ನನಗೇಕೆ ಬೇಕು ?
ಮನಸ್ಸಿಗೆ ಬಂದಂತೆ ಆಡಿದ್ದ ಮಾಡುವುದು
ಚಕ್ರವರ್ತಿಯ ಹಕ್ಕು ; ಆದರೆ ಭಯದಿಂದ
ನಾಲಗೆ ಬಿಗಿ ಹಿಡಿದಿರುವ ಇವರೆಲ್ಲ ನನ್ನ ಕೃತ್ಯ ಮೆಚ್ಚುತ್ತಾರೆ.

ಕ್ರಿಯಾನ್ : ಸುಳ್ಳು ; ನಿನ್ನಂತೆ ಥೀಬ್ಸ್ ಪ್ರಜೆಗಳಾರೂ ಯೋಚಿಸುವುದಿಲ್ಲ.

ಅಂತಿಗೊನೆ : ಇಲ್ಲ ಮಹಾರಾಜ, ಯೋಚಿಸುತ್ತಾರೆ ;
ಆದರೆ ನಿನಗೆ ಹೇಳುವ ಧೈರ್ಯವಿಲ್ಲ.

ಕ್ರಿಯಾನ್ : ಆದರೆ ಅವರಿಂದ ಭಿನ್ನವಾಗಲು
ನಿನಗೆ ನಾಚಿಕೆಯಾಗುವುದಿಲ್ಲವೆ ?

ಅಂತಿಗೊನೆ : ಒಡಹುಟ್ಟಿದವರನ್ನು ಗೌರವಿಸುವುದು
ನಾಚಿಕೆಯ ವಿಷಯವಲ್ಲ.

ಕ್ರಿಯಾನ್ : ಅವನ ಶತ್ರುವಾಗಿದ್ದವ, ಆತನೊಂದಿಗೆ ಸತ್ತ ಇನ್ನೊಬ್ಬ
ನಿನ್ನ ಒಡಹುಟ್ಟಿದವ ಅಲ್ಲವೆ ?

ಅಂತಿಗೊನೆ : ಹೌದು, ಇಬ್ಬರೂ ಸೋದರರು ;
ಇಬ್ಬರೂ ಅದೇ ಹೆತ್ತವರ ಮಕ್ಕಳು.

ಕ್ರಿಯಾನ್ : ಆದರೆ ನೀನು ಒಬ್ಬನನ್ನು ಗೌರವಿಸುವುದರ ಮೂಲಕ
ಇನ್ನೊಬ್ಬನಿಗೆ ಅವಮಾನ ಮಾಡಿದ್ದೀ.

ಅಂತಿಗೊನೆ : ಸತ್ತಿರುವ ಆತ ಈ ತಪ್ಪು ಹೊರಿಸಲಾರ.

ಕ್ರಿಯಾನ್ : ಹೊರಿಸುತ್ತಾನೆ ; ಈ ದೇಶದ್ರೋಹಿಗಿಂತ ಆತ
ಹೆಚ್ಚಲ್ಲವೆಂದು ಪರಿಗಣಿಸಿದರೆ.

ಅಂತಿಗೊನೆ : ಅವನೊಂದಿಗೆ ಸತ್ತವ ಗುಲಾಮನಲ್ಲ, ಅವನ ಸೋದರ.

ಕ್ರಿಯಾನ್ : ಆದರೆ ಆತ ದೇಶವನ್ನು ರಕ್ಷಿಸುತ್ತ ಸತ್ತ,
ಈತ ದೇಶವನ್ನು ನಾಶಪಡಿಸಲೆತ್ನಿಸಿ ಸತ್ತ.

ಅಂತಿಗೊನೆ : ಆದರೂ ಸತ್ತವರ ಬಗ್ಗೆ ನಮ್ಮ ಕರ್ತವ್ಯವಿದೆ.

ಕ್ರಿಯಾನ್ : ಕರ್ತವ್ಯ ಇರುವುದು
ಉತ್ತಮ, ಅಧಮ ಎಂಬ ವ್ಯತ್ಯಾಸ ಮರೆಯುವುದರಲ್ಲಿ ಅಲ್ಲ.

ಅಂತಿಗೊನೆ : ಯಾರಿಗೆ ಗೊತ್ತು,
ಸತ್ತವರ ರಾಜ್ಯದಲ್ಲಿ ಅದೇ ನೀತಿ ಇದ್ದೀತು.

ಕ್ರಿಯಾನ್ : ಸತ್ತಾಕ್ಷಣಕ್ಕೆ ಶತ್ರು ಮಿತ್ರನಾಗಲಾರ.

ಅಂತಿಗೊನೆ : ಪ್ರೇಮವನ್ನು ಹಂಚಿ ಬದುಕುವವಳು ನಾನು
ದ್ವೇಷವನ್ನಲ್ಲ.

ಕ್ರಿಯಾನ್ : ಹೋಗು ಹಾಗಾದರೆ ಸತ್ತವರೊಂದಿಗೆ ಸಾವನ್ನು ಹಂಚಿಕೋ,
ನಾನಿರುವವರೆಗೆ ಇಲ್ಲಿ ಹೆಂಗಸರ ರಾಜ್ಯಭಾರಕ್ಕೆ ಅವಕಾಶವಿಲ್ಲ.

(ಅರಮನೆಯೊಳಗಿಂದ ಇಸ್ಮೇನೆ ಪ್ರವೇಶ)

ಮೇಳನಾಯಕ : ಅಗೋ, ಇಸ್ಮೇನೆ! ಒಡಹುಟ್ಟಿದಾಕೆಯ ಶೋಕದಲ್ಲಿ ;
ಹಣೆ ಕಪ್ಪಿಟ್ಟಿದೆ, ಮುಖ ಕೆಂಪಾಗಿದೆ ಅವಮಾನದಿಂದ ;
ಕಣ್ಣಿಂದ ಕೆನ್ನೆಗೆ ಸುರಿಯುತ್ತಿದೆ ಕಂಬನಿಯ ಮಳೆ.

ಕ್ರಿಯಾನ್ : ಬಾ, ನನ್ನರಮನೆಯಲ್ಲಿ ಕಳ್ಳತನದಲ್ಲಿ ತೆವಳಿ
ನನ್ನ ರಕ್ತ ಹೀರುವ ಸರ್ಪ! ನನ್ನ ಸಿಂಹಾಸನದ ವಿರುದ್ಧ
ಪಿತೂರಿ ನಡೆಸುವ ದ್ರೋಹಿ! ಈ ಸಮಾಧಿ ಮಾಡುವ ಕೆಲಸದಲ್ಲಿ
ನಿನ್ನ ಕೈವಾಡವಿರುವುದನ್ನು ಒಪ್ಪುವೆಯೋ, ಇಲ್ಲವೋ ?

ಇಸ್ಮೇನೆ : ಇದೆ, ಒಪ್ಪುತ್ತೇನೆ—ಹಾಗೆನ್ನಲು ನನಗೆ ಅನುಮತಿ ಇತ್ತರೆ ;
ಅವಳಷ್ಟೇ ತಪ್ಪಿತಸ್ಥೆ ನಾನು.

ಅಂತಿಗೊನೆ : ಇಲ್ಲ, ಅದು ನ್ಯಾಯವಲ್ಲ,
ನೀನಿದಕ್ಕೆ ಒಪ್ಪಲಿಲ್ಲ, ನಿನ್ನ ಸಹಾಯವನ್ನು ನಾನು ತಿರಸ್ಕರಿಸಿದೆ.

ಇಸ್ಮೇನೆ : ಆದರೆ ಈ ದುರಂತದ ವೇಳೆ
ನಿನ್ನೊಂದಿಗಿರಲು ನನಗೆ ನಾಚಿಕೆಯಿಲ್ಲ.

ಅಂತಿಗೊನೆ : ಈ ಕೃತ್ಯಕ್ಕೆ
ಸಾವು ಮತ್ತು ಸತ್ತವರ ಸಾಕ್ಷಿ ಇದೆ ;
ಪ್ರೇಮವೆನ್ನುವುದು ಬರಿಯ ಮಾತಾದವರ ಸ್ನೇಹ ಬೇಕಿಲ್ಲ.

ಇಸ್ಮೇನೆ : ಸೋದರಿ, ನನ್ನನ್ನು ತಿರಸ್ಕರಿಸಬೇಡ ;
ಸತ್ತವನ ಸಂಸ್ಕಾರಕ್ಕೆ ನನ್ನ ರಕ್ತವನ್ನು
ಅರ್ಪಿಸಲು ಅವಕಾಶ ಕೊಡು.

ಅಂತಿಗೊನೆ : ನೀನು ನನ್ನೊಂದಿಗೆ ಸಾಯಕೂಡದು.
ಮುಟ್ಟಲು ಹಿಂಜರಿದೆ ನೀನು ; ಈಗ ಒಂದು ಮರಣ ಸಾಕು.

ಇಸ್ಮೇನೆ : ನೀನು ಸತ್ತರೆ
ನನ್ನ ಬದುಕನ್ನ ಹೇಗೆ ಸಹಿಸಲಿ ?

ಅಂತಿಗೊನೆ : ಕ್ರಿಯಾನ್‌ನನ್ನ ಕೇಳು ; ಅವನು ನಿನ್ನ ಸಂಬಂಧಿ ತಾನೆ ?

ಇಸ್ಮೇನೆ : ಹೀಗೆ ಹೀಯಾಳಿಸುವುದು
ನಿನಗೆ ಹಿತಕರವಲ್ಲ.

ಅಂತಿಗೊನೆ : ಖಂಡಿತ ಅಲ್ಲ ; ನನ್ನ ವ್ಯಂಗ್ಯದಿಂದ ನನ್ನೆದೆ ಭಾರವಾಗಿದೆ,

ಇಸ್ಮೇನೆ : ಆದರೆ ಹೇಳು,

ನಾನು ನಿನಗೆ ಯಾವ ರೀತಿಯು ನೆರವು ನೀಡಲಿ ?

ಅಂತಿಗೊನೆ : ನಿನಗೆ ನೀನೇ ನೆರವಾಗು—
ಅದಕ್ಕೆ ನನ್ನ ಅಭ್ಯಂತರವಿಲ್ಲ.

ಇಸ್ಮೇನೆ : ನಿರ್ಭಾಗ್ಯ ಸೋದರಿ,
ನಿನ್ನೊಂದಿಗೆ ಸಾಯುವುದಕ್ಕೂ ಅನುಮತಿ ಕೊಡಲಾರೆಯ ?

ಅಂತಿಗೊನೆ : ನೀನು ಆರಿಸಿಕೊಂಡದ್ದು ಬದುಕು, ನನ್ನದು ಸಾವು.

ಇಸ್ಮೇನೆ : ಆದರೆ ಈ ಬಗ್ಗೆ ನಿನಗೆ ನಾನು ಎಚ್ಚರಿಕೆ ನೀಡಿದ್ದೆ.

ಅಂತಿಗೊನೆ : ಕೆಲವರಿಗೆ ನಿನ್ನ ದಾರಿ ಉತ್ತಮ, ಕೆಲವರಿಗೆ ನನ್ನದು.

ಇಸ್ಮೇನೆ : ಆದರೆ ಇಬ್ಬರೂ ತಪ್ಪಿತಸ್ಥರು ; ಇಬ್ಬರಿಗೂ ಶಿಕ್ಷೆಯಿದೆ.

ಅಂತಿಗೊನೆ : ಇಲ್ಲ, ನೀ ಬದುಕಬೇಕು—ನನ್ನ ಹೃದಯ ಎಂದೂ ಮಡಿದಿತ್ತು,
ನನಗೆ ಸಾವಿನ ಸಾನ್ನಿಧ್ಯ ತಕ್ಕದು,

ಕ್ರೆಯಾನ್ : ಇಬ್ಬರಿಗೂ ಹುಚ್ಚು ಹಿಡಿದಿರಬೇಕು ;
ಒಬ್ಬಳು ಇತ್ತೀಚೆಗೆ ಹುಚ್ಚಿಯಾದಳು, ಇನ್ನೊಬ್ಬಳು ಹುಟ್ಟಿದಾರಭ್ಯ.

ಇಸ್ಮೇನೆ : ಆದರೆ ದುರದೃಷ್ಟದ ಹೊಡೆತಕ್ಕೆ
ಅತ್ಯಂತ ದೃಢ ಮನಸ್ಸೂ ಛಿದ್ರವಾಗುವುದು ಸಾಧ್ಯ—ಅಲ್ಲವೆ ?

ಕ್ರೆಯಾನ್ : ಇವಳ ಜೊತೆ ಸೇರಿದ ಮೇಲೆ ನಿನ್ನದ್ದು ಹಾಗಾಯಿತು.

ಇಸ್ಮೇನೆ : ಒಡಹುಟ್ಟಿದವಳ ಜೊತೆ ಸೇರದೆ
ಬದುಕುವುದು ಹೇಗೆ ಸಾಧ್ಯ ?

ಕ್ರೆಯಾನ್ : ನಿನಗೆ ಒಡಹುಟ್ಟಿದವಳಿಲ್ಲ. ಆಕೆ ಆಗಲೇ
ಸತ್ತಿರುವುದಾಗಿ ತಿಳಿ.

ಇಸ್ಮೇನೆ : ಅವಳನ್ನು ನೀನು ಕೊಲ್ಲಲಾರೆ ;
ಮಗನ ವಧುವನ್ನು ಕೊಲ್ಲುವೆಯ ?

ಕ್ರೆಯಾನ್ : ಓ, ಅವನಿಗೆ ಉಳಲು ಬೇರೆ ಹೊಲಗಳಿವೆ.

ಇಸ್ಮೇನೆ : ಅವರಿಬ್ಬರು ಒಬ್ಬರಿಗೊಬ್ಬರು ಅಸಂಖ್ಯ ಮಾತು ಕೊಟ್ಟಿದ್ದಾರೆ.

ಕ್ರೆಯಾನ್ : ನನ್ನ ಮಗ
ಇಂಥ ಹೀನ ಕ್ರಿಮಿಯನ್ನು ವರಿಸುವುದು ಸಾಧ್ಯವಿಲ್ಲ.

ಅಂತಿಗೊನೆ : ಓ ಹಯ್‌ಮೋನ್,
ನಿನ್ನ ತಂದೆಯೇ ನಿನಗೆ ದ್ರೋಹ ಬಗೆವುದೆಂದರೆ !

ಕ್ರೆಯಾನ್ : ನೀನು ಮತ್ತು ನಿನ್ನ ಪ್ರಿಯಕರ—
ಇಬ್ಬರನ್ನೂ ನಾನು ದ್ವೇಷಿಸುತ್ತೇನೆ.

ಮೇಳನಾಯಕ : ಪ್ರಭೂ,

ನಿನ್ನ ಮಗನ ತೋಳಿಂದ ಈಕೆಯನ್ನೆಳೆದು ಹಾಕುತ್ತೀಯ ?

ಕ್ರಿಯಾನ್ : ನಾನಲ್ಲ, ಸಾವು ಅವಳನ್ನ ಎಳೆದುಹಾಕುತ್ತದೆ.

ಮೇಳನಾಯಕ : ಅದು ಸತ್ಯ ;
ಈಕೆಯ ಮರಣ ಖಂಡಿತ ಅನ್ನಿಸುತ್ತದೆ.

ಕ್ರಿಯಾನ್ : ಖಂಡಿತ. ಇನ್ನು
ತಡಮಾಡಕೂಡದು. ಕರೆದೊಯ್ಯು ಒಳಗೆ ಕೊಡಿ ;
ಹೆಂಗಸರಾದ ಇವರಿಗೆ ಸ್ವೇಚ್ಛೆಯಲೆತ ತಕ್ಕುದಲ್ಲ—
ಯಮಲೋಕದ ಗಾಳಿ ಕ್ರಮೇಣ ತಗುಲತೊಡಗಿದಾತೆ
ಓಡಲು ದಾರಿ ಹುಡುಕದ ಮನುಷ್ಯ ಇನ್ನೂ ಹುಟ್ಟಿಲ್ಲ.
(ಹೆಂಗಸರನ್ನು ಕರೆದೊಯ್ಯುವರು)

ಮೇಳ : ಪಾಪದ ಕಹಿಯ ಅರಿಯದವ ಅದೃಷ್ಟವಂತ,
ಅರಿತವನು ವಿಧಿಯ ಕೋಪಕ್ಕೆ ತುತ್ತು ;
ನಡುರಾತ್ರಿ ಕಡಲಾಳದಲಿ ಬಿರುಗಾಳಿಯಲೆ ಎದ್ದು
ಥ್ರೇಸಿಯದ ಸುಳಿಗಾಳಿಯದನ ಹೊತ್ತು ;
ಒಬ್ಬ ಮಾಡಿದ ಕೆಲಸ ವಂಶದೆಲ್ಲರನು ಒಳಗೊಂಡು
ಸರ್ವರೂ ಸಾಯುವರು ಬೆಲೆಯ ತೆತ್ತು.

ಸಾವಿನಲಿ, ಬದುಕಿನಲಿ ಲ್ಯಾಬ್ಡಕಸ್ ವಂಶಕ್ಕೆ
ತಾಕಿಬಿಟ್ಟಿದೆ ದೊಡ್ಡ ವ್ಯಾಧಿ,
ತಲೆಮಾರು ತಲೆಮಾರು ಹಾರುತ್ತ ವಿಧಿಯ ಹಗೆ
ಎಲ್ಲರೂ ಹಿಡಿದದ್ದು ಒಂದೆ ಹಾದಿ.

ಈಗ ಸತ್ತವನ ಹುಡಿಮಣ್ಣಿಗಾಗಿ ಅಂತಃಕಲಹ
ಸಾಗುತ್ತಿದೆ ಮಾತಿನಪಾರ ಸೊಕ್ಕು,
ವಂಶವೃಕ್ಷದ ಕೊನೆಯ ಬೇರು ಸೆಣಸಾಡಿಹುದು
ತನ್ನಹಂಕಾರದಲಿ ತಾನೆ ಸಿಕ್ಕು.

ಯಾವ ವ್ಯಕ್ತಿಯ ಇಚ್ಛೆ ಸಮ, ಓ,
ದೇವ ನಿನ್ನಯ ನಿಯಮಕೆ ;

ನಿದ್ರೆ, ಸಾವಿನ, ಕಾಲ, ಮುಪ್ಪಿನ
ಗೆರೆಯ ದಾಟಿಹ ನಿಯಮಕೆ ;
ನಿನ್ನೆ, ನಾಳೆಯು, ಇಂದು, ಈ ಕ್ಷಣ
ಸರ್ವವ್ಯಾಪಿಯೊ ದೇವನೆ,
ಬದುಕಿ ಸಾಯುವ, ನರಳಿ ನೋಯುವ,
ನಾವು ಬದ್ಧರೊ ದೇವನೇ.

ಅಲೆವ ಮನ ಕೆಲವೊಮ್ಮೆ ಮಾಡೀತು ಒಳಿತ,
ಆದರೆಷ್ಟೋ ಬಾರಿ ಪಾಪಕ್ಕೆ ಸೆಳೆತ ;
ವಿಧಿಯು ಹಿಂಗಡೆಯಿಂದ ತಿವಿಯುವುದು ಕಾಣೋ
ಆಗ ಬೆಂಕಿಗೆ ಬಿದ್ದು ಬೇಯುವವ ನೀನೋ.

ಆದ್ದರಿಂದಲೆ ಹಿರಿಯರೆಂದದ್ದು ತಿಳಿಯೋ
ಪಾಪಕ್ಕೆ ಕೆಲವೊಮ್ಮೆ ಪುಣ್ಯಕಿಹ ಕಳೆಯೋ
ಕೊಚ್ಚುವುದು ನಿನ್ನನ್ನು ಯಾತನೆಯ ಹೊಳೆಯೋ.

ಆದರಗೋ ಬರುತ್ತಿದ್ದಾನೆ ಹಯ್‌ಮೋನ್
ನಿನ್ನ ಎಳೆಯ ಪುತ್ರ,
ತನ್ನ ಮದುಮಗಳ ಗತಿಗೆ ನೊಂದಿರಬೇಕು,
ನಮ್ಮ ರಾಜಪುತ್ರ.

ಕ್ರಿಯಾನ್ : ಇಷ್ಟರಲ್ಲೇ ಗೊತ್ತಾಗುತ್ತದೆ,
ಅದನ್ನು ಹೇಳಲು ದಾರ್ಶನಿಕ ಬೇಕಾಗಿಲ್ಲ.
(ಹಯ್‌ಮೋನ್ ಪ್ರವೇಶ)
ಪುತ್ರ, ನಿನ್ನ ಹುಡುಗಿಯ ಮೇಲೆ ನನ್ನ ನಿಶ್ಚಿತ ತೀರ್ಪು ಕೇಳಿ
ಕೆರಳಿ ಬಂದೆಯೊ, ಅಥವಾ ಎಲ್ಲದ ಮೀರಿ ನನ್ನ ಅಕ್ಕರೆಯ
ಪುತ್ರನಾಗಿ ಉಳಿದಿದ್ದೀಯೊ ?

ಹಯ್‌ಮೋನ್ : ತಂದೆ,
ನಾ ನಿನ್ನ ಪ್ರೀತಿಯ ಮಗ, ನೀನು
ನಿನ್ನರಿವಿಂದ ನನ್ನ ತಿದ್ದುವ ತಂದೆ ; ನಿನ್ನ ಮಾರ್ಗದರ್ಶನದಿಂದ
ನಡೆವಾತ ನಾನು. ನಿನ್ನ ಹಿತವಚನ ಮೀರಿದ ಮದುವೆ ನನಗೆ
ಬೇಕಿಲ್ಲ.

ಕ್ರಿಯಾನ್ ಯಥಾರ್ಥ ಮಾತು, ಪುತ್ರ.
ನಿನ್ನ ಹೆತ್ತವನ ಇಚ್ಛೆಯನ್ನನುಸರಿಸುವ ಗುಣ
ನಿನ್ನೆದೆಯಲ್ಲಿ ಪ್ರಮುಖಸ್ಥಾನ ಪಡೆದಿರಲಿ. ಇದಕ್ಕಾಗಿಯೆ
ಮನುಷ್ಯ ವೈರಿಯ ತರಿದುಹಾಕುವ, ಸ್ನೇಹಿತರ ಮನ್ನಿಸುವ
ಮಗುವಿಗಾಗಿ ದೇವರನ್ನು ಪ್ರಾರ್ಥಿಸುತ್ತಾನೆ.
ನಿರ್ಭಾಗ್ಯ ಮಕ್ಕಳ ಪಡೆದಾತ
ಶತ್ರುಗಳೆದುರು ದುಃಖ, ಅವಹೇಳನಕ್ಕೆ ಬಾಧ್ಯನಾಗುತ್ತಾನೆ.
ಹೆಣ್ಣು ಕಾಮ, ಕೇಳಿಗಳಿಂದ ವಂಚಿತನಾಗಬೇಡ, ಪುತ್ರ,
ಕೈಹಿಡಿದಾಕೆ ಖೊಟ್ಟಿಯಾದರೆ ನಿನ್ನ ತೋಳಿನ ತೆಕ್ಕೆ
ಹಳಸಿ ಹಣ್ಣಾಗುವುದು ; ವಿರಸಕ್ಕೆ ತಿರುಗಿದ ಪ್ರೇಮದಷ್ಟು
ಹಿಂಸಿಸುವ ವಸ್ತು ಇನ್ನೊಂದಿಲ್ಲ. ಈಕೆಯೆ ನಿನ್ನ ವೈರಿ ,
ಅವಳು ತೊಲಗಲಿ ಬಿಡು, ತೊಲಗಿ ಯಮಲೋಕದಲ್ಲಿ
ತನಗೆ ತಕ್ಕವನನ್ನು ವರಿಸಲಿ. ಇಡೀ ಥೀಬ್ಸ್‌ನಲ್ಲಿ
ಒಬ್ಬಳೇ ಒಬ್ಬಳು ದ್ರೋಹಿ—ಕೃತ್ಯ ನಡೆಸುವಾಗಲೇ
ಹಿಡಿಯಲಾಗಿದೆ ; ನಾನು ನಗರಕ್ಕೆ ಕೊಟ್ಟ ಭರವಸೆಗಾಗಿ
ಆಕೆ ಸಾಯಲೇ ಬೇಕು. ಸೂಸ್ ದೇವರನ್ನು ಪ್ರಾರ್ಥಿಸಿಕೊಳ್ಳಲಿ ;
ಮನೆಯ ಇವಳನ್ನು ನಾನು ಬಿಟ್ಟರೆ, ಹೊರಗಿನ ಯಾವನನ್ನು
ಹತ್ತಿಕ್ಕುವುದು ಸಾಧ್ಯವಾದೀತು ?
ನಿಷ್ಕಪಟವಾಗಿ ತನ್ನ ಮನೆ ಆಳಬಲ್ಲವ
ರಾಜ್ಯ ಆಳಬಲ್ಲ. ಶಾಸನವನ್ನು ಅನುಕೂಲಕ್ಕೆ ಬಗ್ಗಿಸುವಾತ,
ಬದ್ಧನಾಗಿರಬೇಕಾದಲ್ಲಿ ಮುರಿಯುವಾತ,
ಮಹಾಪಾತಕಿ ; ಅಂಥದು ನನಗೆ ಬೇಕಿಲ್ಲ.
ಪ್ರಜೆಯಾದವನು ರಾಷ್ಟ್ರ ಆರಿಸಿದ ದೊರೆಗೆ ಸರಿತಪ್ಪು
ಎಲ್ಲದರಲ್ಲಿ ನಿಷ್ಠನಾಗಿರಬೇಕು ; ದೃಢವಾಗಿ ಮನೆಯ ಆಳುವ
ವ್ಯಕ್ತಿ ಜಾಣ ದೊರೆಯಾಗುತ್ತಾನೆ, ಧೀರ ಪ್ರಜೆಯಾಗುತ್ತಾನೆ.
ಅಂಥವನನ್ನು ಯುದ್ಧದ ಚಂಡಮಾರುತದಲ್ಲಿ,
ಕದನದ ನಟ್ಟನಡುವಿನಲ್ಲಿ ನಂಬಿ ನಡೆಯಬಹುದು, ನಾವು.
ಬಂಡಾಯದಂಥ ಭೀಕರ ಅಪಾಯ ಇನ್ನೊಂದಿಲ್ಲ ;
ರಾಷ್ಟ್ರಗಳು ಉರುಳಿವೆ, ಮನೆ ಪಾಳುಬಿದ್ದಿವೆ,
ಪಡೆಗಳು ಧೃತಿಗೆಟ್ಟಿವೆ, ಗೆಲುವು ಸೋಲಿಗೆ ತಿರುಗಿವೆ,
ಬಂಡಾಯದಿಂದ ; ನಿಷ್ಕಪಟ ನಿಷ್ಠೆ ಜೀವಗಳ ಪೊರೆದಿದೆ.

ಆದ್ದರಿಂದ ನಾವು
ಹುಡುಗಿಯೊಬ್ಬಳಿಂದ ಪಲ್ಲಟಗೊಳ್ಳುವ ಬದಲು
ಕಟ್ಟಳೆಯ ರಕ್ಷಿಸಬೇಕು, ಹೆಂಗಸೊಬ್ಬಳನ್ನು
ಅನುಸರಿಸುವ ಬದಲು ಗಂಡಸಿನ ಕೈಯಲ್ಲಿ ಸೋಲುವುದು ಮೇಲು.

ಮೇಳನಾಯಕ : ನಾನು ನಿಜಕ್ಕೂ ಅರುಳುಮರುಳಲ್ಲದಿದ್ದರೆ—
ನೀನು ಹೇಳಿದ್ದು ಬಹು ಸುಸಂಗತವಾಗಿದೆ.

ಹಯ್‌ಮೋನ್ : ತಂದೆ, ಮನುಷ್ಯನ ವಿವೇಕ ಸ್ವರ್ಗದ ಕೊಡುಗೆ,
ಎಲ್ಲಕ್ಕಿಂತ ಅಮೂಲ್ಯ ವರ. ಎಲ್ಲರೂ ನಿನ್ನ ಮಾತ
ಒಪ್ಪದಿರಬಹುದು, ಆದರೆ ನೀನೆಂದದ್ದು ತಪ್ಪೆಂದು
ಹೇಳುವಷ್ಟು ಜಾಣ ನಾನಲ್ಲ,
ಜಾಣನಾಗಲೂ ನನಗಿಷ್ಟವಿಲ್ಲ. ಆದರೆ ನಾನು
ನಿನ್ನ ಪರವಾಗಿ ಪ್ರಜೆಗಳೇನನ್ನುತ್ತಾರೆ, ಏನು ಮಾಡುತ್ತಾರೆ,
ಯಾವುದನ್ನು ಟೀಕಿಸುತ್ತಾರೆ, ಯಾವುದನ್ನು ಮೆಚ್ಚುತ್ತಾರೆ
ಮುಂತಾದ್ದನ್ನು ಗಮನಿಸುವ ಸಾಮಾನ್ಯ.
ನಿನ್ನ ಹುಬ್ಬಿನ ಗಂಟು ಪ್ರಜೆಯ ನಾಲಗೆಗೆ ಬೀಗ ಹಾಕಬಲ್ಲದು ;
ಆದರೆ ನಾನು ಕಗ್ಗತ್ತಲಲ್ಲಿ ಪಿಸುಗುಟ್ಟುವುದ ಕೇಳಿದ್ದೇನೆ,
ಹುಡುಗಿಯ ಬಗ್ಗೆ ಎಲ್ಲೆಲ್ಲೂ ಅನುಕಂಪೆ ಇದೆ.
ಯುದ್ಧದಲ್ಲಿ ಹೋರಾಡಿ ಸತ್ತು ಬಯಲಲ್ಲಿ ಹೆಣವಾಗಿ ಬಿದ್ದು
ಹದ್ದು ನಾಯಿಗೆ ಖಂಡವಾಗಲು ಬಿಡದೆ ಸಮಾಧಿ ಇತ್ತು
ಅಣ್ಣನಿಗೆ ಗೌರವ ಸಲ್ಲಿಸಿದ ಹುಡುಗಿಯ ಬಗ್ಗೆ,
ಸದಾ ನೋವಿನಲ್ಲಿ ಬದುಕಿ ಈಗ ಮರಣದಂಡನೆಗೆ
ಗುರಿಯಾದವಳ ಬಗ್ಗೆ ಕರುಣೆಯ ಮೆಲುದನಿಗಳನ್ನು
ಕೇಳಿದ್ದೇನೆ. ಇದರಿಂದ ಆಕೆ ಸ್ವರ್ಣಕಿರೀಟ ಗೆದ್ದಳಲ್ಲವೇ—
ಎಂಬುದು ಪ್ರಜೆಗಳ ಮಾತು.
ತಂದೆ, ನಿನ್ನ ಸೌಖ್ಯ, ನೆಮ್ಮದಿ ಹೊರತು
ನನಗೆ ಬೇರೆ ಚಿಂತೆಯಿಲ್ಲ. ಅದಕ್ಕಿಂತ ಹೆಚ್ಚೇನು ಬೇಕು,
ಮಗನಿಗೆ ? ತಂದೆ ಕೂಡ ಮಗನಿಂದ ಹೆಚ್ಚೇನು ಬಯಸುತ್ತಾನೆ ?
ಆದ್ದರಿಂದ ಹೇಳುತ್ತಿದ್ದೇನೆ—ನಿನ್ನ ಮೊದಲ ಅನ್ನಿಸಿಕೆ
ಏಕೈಕ ಅನ್ನಿಸಿಕೆಯಾಗದಿರಲಿ ;
ತನಗೆನ್ನಿಸುವುದು ಮಾತ್ರ ಸರಿ, ತನ್ನ ಮಾತು, ತೀರ್ಮಾನ
ಬಿಟ್ಟರೆ ಇನ್ನಿಲ್ಲವೆಂದು ತಿಳಿದಾತ

ಪೊಳ್ಳು ಚೇತನದ, ಪೊಳ್ಳು ಹೃದಯದವನೆಂದು ಗೊತ್ತಾಗುತ್ತದೆ.
ಆದರೆ ವಿವೇಕಿ
ತನ್ನ ತಪ್ಪು ಒಪ್ಪುತ್ತಾನೆ, ತಲೆಬಾಗಿ ಕಲಿತು
ಘನತೆ ಉಳಿಸಿಕೊಳ್ಳುತ್ತಾನೆ. ಭೋರ್ಗರೆವ ನದಿಗೆ
ಚಾಚಿ ಬಾಗಿದ ಟೊಂಗೆ ಉಳಿದು
ನೀರಿಗೆ ವಿರುದ್ಧ ಸೆಣಸುವ ಟೊಂಗೆ ಮುರಿಯುತ್ತದೆ.
ನಾವಿಕ ಚಂಡಮಾರುತದಲ್ಲಿ ಹಾಯಿ, ಹಗ್ಗವ
ಸುತ್ತಿಕೊಳ್ಳಬೇಕು—ಇಲ್ಲದಿದ್ದರೆ ಹಡಗು ಮುಳುಗುತ್ತದೆ.
ಆದ್ದರಿಂದ, ತಂದೆ, ನಿಧಾನಿಸು ; ಕೋಪ ತಡೆದುಕೋ.
ನನ್ನ ಎಳೆತನದ ಅಭಿಪ್ರಾಯ, ಅದಕ್ಕೆ ಏನೇ ಯೋಗ್ಯತೆ
ಇರಲಿ, ಹೇಳುವೆ ಕೇಳು :
ಸರ್ವಜ್ಞತೆ ಒಳ್ಳೆಯದು ; ಆದರೆ ಅದು ಅಪರೂಪವಾದ್ದರಿಂದ,
ಮತ್ತೊಬ್ಬರ ವಿವೇಕಕ್ಕೆ ಕಿವಿಗೊಡುವುದು ಉತ್ತಮ.

ಮೇಳನಾಯಕ : ಆತನ ಮಾತನ್ನು ಕೇಳಬೇಕು, ಪ್ರಭು, ಚೆನ್ನಾಗಿ ಆಡಿದ್ದಾನೆ ;
ನೀನೂ ಸಹ, ಮಗನೆ, ತಂದೆಯ ಮಾತನ್ನಾಲಿಸು ;
ಇಬ್ಬರೂ ಸಂದರ್ಭೋಚಿತ ಮಾತಾಡಿದ್ದೀರಿ.

ಕ್ರೆಯಾನ್ : ಹಾಗೋ ? ಈ ನನ್ನ ಮುದಿ ವಯಸ್ಸಿನಲ್ಲಿ ಈ ಹುಡುಗನಿಂದ
ಪಾಠ ಕಲಿಯಬೇಕೋ ?

ಹಯ್‌ಮೋನ್ : ಪಾಠದ ಬಗ್ಗೆ ಆತಂಕಪಡಬೇಡ ;
ಇದು ವಯಸ್ಸಿನ ಪ್ರಶ್ನೆಯಲ್ಲ, ಸರಿ ತಪ್ಪಿನ ಪ್ರಶ್ನೆ.

ಕ್ರೆಯಾನ್ : ಹಾಗಾದರೆ ನೀನು ಈ ಶಾಸನೋಲ್ಲಂಘನೆ ಸರಿ ಎನ್ನುತ್ತಿ ?

ಹಯ್‌ಮೋನ್ : ಇಲ್ಲ—ಇದು ಅಪರಾಧವಾಗಿದ್ದರೆ ಮಾತ್ರ.

ಕ್ರೆಯಾನ್ : ಹಾಗಾದರೆ ಈ ಹೆಂಗಸಿನ ಕೃತ್ಯ ಅಪರಾಧವಲ್ಲ ?

ಹಯ್‌ಮೋನ್ : ಥೀಬ್ಸ್ ಪ್ರಜೆಗಳಿಗೆ ಹಾಗೆನ್ನಿಸುವುದಿಲ್ಲ,

ಕ್ರೆಯಾನ್ : ಥೀಬ್ಸ್ ಪ್ರಜೆಗಳು !
ಎಂದಿನಿಂದ ನಾನು ಥೀಬ್ಸ್ ಪ್ರಜೆಗಳಿಂದ
ಆಜ್ಞೆ ಪಡೆಯುತ್ತಿದ್ದೇನೆ ?

ಹಯ್‌ಮೋನ್ : ನೋಡಿದಿಯಾ ! ಇದು ಕೊಂಚ ಬಾಲಿಶ ಮಾತಲ್ಲವೇ ?

ಕ್ರೆಯಾನ್ : ಅಲ್ಲ, ನಾನು ಚಕ್ರವರ್ತಿ, ನನಗೆ ಮಾತ್ರ ನಾನು ಜವಾಬ್ದಾರ.

ಹಯ್‌ಮೋನ್ : ಏಕಮೇವಾದ್ವಿತೀಯ ? ಅದೆಂಥ ರಾಜ್ಯಭಾರ ?

ಕ್ರೆಯಾನ್ : ಯಾಕೆ, ಪ್ರತಿಯೊಂದು ರಾಷ್ಟ್ರವೂ ರಾಜನಿಗೆ ಸೇರಿದ್ದಲ್ಲವೆ ?

ಹಯ್‌ಮೋನ್ : ನೀನೊಬ್ಬ ಮಹಾಚಕ್ರವರ್ತಿ ಆಗಬಲ್ಲೆ, ಮರುಭೂಮಿಯಲ್ಲಿ !
ಕ್ರೆಯಾನ್ : ಸರಿ, ನೀನು ಹೆಂಗಸಿನ ಪರ ವಹಿಸಿದರೆ—
ಹಯ್‌ಮೋನ್ : ಇಲ್ಲ, ನೀನೊಂದುಪಕ್ಷ ಹೆಂಗಸಲ್ಲದಿದ್ದರೆ—
ನಿನಗಾಗಿ ನನ್ನ ಚಿಂತೆ.
ಕ್ರೆಯಾನ್ : ನೀಚ ! ನೀನಾಡುವ ಪ್ರತಿಯೊಂದು ಮಾತೂ
ನನ್ನ ವಿರುದ್ಧವಿದ್ದಾಗ—
ಹಯ್‌ಮೋನ್ : ಯಾಕೆಂದರೆ ನೀನು ಮಾಡುತ್ತಿರುವುದು ಪೂರ್ತಿ ತಪ್ಪು.
ಕ್ರೆಯಾನ್ : ತಪ್ಪು ? ನನ್ನ ಆಜ್ಞೆಗೆ ನಾನು ಮನ್ನಣೆ ಕೊಟ್ಟರೆ ?
ಹಯ್‌ಮೋನ್ : ಎಲ್ಲ ಪುಣ್ಯಮೌಲ್ಯಗಳ ದಮನ ಮಾಡುವ ಮನ್ನಣೆ ?
ಕ್ರೆಯಾನ್ : ದುರಾತ್ಮ, ಹೇಡಿ !
ಹೆಂಗಸೊಬ್ಬಳ ಇಚ್ಛೆಯಂತೆ ಕುಣಿಯುತ್ತಿದ್ದೀ, ಅಲ್ಲವೆ ?
ಹಯ್‌ಮೋನ್ : ನಾಚಿಕೆಪಡಬೇಕಾದಂಥ ಏನನ್ನೂ ಮಾಡಿಲ್ಲ ನಾನು.
ಕ್ರೆಯಾನ್ : ಆದರೆ ಆಕೆಯ ವಾದಕ್ಕೆ ಬೆಂಬಲ ಕೊಡುತ್ತೀ.
ಹಯ್‌ಮೋನ್ : ಇಲ್ಲ,
ನನ್ನ ಬೆಂಬಲ ನಿನ್ನದಕ್ಕೆ, ನನ್ನದಕ್ಕೆ, ಯಮನ ಧರ್ಮಕ್ಕೆ.
ಕ್ರೆಯಾನ್ : ಪರಲೋಕದಿಂದ ಈಚೆಗೆ ನಿಮ್ಮ ಲಗ್ನ ಸಾಧ್ಯವಿಲ್ಲ.
ಹಯ್‌ಮೋನ್ : ಸಾಯುವುದಾದರೆ, ಅವಳು ಒಬ್ಬಳೇ ಸಾಯುವುದಿಲ್ಲ.
ಕ್ರೆಯಾನ್ : ಓ, ನಿನ್ನ ಕೊಬ್ಬು !
ಬೆದರಿಕೆ ಹಾಕುತ್ತೀಯ, ಮೂರ್ಖ !
ಹಯ್‌ಮೋನ್ : ತಿಳಿಗೇಡಿತನದ ವಿರುದ್ಧ ಮಾತಾಡುವುದು ಬೆದರಿಕೆಯೆ ?
ಕ್ರೆಯಾನ್ : ತಿಳಿಗೇಡಿತನ ಯಾವುದೆಂಬುದನ್ನು
ಬೆಲೆ ತೆತ್ತು ಕಲಿಯುತ್ತೀ.
ಹಯ್‌ಮೋನ್ : ಓ ತಂದೆ,
ನೀನು ತಂದೆಯಾಗಿರದಿದ್ದರೆ, ಮರುಳ ಅನ್ನುತ್ತಿದ್ದೆ.
ಕ್ರೆಯಾನ್ : ಸಣ್ಣನೆಯ ಮಾತನ್ನೆಲ್ಲ ನಿನ್ನ ಪ್ರೇಯಸಿಗೆ ಕಾದಿಡು.
ಹಯ್‌ಮೋನ್ : ಹಾಗಾದರೆ ನಿನ್ನದೇ ಕೊನೆಯ ಮಾತು ?
ಕ್ರೆಯಾನ್ : ಹೌದು.
ಅಷ್ಟೇ ಅಲ್ಲ : ಸ್ವರ್ಗದೆಲ್ಲ ದೇವತೆಗಳ ಹೆಸರಿನಲ್ಲಿ ಹೇಳುತ್ತೇನೆ,
ನೀನು ನಿನ್ನ ಧಾರ್ಷ್ಟ್ಯಕ್ಕಾಗಿ ಪರಿತಪಿಸುವಂತೆ ಮಾಡುತ್ತೇನೆ.
(ಒಳಗಿನವರನ್ನು ಕರೆಯುತ್ತಾ)
ಆ ರಾಕ್ಷಸಿಯನ್ನೆಳೆದು ತನ್ನಿ ; ಇಲ್ಲೆ, ಈಗಲೆ

ಅವಳ ಈ ವರನ ಎದುರಲ್ಲಿ ಸಾಯಲಿ !

ಹಯ್‌ಮೋನ್ : ಆ ದೃಶ್ಯ ನಾನು ಖಂಡಿತ ನೋಡುವುದಿಲ್ಲ, ಮತ್ತು
ಇವತ್ತಿನಿಂದ ನೀನು ನನ್ನನ್ನು ನೋಡಲಾರೆ.
ಈ ನಿನ್ನ ಆತ್ಮೀಯರು ನಿನ್ನ ಹೀನಕೃತ್ಯಕ್ಕೆ ಸಾಕ್ಷಿಗಳಾಗಿರಲಿ.
(ಹೋಗುವನು)

ಮೇಳನಾಯಕ : ಪ್ರಭು, ಆತ ಕಡುಕೋಪದಲ್ಲಿ ಹೊರಟುಹೋದ ;
ಹರಯದ ಕ್ರೋಧ ಏನು ಮಾಡೀತೆಂದು ಹೇಳಲಿಕ್ಕಾಗದು.

ಕ್ರೆಯಾನ್ : ಹೋಗಲಿ ! ಏನಾದರೂ ಮಾಡಿಕೊಳ್ಳಲಿ !
ಮನುಷ್ಯನಾದವ ರೇಗುವಷ್ಟು ರೇಗಿ ಹಾಳಾಗಲಿ,
ಆದರೆ ಆ ಹೆಣ್ಣನ್ನು ಮಾತ್ರ ಉಳಿಸಲಾರ.

ಮೇಳನಾಯಕ : ಹಾಗಾದರೆ, ಪ್ರಭು,
ಅವರಿಬ್ಬರನ್ನೂ ಕೊನೆಗೊಳಿಸುತ್ತೀಯ ?

ಕ್ರೆಯಾನ್ : ಇಲ್ಲ, ಇದನ್ನು ಮಾಡದ ಇನ್ನೊಬ್ಬಾಕೆಯನ್ನಲ್ಲ.

ಮೇಳನಾಯಕ : ಇವಳಿಗೆ ಯಾವ ಬಗೆಯ ಮರಣದಂಡನೆ ?

ಕ್ರೆಯಾನ್ : ಇವಳನ್ನು ಮರುಳುಗಾಡಿಗೆ ಕರೆದೊಯ್ಯುತ್ತೇನೆ ;
ನೆಪಕ್ಕೆ ಇಷ್ಟಿಷ್ಟೇ ಅನ್ನ ಹಾಕಿ, ನಗರಕ್ಕೆ ಕೊಲೆಯ
ಶಾಪ ಕೂಡ ತಟ್ಟದಂತೆ, ಅವಳು ಮರಣದೇವತೆ ಕುರಿತು
ಪ್ರಾರ್ಥಿಸುತ್ತ ಸಾಯುವಂತೆ ಮಾಡುತ್ತೇನೆ ;
ಆತ ಬೇಕಾದರೆ ಅವಳನ್ನು ಸಾವಿನ ದವಡೆಯಿಂದ ಅಟ್ಟಲಿ ;
ಸತ್ತವಗೆ ಸನ್ಮಾನ ಮಾಡಿದ್ದರ ಫಲ ಕಂಡುಕೊಳ್ಳಲಿ.
(ಅರಮನೆಯೊಳಕ್ಕೆ ಹೋಗುತ್ತಾನೆ)

* * *

ಮೇಳ : ಎಲ್ಲ ಐಶ್ವರ್ಯಕ್ಕೆ ಶೋಭೆ ನೀಡುವ ಪ್ರೇಮ,
ಜೀವಕಳೆ ಉಕ್ಕಿಸುತ್ತ ;
ಚೆಲುವೆ ಕೆನ್ನೆಯ ಮೇಲೆ ರಾತ್ರಿಯುದ್ದಕೂ
ಚೆಲ್ಲಾಟ ಸಾಗಿಸುತ್ತ.

ಸಾಗರದ ಅಲೆಯಲ್ಲಿ, ಗಿರಿಯ ನೆತ್ತಿಗಳಲ್ಲಿ,
ಬಡ ಗುಡಿಸಿಲಲ್ಲಿ

ಅವನು ಯಾವನೆ ಇರಲಿ, ಎಂಥವನೆ ಆಗಿರಲಿ,
ಅಕ್ಕರೆಯ ಹುಚ್ಚು ಚೆಲ್ಲಿ.

ಓ ಪ್ರೇಮ, ಮಾನವನ ತಿಳಿವನ್ನು ಮುಚ್ಚಿ,
ತನ್ನ, ತನ್ನವರನ್ನು ಪೀಡಿಸಲು ಹಚ್ಚಿ.
ಕೊನೆಗೆ ಚೆಂಗಲವೆಯನು ನೋಡಿದೊಡನೆ,
ಸಂತೋಷ ಬೆಳಕಾಗಿ ಬಿಚ್ಚುತ್ತದೆ,
ಧರ್ಮ ಆ ಕ್ಷಣದಲ್ಲಿ ಹುಟ್ಟುತ್ತದೆ,
ಅಫ್ರೋದಿತೆಯ ನಗೆ ಎಲ್ಲೆಲ್ಲು ಹರಿದಾಡಿ
ಮಾನವನ ಸೋಲುಗಳು ಮುಚ್ಚುತ್ತವೆ.

(ಬಾಗಿಲು ತೆರೆದಾಗ ಭಟರೊಡನೆ ಅಂತಿಗೊನೆ ಪ್ರವೇಶ)

ನಾನು ಮೀರಿದೆ ಮಿತಿಯ
ತಡೆಯಲಾರದೆ ನಾನು ಕಣ್ಣ ಹನಿಯ ;
ಸಾವ ಕನ್ನಿಕೆ ಅಂತಿಗೊನೆಯನ್ನು ಕಂಡು
ನಿರ್ಭಾಗ್ಯೆಗಾದ ಗತಿಯ.

ಅಂತಿಗೊನೆ : ಪ್ರಜಾಬಾಂಧವರೆ, ನನ್ನ ಕೊನೆಯ ಪಯಣ ನೋಡುತ್ತಿದ್ದೀರಿ ;
ಬೆಳಕಿನ ಹಗಲಿಂದ ಬೀಳ್ಕೊಂಡು ಹೋಗುತ್ತಿದ್ದೇನೆ.
ನನ್ನ ಅಂತ್ಯ ಶಾಂತಿಯ ಸ್ಥಳಕ್ಕೆ. ಹೊಳೆದಾಟಿ
ಸೇರಲಿಹ ಮೃತ್ಯುವಿನ ಮನೆಗೆ ;
ಮದುವೆ ಸಡಗರವಿಲ್ಲ, ಮಂಗಳ ವಾದ್ಯವಿಲ್ಲ,
ಸಾವು ನನಗಾಗುವುದು ಲಗ್ನದುಡುಗೆ ತೊಡುಗೆ.

ಮೇಳ : ಆದರೆ ಮೆಚ್ಚುಗೆ, ವೈಭವ ನಿನ್ನವು ಮಹಿಳೆ.
ತೆರಳುವುದು ನಿನ್ನ ಜೊತೆಗೆ.
ನಿನ್ನ ರೂಪದ ಜೊತೆಗೆ, ರೋಗರುಜಿನವ ತೊರೆದು
ಕತ್ತಿಗಳು ಮುತ್ತಿಡದೆ, ಜೀವಂತವಾಗಿ ಮುಕ್ತಳಾಗಿ,
ಎಲ್ಲರಂತಲ್ಲದೆ ಸುಖಪ್ರಯಾಣ ಮಾಡುತ್ತಿರುವೆ.

ಅಂತಿಗೊನೆ : ಫ್ರಿಜಿಯದ ಹೆಣ್ಣು, ತ್ಯಾಂತಲಸ್ಸಿನ ಮಗಳು
ಸಿಪಿಲಸಿನ ಬಂಡೆಯ ಮೇಲೆ

ಅವಳನ್ನಪ್ಪಿ ಒಳಗೊಂಡ ಬಂಡೆಯ ಮೇಲೆ
ಕರುಣಾಜನಕ ಸಾವ ಪಡೆದಳು ; ಐವಿಯ ಹಾಗೆ
ಕಲ್ಲೆದೆಯಲ್ಲಪ್ಪಿತ್ತು ಬಂಡೆ ; ಮಳೆ ಮಂಜು ಹೊಡೆದಿತ್ತು ;
ಕಂಬನಿಗರೆದು ಸತ್ತಳು ಆಕೆ ; ಅದು ಅವಳ ಕಥೆ ;
ಅವಳ ನಿದ್ರೆಯ ರೀತಿ ನನ್ನದು ಕೂಡ.

ಮೇಳ : ಮುಪ್ಪು ಸಾವರಿಯದಿಹ ದೇವತೆಯ ಮಗಳಾಕೆ ;
ನಾವು ಹುಲುಮನುಜರು. ಅವಳ ಸಾವಿನ ಪಾಲು
ನಮಗೆ ದಕ್ಕುವೆಡೆ ಅದು ಸಾವಿನಲ್ಲಿ ಬದುಕು,
ಅಳಿಸದ ಅಮರ ಖ್ಯಾತಿ.

ಅಂತಿಗೊನೆ : ವ್ಯಂಗ್ಯ ! ವ್ಯಂಗ್ಯ ! ಓ, ಮನೆದೇವರ ಹೆಸರಲ್ಲಿ ಹೇಳುವೆ,
ನಾನು ಸಾಯುವ ಮುನ್ನ ಏಕೆ ಈ ಪರಿಹಾಸ್ಯ ?
ಓ ನಗರದ ಹೆಮ್ಮೆಯ ಗಣ್ಯರೆ ! ಓ ಥೀಬ್ಸ್ ನಗರವೇ !
ನಿಮ್ಮ ವೈತರಣಿಗಳ ಕಣಿವೆಗಳು ! ನಿಮ್ಮ ರಥ, ಅಶ್ವಗಳು !
ಸಾವುಬದುಕಿನ ನಡುವೆ ತುಯ್ಯಾಲಾಡುವ ನನ್ನ,
ಬಂಡೆಮನೆ ಏಕಾಂತದಲ್ಲಿ ನರಳಲಿಹ ನನ್ನ
ಈ ಗತಿಗೆ ಮರುಗಲಾರಿರ ನೀವು ?

ಮೇಳ : ಮಗಳೆ, ನೀನು ಧೈರ್ಯಮಾಡಿ ತೀರಾ ದೂರ ಹೋಗಿದ್ದೀ ;
ವ್ಯವಸ್ಥೆಯ ವಿರುದ್ಧ ಎದ್ದು ನಿಂತಿದ್ದೀ.
ನಿನ್ನ ತಂದೆಯ ಪಾಪಕ್ಕೆ ಇದು ನಿನ್ನ ಪ್ರಾಯಶ್ಚಿತ್ತ.

ಅಂತಿಗೊನೆ : ನನ್ನ ತಂದೆ—ಆತನ ನೆನಪು ನನ್ನೆದೆಯ ಸುಡುತ್ತದೆ—
ಲ್ಯಾಬ್ಡಕಸ್ ವಂಶದ ಮೇಲೆ ಕೊನೆಯಿಲ್ಲದ ಭಾರ,
ತಾಯಿ ಮತ್ತು ಮಗನ ಪಾಪದ ಲಗ್ನ....
ತಂದೆ....ಹೆತ್ತವರು....ಓ, ಘೋರ ಪಾಪ !
ಅವರತ್ತ ಹೋಗುತ್ತಿದ್ದೇನೆ, ಅವರ ಮದುವೆಯ ಫಲ ನಾನು,
ಮದುವೆಯಿಲ್ಲದೆ, ಶಾಪಗ್ರಸ್ಥೆಯಾಗಿ ; ಅದೇ ಪಾಪ
ನನ್ನ ಅಣ್ಣನನ್ನೂ ನಾಶಮಾಡಿತು.

ಮೇಳ : ಪುಣ್ಯಕ್ರಿಯೆ ಒಳ್ಳೆಯದು ಅದರಷ್ಟಕ್ಕೆ, ಮಗಳೆ,
ಆದರೆ ಅವಿಧೇಯತೆಯನ್ನು ಅಧಿಕಾರ ಸಹಿಸದು,
ನಿನ್ನಹಂಕಾರಕ್ಕೆ ನೀನೆ ಬಲಿಯಾದೆ.

ಅಂತಿಗೊನೆ : ಆದ್ದರಿಂದಲೇ ನಾನು ತೆರಳಬೇಕಾಗಿದೆ ;
ಮದುವೆ ಸಂಭ್ರಮ, ಸಂಗೀತವಿಲ್ಲವೆ ;

ದುಃಖದಲಿ ಗೆಳೆಯರಿಲ್ಲದೆ ನನ್ನ ಬೀಳ್ಕೊಡಲು,
ಇಂದಿನಿಂದೆನಗೆ ಬೆಳಕಿಲ್ಲ, ಹೊತ್ತು ಮೂಡುವುದಿಲ್ಲ ನನಗೆ.

(ಕ್ರೆಯಾನ್ ಪ್ರವೇಶ)

ಕ್ರೆಯಾನ್ : ಸಾವಿನ ಹೊಸ್ತಿಲಲ್ಲಿ ಅತ್ತು ಕರೆಯುತ್ತಿದ್ದೀ, ಅಲ್ಲವೆ !
ಈ ರೋದನಕ್ಕೆ ಬದುಕನ್ನುಕೊಳ್ಳುವ ಶಕ್ತಿ ಇದ್ದಿದ್ದರೆ
ಸಾವು ಇರುತ್ತಿರಲಿಲ್ಲ. ಅವಳನ್ನ ಕೂಡಲೆ ಕರೆದೊಯ್ಯಿರಿ ;
ಅವಳ ಕಲ್ಲಿನ ಕಗ್ಗತ್ತಲ ಕೋಣೆಯಲ್ಲಿ ಬಿಟ್ಟು ಬನ್ನಿ,
ಅಲ್ಲಿದ್ದು ಸಾಯಲಿ ಅಥವಾ ಕಗ್ಗವಿಯಲ್ಲಿ ಉಸಿರೆಳೆಯಲಿ.
ಇವತ್ತಿನಿಂದ ಅವಳ ಕತೆ ಮುಗಿದಂತೆಯೇ—
ಆದರೆ ಪಾಪ ಮಾತ್ರ ನಮಗೆ ತಟ್ಟುವುದಿಲ್ಲ.

ಅಂತಿಗೊನೆ : ಈಗ ಸಾವಿನ ಮನೆಗೆ.
ನನ್ನ ಮದುಮನೆಗೆ, ನನ್ನ ಶಾಶ್ವತ ಸೆರೆಮನೆಗೆ !
ನಾನು ಹೋಗುವೆ ನನ್ನ ಮನೆತನದ ಕೊನೆಯಾಕೆಯಾಗಿ
ಪೆರ್ಸ್ಸೆಫೋನಿನ ಗೃಹವಾಸಕ್ಕೆ, ಅಕಾಲಮೃತ್ಯು ದೆಸೆಗೆ.
ಆದರೆ ನಾನು ಹೋಗುವೆ ನನ್ನವರೆಡೆಗೆ,
ತಂದೆಯ ಸಾನ್ನಿಧ್ಯಕ್ಕೆ, ತಾಯಿಯ ಕರೆಗುತ್ತರವಾಗಿ,
ನನ್ನ ಅಣ್ಣನಿಗೆ ಹರ್ಷದಾಯಕಿಯಾಗಿ ಹೋಗುತ್ತೇನೆ ;
ಅವರನ್ನು ಚಿರಶಾಂತಿಗಿಳಿಸಿವೆ ನನ್ನ ಕೈ, ಅವರೆಲ್ಲರ
ಸಂಸ್ಕಾರ ಆಚರಿಸಿದ್ದೇನೆ ; ನಿನ್ನ ದೇಹಕ್ಕಾಗಿ ಈ
ಶಿಕ್ಷೆ ಪಡೆದಿದ್ದೇನೆ ಪಾಲಿನೈಕಸ್—
ವಿವೇಕಿಗಳಿಗೆ ಗೊತ್ತು, ಅದು ನಿನ್ನ ಮನ್ನಣೆಗೆ ಎಂದು.
ಪ್ರೀತಿಯ ಮಳೆಗರೆವ ಕಂದರಿಗಾಗಿ ನಾನು
ಹೀಗೆ ನಗರದ ಮನಿಸನ್ನೆದುರಿಸುತ್ತಿರಲಿಲ್ಲ ; ಯಾಕೆ ?
ಒಬ್ಬ ಸತ್ತರೆ ಮತ್ತೊಬ್ಬ ಗಂಡ, ಮಕ್ಕಳಿಗೆ ಬದಲು ಮತ್ತೆ
ಮಕ್ಕಳು ಸಾಧ್ಯ : ಆದರೆ ಹೆತ್ತವಳು ಮಡಿದ ಮೇಲೆ
ಒಡಹುಟ್ಟಿದವ ಹೇಗೆ ಸಾಧ್ಯ ? ಅದಕ್ಕಾಗಿ ನಿನ್ನ ಪ್ರೀತಿಸಿದೆ.
ಇದಕ್ಕೆ ಈ ಕ್ರೆಯಾನ್ ಬದುಕಿ, ಬಾಳದ ನನ್ನ
ಒಬ್ಬಂಟಿ ಸಾವಿಗೆ ನೂಕುತ್ತಿದ್ದಾನೆ !
ಸ್ವರ್ಗದ ಯಾವ ನಿಯಮ ಮುರಿದಿದ್ದೇನೆ ?
ಯಾವ ದೇವರ ಇಚ್ಛೆ ? ನಿಷ್ಠೆಯೆಂಬುದು
ಪಾಪವಾಗಿರುವ ಈಗ ಯಾರೆನಗೆ ಆಶೆ, ನೆರವು ?

ಇದೇ ದೇವರ ಇಷ್ಟವಾಗಿದ್ದರೆ, ಇದರಿಂದ ಪಾಠ ಕಲಿಯುತ್ತೇನೆ ;
ಆದರೆ ಶತ್ರು ತಪ್ಪು ಮಾಡಿದ್ದರೆ ನನ್ನದಕ್ಕಿಂತ
ಘೋರ ಶಿಕ್ಷೆ ಅವನ ಪಾಲಿಗಿರಲಿ.

ಮೇಳನಾಯಕ : ಯಥಾಪ್ರಕಾರದ ಪ್ರಚಂಡ ಉನ್ಮಾದ
ಅವಳ ಎದೆಯನ್ನು ತಲ್ಲಣಿಸುತ್ತಿದೆ.

ಕ್ರೆಯಾನ್ : ಆದ್ದರಿಂದಲೆ ಅವಳನ್ನು ಕಾಯುವ ಭಟರು
ಕೆಲಸದಲ್ಲಿ ಎಚ್ಚರವಹಿಸಬೇಕು ; ಇಲ್ಲದಿದ್ದರೆ
ತೊಂದರೆಗೀಡಾಗುತ್ತಾರೆ.

ಮೇಳನಾಯಕ : ಆ ಮಾತಿಗೆ ಮರಣದ ಸದ್ದಿದೆ.

ಕ್ರೆಯಾನ್ : ನಿಜಕ್ಕೂ ಮೃದುವಚನಗಳು ಅವರ ಗತಿ ವಿವರಿಸಲಾರವು.

ಅಂತಿಗೊನೆ : ಓ ನನ್ನ ಮನೆ ದೇವತೆಗಳೆ, ಓ ನಗರ, ಓ ವಂಶವೇ,
ಓ ಥೀಬ್ಸ್ ದಣಿಗಳೆ, ಕಾಲ ಕಾಯುವುದಿಲ್ಲ,
ನಿಮ್ಮ ರಾಜಮನೆತನದ ಕೊನೆಯವಳು ನಾನು ಹೋಗುತ್ತಿರುವೆ—
ಈತನ ಸೆರೆಯಾಳಾಗಿ ಹೋಗುತ್ತಿದ್ದೇನೆ, ಗೌರವಾರ್ಹ
ಮೌಲ್ಯಗಳನ್ನು ಮನ್ನಿಸಿದ್ದರಿಂದ.

ಮೇಳ : ಹಿಂದೊಮ್ಮೆ ಪೂರ್ವದಲಿ ದೇನೆ ಎನ್ನುವ ಕನ್ಯೆ
ಬದುಕನ್ನು ಸವೆಸಿದಳು ಗುಹೆಯೊಂದರಲ್ಲಿ ;
ಘನತೆ, ರೂಪುಳ್ಳಾಕೆ ; ಅವಳ ಮೃದು ಮೈಮೇಲೆ
ದೇವರೇ ಅಕ್ಕರೆಯ ಹನಿಯ ಚೆಲ್ಲಿ.
ವಿಧಿಯ ಶಕ್ತಿಯ ಮೀರಿ ಏನೊಂದು ಇಲ್ಲ, ತಿಳಿ,
ಯಾವ ನಾವೆಗೂ ಇಲ್ಲ ಅಂಥ ವೇಗ ;
ಮನುಜನೆಲ್ಲ ಪ್ರಯತ್ನ ಮೀರಿ ಸತ್ತಳು ದೇನೆ
ಹಲವು ದಿನದಲಿ ಗುಹೆಯು ಗೋರಿಯಾಗಿ.

ದ್ರಯಾಸಿನ ಮಗ, ಎಡೋನಿಯದ ದೊರೆ
ಹೀಗೆಯೇ ಸೆರೆಮನೆಗೆ ಬಿದ್ದು,
ದಯೋನಿಸಸ್ಸನ್ನು ಹೀಯಾಳಿಸಿದ್ದಕ್ಕೆ
ಕಲ್ಲ ಕಗ್ಗವಿಯಲ್ಲಿ ಬಿದ್ದು,
ತನ್ನ ಗೋಗರೆತ ಮರುದನಿಸಿ ಕರಗಿರಲು
ಕಲಿತಿದ್ದ ದೇವರಿಗೆ ವಂದಿಸುವುದ ;

ದಯೋನಿಸಸ್ ಪಂಗಡವ ಅರಿತಿದ್ದನಾತ
ಕಾವ್ಯಕ್ಕೆ ಪೂಜೆಯನು ಸಲ್ಲಿಸುವುದ.

ಆಮೇಲೆ ಅರಿತಿಹೆವು ಅರೆಸ್ ಕಥೆ,
ಘೋರ ಸಂಗತಿ, ಯುಕ್ಸಿನ ತೀರದಿಂದ ;
ಪೈನಸ್‌ನ ಹೆಣ್ಣು ಮತ್ಸರದಿ ಹುಚ್ಚೆದ್ದು
ಹಸುಳೆಗಳ ಕಣ್ಣರಿದು ಚೂರಿಯಿಂದ ;
ರಕ್ತಗಣ್ಣಿನ ಅವರು ಚೀರುತ್ತಿದ್ದರು, ರೊಚ್ಚಿ
ಅವಳ ಕಡಿಯುವುದಾಗಿ ಕೆಚ್ಚಿನಿಂದ.

ಹೀಗೆಲ್ಲ ತಿಳಿದರು. ನಶಿಸಿದರು ಸಂಪೂರ್ಣ,
ಹೆತ್ತವಳ ಕೋಪಕ್ಕೆ ಬೆಂದು ;
ಅವಳ ಪಾಪದ ಪ್ರೇಮ ಇಷ್ಟು ಮಾಡಿದ್ದನ್ನ
ಹೆತ್ತವನ ಕೃತ್ಯಗಳು ಅಳಿಸಲಿಲ್ಲೆಂದು,
ಕೇಳಿಬಲ್ಲೆವು ನಾವು ಗವಿಯಲ್ಲಿ ಸವೆಯುತ್ತ
ನಿನ್ನಂತೆ ಸಾಗಿದಳು ಎಂದು ;
ಉತ್ತರದ ಚಳಿಗಾಳಿಯಲಿ ನಿತ್ಯ ನಡುಗುತ್ತ
ಪಾಪಕ್ಕೆ ತುತ್ತಾದಳೆಂದು.

(ಹುಡುಗನೊಬ್ಬ ಕುರುಡ ಟೈರೀಸಿಯಸ್‌ನನ್ನು ಕರೆದು ತರುತ್ತಾನೆ)

ಟೈರೀಸಿಯಸ್ : ಥೀಬ್ಸ್ ಗಣ್ಯರೆ, ಇಬ್ಬರಿಂದ ಎರಡೇ ಕಣ್ಣುಳ್ಳ ನಾವು,
ನಾನು ಮತ್ತೆ ನನ್ನ ಈ ಗೆಳೆಯ,
ನಿಮಗೆ ಶುಭ ಕೋರುತ್ತೇವೆ. ಕುರುಡನಾದವ ಯಾವಾಗಲೂ
ಕಣ್ಣುಳ್ಳವನ ಮಾರ್ಗದರ್ಶನ ಪಡೆಯುತ್ತಾನೆ.

ಕ್ರೆಯಾನ್ : ಜ್ಞಾನವೃದ್ಧ ಟೈರೀಸಿಯಸ್, ಸ್ವಾಗತ ನಿನಗೆ.
ಏನಾದರೂ ಸುದ್ದಿಯುಂಟೆ ?

ಟೈರೀಸಿಯಸ್ : ಉಂಟು, ಸುದ್ದಿಯಿದೆ ; ಹಿತವಚನ ಕೂಡ,
ನಿನಗೆ ಕೇಳುವ ಮನಸ್ಸಿದ್ದರೆ.

ಕ್ರೆಯಾನ್ : ನಿನಗೆ ಕಿವಿಗೊಡಲು ನಾನೆಂದೂ ನಿರಾಕರಿಸಿಲ್ಲ.

ಟೈರೀಸಿಯಸ್ : ಆದ್ದರಿಂದ ಇಲ್ಲಿಯ ತನಕ ಸರಿಯಾದ ದಾರಿಯಲ್ಲಿದ್ದೀ.

ಕ್ರೆಯಾನ್ : ಸಂತೋಷದಿಂದ ನಿನ್ನ ಋಣ ಒಪ್ಪಿಕೊಳ್ಳುತ್ತೇನೆ.

ಟೈರೀಸಿಯಸ್ : ಹಾಗಾದರೆ ಕೇಳು :
ನೀನೀಗ ಮತ್ತೊಮ್ಮೆ ಅಪಾಯಕರ ಕೂರಲಗ ಮೇಲಿರುವೆ.

ಕ್ರೆಯಾನ್ : ನಿಜವಾಗಿಯೂ ? ನನ್ನಲ್ಲಿ ನಡುಕ ಹುಟ್ಟಿಸುತ್ತಿದ್ದೀ, ಅರ್ಚಕ.
ಮುಂದುವರಿಸು.

ಟೈರೀಸಿಯಸ್ : ಮುಂದುವರಿಸುತ್ತೇನೆ, ನನ್ನ ಪರಿಣತಿ ತೋರುವಷ್ಟು
ತೋರುತ್ತೇನೆ.
ಎಷ್ಟೋ ವರ್ಷಗಳಿಂದ ನಾನು ಕೂರುವ, ಕೂತು
ಭವಿಷ್ಯ ಭಾವಿಸುವ ಪೀಠಕ್ಕೆ ಹತ್ತಿರದಲ್ಲಿ
ಹಕ್ಕಿಗಳು ಕಿತ್ತಾಡಿ, ಉಗ್ರ ಅಪರಿಚಿತ ಸದ್ದು ಮಾಡುತ್ತ,
ರೆಕ್ಕೆಗಳ ಪಟಪಟ ಬಡಿದು ವಿಚಿತ್ರ ಚೀತ್ಕಾರ ಮಾಡುತ್ತಿದ್ದವು.
ಅವು ಉಗುರಿಂದ ಪರಸ್ಪರ ಪರಚಿ ಹೋರಾಡುವುದ
ಊಹಿಸಿದೆ ; ಅಶುಭ ಸೂಚನೆಯೆಂದು ಬೆಂಕಿಗೆ ಬಲಿ ಹಾಕಿ
ನೋಡಿದೆ. ಪ್ರತಿಯಾಗಿ ಜ್ವಾಲೆ ಬರಲಿಲ್ಲ,
ಮಾಂಸದಿಂದ ಕೇವಲ ರಸ ಬೂದಿಗೆ ಒಸರಿ
ಬೆಂಕಿಯನ್ನಾರಿಸಿತು ಚಿಟಚಿಟನೆ ; ಪಿತ್ತರಸ ಇಲ್ಲವಾಗಿ
ಕೊಬ್ಬು ಹರಿಯುತ್ತ ಕೆಳಗೆ ತೊಡೆಯ ಪೊರೆ ಕರಗಿ
ಬತ್ತಲಾಯಿತು. ಇದನ್ನು ನನ್ನ ಸಹಾಯಕನ ಕಣ್ಣಿಂದ ನೋಡಿದೆ,
ನಾನು ಮತ್ತೊಬ್ಬರ ನೋಡಲೆಂದು ನನಗಾಗಿ ನೋಡುವವನಿಂದ
ನೋಡಿದೆ. ನನ್ನ ಪ್ರಯತ್ನ ವಿಫಲವಾದಂತಿತ್ತು.

ಹೀಗೇಕಾಯಿತು ? ನಮಗೆ ನಿನ್ನ ಕೃತ್ಯಗಳಿಂದ ರೋಗ ತಟ್ಟಿದೆ,
ಕ್ರೆಯಾನ್ ; ನಮ್ಮ ಪುಣ್ಯಪೀಠಗಳನ್ನು, ದೇವಸ್ಥಾನಗಳನ್ನು
ನೆನೆಸಿದ ರಕ್ತ,
ಹದ್ದು ನಾಯಿಗಳು ನೆಕ್ಕಿ ಕುಡಿಯುವ ರಕ್ತ,
ನೀನು ನಿರ್ಭಾಗ್ಯ ಈಡಿಪಸ್ ಪುತ್ರನ ನಾಳಗಳಿಂದ
ಚೆಲ್ಲಿದ ನೆತ್ತರಲ್ಲದೆ ಬೇರೆಯಲ್ಲ.
ನಮ್ಮ ಪ್ರಾರ್ಥನೆ, ಯಜ್ಞ, ಕಾಣಿಕೆಗಳನ್ನು ದೇವರು ತಿರಸ್ಕರಿ
ಸಿದ್ದಾನೆ.
ಮನುಷ್ಯರಕ್ತ ಹೀರಿದ ಹಕ್ಕಿ
ಅಪಶಕುನದ ಸದ್ದಲ್ಲದೆ ಮತ್ತೇನನ್ನು ಮಾಡೀತು ?

ಆದರೆ ಪಶ್ಚಾತ್ತಾಪಪಡದೆ ಉಬ್ಬುವವ ಮಾತ್ರ
ನಿರ್ವೀರ್ಯನಾಗಿ ನಾಶವಾಗುತ್ತಾನೆ.
ನಿನ್ನ ಒಳ್ಳೆಯದಕ್ಕೆ ಇಷ್ಟು ಹೇಳಿದ್ದೇನೆ, ನನಗೆನ್ನಿಸಿದಂತೆ ;
ನಿನಗೆ ಒಪ್ಪಿತವಾಗಬೇಕು.

ಕ್ರಿಯಾನ್ : ನೀನೂ ನನ್ನ ಮೇಲೆ ಆಪಾದನೆ ಹೊರಿಸುತ್ತಿದ್ದೀ, ಯಜಮಾನ,
ಎಲ್ಲರ ಹಾಗೆ, ನನಗೆ ನಿನ್ನ ಹಳೆಯ ತಂತ್ರ ಗೊತ್ತಿದೆ.
ನಿನ್ನ ಲಾಭಕ್ಕಾಗಿ ನನ್ನನ್ನು ಕೊಟ್ಟುಕೊಳ್ಳುವ ಸರಕು
ಮಾಡಿಕೊಂಡಿರುವ ನಿನ್ನ ಗುಣ ಗೊತ್ತು. ಆದರೆ
ಸಾರ್ಡಿಸಿನ ಬೆಳ್ಳಿಯಾಗಲೀ ಇಂಡಿಯದ ಬಂಗಾರವಾಗಲೀ
ಆ ಕಡು ದ್ರೋಹಿಗೆ ಸಮಾಧಿಯನ್ನು ಕೊಳ್ಳಲಾರವು.
ಇಲ್ಲ, ರಣಹದ್ದು ಮಾಂಸವನ್ನು ಹೆಕ್ಕಿ ಸ್ಯೂಸ್ ದೇವನ
ಸಿಂಹಾಸನಕ್ಕೆ ಎಸೆಯಲಿ ; ಅಂಥ ಪಾಪ ಕೂಡ
ಆತನಿಗೆ ಸಮಾಧಿ ನಿರಾಕರಿಸುವ ನನ್ನ ನಿಶ್ಚಯದಿಂದ
ಚಲಿಸಲಾರದು. ಮನುಷ್ಯನ ಎಂಥ ಕೃತ್ಯವೂ
ದೇವರ ಘನತೆಗೆ ಕಳಂಕ ತರಲಾರದು ; ಆದರೆ
ಹಿತನುಡಿವ ನೆಪದಲ್ಲಿ ಸ್ವಂತ ಲಾಭಕ್ಕೆ ಹಾತೊರೆವ
ಮಾನವರ ಭಯಂಕರ ಪತನ ಮಾತ್ರ ಖಂಡಿತ.

ಟೈರೀಸಿಯಸ್ : ಓ, ಇದನ್ನು ಅರ್ಥಮಾಡಿಕೊಳ್ಳುವವ ಇಲ್ಲವೇ
ಈ ಜಗತ್ತಿನಲ್ಲಿ !

ಕ್ರಿಯಾನ್ : ಹೇಳು, ಅದೇನು ನುಡಿಮುತ್ತು—

ಟೈರೀಸಿಯಸ್ : ನಮ್ಮ ಸೌಭಾಗ್ಯದಲ್ಲಿ ಅಮೂಲ್ಯವಾದದ್ದು ವಿವೇಕ.

ಕ್ರಿಯಾನ್ : ದುಸ್ಸಾಹಸಗಳಲ್ಲಿ ಅವಿವೇಕ ಮುಖ್ಯವಾಗಿರುವಂತೆ ?

ಟೈರೀಸಿಯಸ್ : ಹೌದು, ಅವಿವೇಕ ಅಂಟುಜಾಡ್ಯ—ಅದು ನಿನ್ನನ್ನು
ತುಂಬಿಕೊಂಡಿದೆ.

ಕ್ರಿಯಾನ್ : ಕಣಿ ಹೇಳುವವನ ಜೊತೆ ಜಗಳಕ್ಕೆ ನಾನು ಸಿದ್ಧನಿಲ್ಲ.

ಟೈರೀಸಿಯಸ್ : ಆದರೆ ಅದನ್ನೇ ಮಾಡಿದ್ದೀ—
ನಾನು ಕಣಿ ಮಾರಿಕೊಳ್ಳುವುದಾಗಿ ಆಪಾದಿಸಿ.

ಕ್ರಿಯಾನ್ : ಎಲ್ಲ ಕಣಿ ಹೇಳುವವರೂ ಮಾರುತ್ತಾರೆ ;
ಅದು ಅವರ ಕುಲಕಸುಬು.

ಟೈರೀಸಿಯಸ್ : ಅಥವಾ ದೊರೆಗಳ ಕುಲಕಸುಬಿನಂತೆ—
ಭ್ರಷ್ಟ ಕಾಸಿಗಾಗಿ ಹಾತೊರೆಯುತ್ತಿರಬಹುದಲ್ಲ ?

ಕ್ರೆಯಾನ್ : ಇದನ್ನು ಯಾರಿಗೆ ಹೇಳುತ್ತಿದ್ದೀ—ಮರೆತಿಲ್ಲ ತಾನೆ ?
ಟೈರೀಸಿಯಸ್ : ಇಲ್ಲ,—ನನಗೆ ದೊರೆ, ಆಶ್ರಯದಾತನಾದವನಿಗೆ—
ನನ್ನ ಮಾರ್ಗದರ್ಶನದಿಂದ.
ಕ್ರೆಯಾನ್ : ನಿನ್ನಲ್ಲಿ ಆ ಮಂತ್ರಶಕ್ತಿ ಇಲ್ಲದಿಲ್ಲ,
ಅಂದಮಾತ್ರಕ್ಕೆ ನೀನು ಪ್ರಾಮಾಣಿಕ ನೆನ್ನಿಸಿಕೊಳ್ಳುವುದಿಲ್ಲ.
ಟೈರೀಸಿಯಸ್ : ಅಂದುಕೋ. ಆದರೆ ನಾನು ಬಿಚ್ಚಿಡದ ಗೂಢ
ಬಿಚ್ಚಿ ಹೇಳುವಂತೆ ಮಾಡುತ್ತಿದ್ದೀ.
ಕ್ರೆಯಾನ್ : ಬಿಚ್ಚಿಬಿಡು ; ಆದರೆ ಅದರಿಂದ
ಲಾಭದ ಆಶೆ ಇಟ್ಟುಕೊಳ್ಳಬೇಡ.
ಟೈರೀಸಿಯಸ್ : ಒಟ್ಟಿನಲ್ಲಿ ಅದೇ ನನ್ನ ಉದ್ದೇಶ
ಎಂದು ತೀರ್ಮಾನಿಸಿದ್ದೀ ?
ಕ್ರೆಯಾನ್ : ಯಾಕೆಂದರೆ ನನ್ನ ಮನಸ್ಸು ನಿನ್ನ ಸಂತೆಯಲ್ಲಿ ಮಾರಾಟಕ್ಕಿಲ್ಲ.
ಟೈರೀಸಿಯಸ್ : ಹಾಗಾದರೆ ಕೇಳು :
ಸೂರ್ಯ ತನ್ನ ರಥವೇರಿ ಒಂದೆರಡು ಸಲ ತನ್ನ ವೃತ್ತ
ಮುಗಿಸುವಷ್ಟರಲ್ಲಿ ನೀ ಹೆತ್ತ ಪುತ್ರನಿಗೆ
ಸಾವು ತಟ್ಟುತ್ತದೆ, ಸಾವಿಗೆ ಉತ್ತರವಾಗಿ—ಎರಡು ಕಾರಣಕ್ಕಾಗಿ :
ಎಳೆಯ ಜೀವಕ್ಕೆ ಮರಣದಂಡನೆ ವಿಧಿಸಿ
ಕಗ್ಗವಿಯ ಗೋರಿಯಲ್ಲಿ ಎಸೆದದ್ದಕ್ಕಾಗಿ ;
ಸಂಸ್ಕಾರ, ಸಮಾಧಿ ಬಹಿಷ್ಕರಿಸಿ ಸತ್ತ ದೇಹವನ್ನು
ಬಯಲಲ್ಲಿ ಎಸೆದ ನೀಚಕೃತ್ಯಕ್ಕಾಗಿ.
ಇದನ್ನು ನೀನು ನಿವಾರಿಸಿಕೊಳ್ಳಲಾರೆ ; ದೇವರು ಸಹ ತಪ್ಪಿಸಲಾರ.
ನಿನ್ನ ಕೃತ್ಯಕ್ಕೆ ಫಲವಾಗಿ ಇದು ಆಗಿಯೇ ಆಗುತ್ತದೆ.
ನಿನ್ನ ಪಾಪ ನಿನ್ನನ್ನು ಅಪ್ಪಳಿಸಿ ಯಮಜಗತ್ತಿನ ಕ್ರೂರಕನ್ಯೆಯರು
ನಿನ್ನ ಬೆನ್ನಟ್ಟಿ ಬೇಟೆಯಾಡುತ್ತಾರೆ ; ಬಲಿ ಪಡೆಯುತ್ತಾರೆ.
ನನ್ನ ಲಾಭಕ್ಕಾಗಿ ಇದನ್ನ ಹೇಳುತ್ತಿಲ್ಲ ತಾನೆ ? ನಿನ್ನ ಮನೆ
ಹೆಣ್ಣುಗಂಡುಗಳ ರೋದನದಿಂದ ತುಂಬುವ ಕಾಲ ಬರುತ್ತದೆ.
ಬಹುಬೇಗ, ಹದ್ದುನಾಯಿಗಳು ನೀನು ಚೆಲ್ಲಿದ ನೆತ್ತರ ಹೊತ್ತು
ಎಲ್ಲ ಮನೆ, ಎಲ್ಲ ಮಠಗಳನ್ನು ಸೂತಕಗೊಳಿಸಿ
ನೆರೆನಗರಗಳೆಲ್ಲ ಕ್ರೋಧದಿಂದ ನಿನ್ನ ಮೇಲೆರಗುತ್ತವೆ.
ನನ್ನ ಕೆಲಸ ಮಾಡಿ ಮುಗಿಸಿದ್ದೇನೆ. ನನ್ನನ್ನು
ಚುಚ್ಚಿ ಕೆರಳಿಸಿದ್ದರಿಂದ ನಿನ್ನೆದೆಯಲ್ಲಿ ಇದನ್ನ ಬಿತ್ತಿದ್ದೇನೆ ;

ಇದರಿಂದ ನೀನು ಮುಕ್ತನಾಗಲಾರೆ.
ಹುಡುಗ, ಮನೆಯತ್ತ ನನ್ನನ್ನು ನಡೆಸು.
ಈತ ಸಣ್ಣವರ ಮೇಲೆ ತನ್ನ ನಾಲಗೆ ಪ್ರಯೋಗಿಸಲಿ ;
ಅಥವಾ ಬುದ್ಧಿ ನಾಲಗೆಯನ್ನು ಹತೋಟಿಗೆ ತಂದುಕೊಂಡು
ನಮ್ರತೆ ಕಲಿತು ನಡೆಯಲಿ.
ನಡೆ, ಹೋಗೋಣ.
(ಹೋಗುವರು)

ಮೇಳನಾಯಕ : ಆತ ಹೊರಟೇಹೋದ ಪ್ರಭು. ಕೇಡುನುಡಿ ಆಡಿದ್ದಾನೆ ;
ನಾನು ನನ್ನ ಬಿಳಿಗೂದಲು ಕಪ್ಪಗಿದ್ದಾಗಿನಿಂದ ಬಲ್ಲಂತೆ
ಅವನ ಭವಿಷ್ಯ ಸುಳ್ಳಾಗಿಲ್ಲ.

ಕ್ರೆಯಾನ್ : ಅದೇನೋ ನಿಜ, ಆದರೆ ನನ್ನೆದೆ ದ್ವಂದ್ವದ
ಉಯ್ಯಾಲೆಯಲ್ಲಿದೆ. ಮಣಿಯುವುದು ಕಷ್ಟ,
ಮಣಿಯದೆ ಅಹಂಕಾರದಲ್ಲಿ ಕೇಡನ್ನು ಸಹಿಸುವುದು
ಇನ್ನೂ ಕಷ್ಟ.

ಮೇಳನಾಯಕ : ಓ ಮೆನೋಕಿಯಾಸ್ ಪುತ್ರ. ಹೊತ್ತು ಮೀರುವ ಮುನ್ನ
ಅರ್ಥ ಮಾಡಿಕೋ.

ಕ್ರೆಯಾನ್ : ಏನನ್ನ ಮಾಡಲಿ ಹೇಳು—ಅದರಂತೆ ನಡೆವೆ.

ಮೇಳನಾಯಕ : ಕಗ್ಗವಿಯಿಂದ ಆ ಹೆಣ್ಣನ್ನು ಮುಕ್ತಗೊಳಿಸು ;
ಸಮಾಧಿ ಮಾಡದ ಶವಕ್ಕೆ ಸಂಸ್ಕಾರ ಮಾಡು.

ಕ್ರೆಯಾನ್ : ಹೀಗೆ ಮಾಡಬೇಕೆಂಬುದು ನಿಮ್ಮ ಇಚ್ಛೆಯೆ ? ಹಿತವಚನವೆ ?

ಮೇಳನಾಯಕ : ಹೌದು, ಬೇಗ ಮಾಡು.
ಪಾಪಿಯನ್ನು ಹತ್ತಿಕ್ಕುವುದರಲ್ಲಿ ದೇವರು ತಡಮಾಡುವುದಿಲ್ಲ.

ಕ್ರೆಯಾನ್ : ಓ, ಹೃದಯದ ಆಸೆಗಳನ್ನು ಹತ್ತಿಕ್ಕುವುದು
ಎಂಥ ಹಿಂಸೆ ! ಆದರೆ ವಿಧಿಯೊಂದಿಗೆ ಹೋರಾಡಲು
ಸಾಧ್ಯವಿಲ್ಲ.

ಮೇಳನಾಯಕ : ಹೋಗು, ಸ್ವಹಸ್ತದಿಂದ ಇದನ್ನು ಮಾಡು ;
ಇನ್ನೊಬ್ಬರಿಗೊಪ್ಪಿಸಬೇಡ.

ಕ್ರೆಯಾನ್ : ಹಾಗೇ ಆಗಲಿ, ಹೋಗುತ್ತೇನೆ.
ಸೇವಕರೆ, ಎಲ್ಲ ಬನ್ನಿ.
ನೀನು, ಅಲ್ಲಿರುವಾತ : ಹೋಗಿ ಎಲ್ಲರನ್ನು ಕರೆದು ತಾ,
ಬೆಟ್ಟಗಳೆಡೆಗೆ ಹೋಗೋಣ, ನಾನು ತೀರ್ಮಾನಿಸಿದ್ದೇನೆ :

ಕತ್ತಲಲ್ಲಿರುವವಳ ಸೆರೆಯಿಂದ ಬಿಡಿಸಲು ತಡಮಾಡುವುದಿಲ್ಲ ;
ಬದುಕು ಬೇಕೆನ್ನುವವ ಧರ್ಮ ರಕ್ಷಿಸಬೇಕು.
(ಹೋಗುವನು)

* * *

ಮೇಳ : ವಿವಿಧ ಹೆಸರಲಿ ನಿನ್ನ ಕರೆವೆವು
ಓ. ಸೆಮಿಲೆ ಮಿಲನದ ಪುತ್ರನೇ,
ಓ, ಸಿಡಿಲ ಮಗ ಸ್ಯೂಸ್ ಕುವರನೇ,
ಇಟಲಿ ನಾಡಿನ ಇಂಪುಗೀತದ ನಾಯಕ,
ಭೋಗಲೋಕದ ಓ, ಉದಾತ್ತ ನಾಯಕ,
ಇಲಿಸಿಯಮ್ಮನ ಎಲ್ಲ ತೋಜಿನ ಒಡೆಯನೇ,
ಥೀಬ್ಸ್ ಪುರದಲಿ ಸುತ್ತಿಸುಳಿವ ಬ್ಯಾಕಸ್ಸನೇ,
ಎಲ್ಲಿ ಡ್ರೇಗನ್ ದಂತ ಹೂತಿವೆ, ಫಲಿಸಿವೆ ;
ಅಲ್ಲಿ ಇಸ್ಮೆನಸ್ ಬೆಳ್ಳಿಹೊಳೆ ತಾ ಹರಿದಿದೆ.

ಬಾ ಬ್ಯಾಕಸ್, ಬಾ, ನಿನ್ನನುಚರರೊಡನೆ,
ಬೆಂಕಿ ಚುಕ್ಕಿಗಳ ಉರಿಪಂಜೊಡನೆ,
ಹಬ್ಬಿದ ಹೊಗೆಯಿಹ ಬಂಡೆಗಳಿಂದ,
ಕ್ಯಾಸ್ಟೇಲಿಯ ನದಿ, ಬುಗ್ಗೆಗಳಿಂದ,
ದ್ರಾಕ್ಷಿಯ, ಐವಿಯ ಸಿರಿತನದಿಂದ ;
ನ್ಯಾಸದ ಗಿರಿಗಳ ಕಣಿವೆಗಳಿಂದ
ಹಬ್ಬಿದೆ ನಿನ್ನನು ಹಾಡುವ ಛಂದ.

ಕರೆಯುತ್ತಿದೆ, ಓ, ಪ್ರೀತಿಯ ನಗರ,
ಸಿಡಿಲಪ್ಪಿದ ತಾಯಿಯ ಪ್ರೀತಿಯ ನಗರ,
ಸಾಯುತ್ತಿರುವರ ಸಂತೈಸಯ್ಯ,
ಕೇಡಡರಿದ ಸ್ಥಳ ಪೊರೆಗೊಳ್ಳಯ್ಯ,
ಬಾ ಮೃದು ಅಡಿಯಿಡು, ರಕ್ಷಿಸು ಬಾರಾ,
ಚೀತ್ಕಾರದ ಮಡು ದಾಟುತೆ ಬಾರಾ,
ಪರ್ನಾಸಸ್ ಗಿರಿ ಇಳಿಯುತೆ ಬಾರಾ.

ಓ, ನೃತ್ಯದ, ಗೀತದ ಹಬ್ಬದ ಸಿರಿಯೇ,
ಉಡಿಯುವ ಚುಕ್ಕಿಗಳೆಲ್ಲರ ದೊರೆಯೆ,
ಇರುಳಿನ ಮರುನುಡಿ ಪ್ರಶಂಸೆಯೊರೆಯೆ,
ಓ ಸ್ಯೂಸ್ ದೇವನ ಮುದ್ದಿನ ಮರಿಯೇ,

ಮೇಳದ ಸೇನೆಯು ಸಂಗಡ ಬಾರೋ
ಇರುಳಿನ ಶಿಷ್ಯರ ಸ್ಫೂರ್ತಿಯ ತಾರೋ.

(ರಂಗದ ಪಕ್ಕದಿಂದ ದೂತನ ಪ್ರವೇಶ)

ದೂತ : ಕೇಳಿ, ಕ್ಯಾಡ್‌ಮಸ್ ಕುಲಬಾಂಧವರೆ, ಆಂಫಿಯನ್ ಸೋದರರೆ,
ಮನುಷ್ಯನ ಸುಖದುಃಖವ ತೆಗಳೆನು ನಾನು, ಹೊಗಳಲಾರೆ ;
ಅದೃಷ್ಟವೆತ್ತುವುದು ಬಿದ್ದವನ, ತುಳಿಯುವುದು ಎದ್ದವನ.
ನಿತ್ಯವೆಂಬಂಥ ಭಾಗ್ಯವಿಲ್ಲದ ಮಾನವನ ಬಗ್ಗೆ
ಆಗಿದ್ದ, ಆಗುವುದ ಬಿಡಿಸಿ ಹೇಳಲಸಾಧ್ಯ.
ಕ್ರಿಯಾನನನ್ನು ಕಂಡು ಜನ ಮತ್ಸರ ಪಟ್ಟದ್ದುಂಟು ; ಶತ್ರುಗಳ
ಸದೆಬಡಿದು ದೊರೆತನ ಪಡೆದು ಸಮರ್ಪಕವಾಗಿ ಆಳುತ್ತ
ರಾಜವಂಶಕ್ಕಿವನು ಹೆಮ್ಮೆಯಾಗಿದ್ದ. ಆದರೆ ಇವತ್ತು
ಸ್ಥಾನ, ವೈಭವ, ರಾಜ್ಯ ಸುಖಸಂಪದ, ಸಂತೋಷ ಎಲ್ಲ ಬತ್ತಿ
ಕೈಗೆಟುಕದ ನೆರಳುಗಳಾಗಿ ನಿಷ್ಪ್ರಯೋಜಕ ಸುಳ್ಳಾಗಿವೆ—
ಹೃದಯದ ಹಿತ ಇಂಗಿ ಎಲ್ಲ ಅವಾಸ್ತವವಾಗಿವೆ.

ಮೇಳನಾಯಕ : ರಾಜವಂಶದ ಬಗ್ಗೆ ಮತ್ತೇನು ಘೋರವಾರ್ತೆ ತಂದಿರುವೆ ?

ದೂತ : ಸಾವು : ಸಾವಿನ ಪಾಪ ಬದುಕಿರುವವರ ಮೇಲೆ.

ಮೇಳನಾಯಕ : ಯಾರ ಸಾವು ? ಯಾರಿಂದ ?

ದೂತ : ಹಯ್‌ಮೋನ್ ಸತ್ತಿದ್ದಾನೆ ; ಆತ್ಮಹತ್ಯೆಯಿಂದ ರಕ್ತ ಚೆಲ್ಲಿ
ಕೊಂಡಿದ್ದಾನೆ.

ಮೇಳನಾಯಕ : ಆತ್ಮಹತ್ಯೆ ? ಅಥವಾ ತಂದೆಯಿಂದಾಗಿಯೋ ?

ದೂತ : ಎರಡರಿಂದಲೂ ; ತಂದೆಯ ಕೃತ್ಯ
ಅವನನ್ನು ಸಾವಿಗೆ ತಳ್ಳಿತು.

ಮೇಳನಾಯಕ : ಓ ಭವಿಷ್ಯಕಾರ, ನಿನ್ನ ಮಾತು ನಿಜವಾಗಿವೆ !

ದೂತ : ಮುಂದಿನ ನಮ್ಮ ಕರ್ತವ್ಯವನ್ನು ತಾವು ನಿರ್ಧರಿಸಬೇಕು.

(ಅರಮನೆಯ ಬಾಗಿಲು ತೆರೆದುಕೊಳ್ಳುತ್ತದೆ)

ಮೇಳನಾಯಕ : ಅಗೋ ಮಹಾರಾಣಿ ಯುರಿಡೀಸಿ ಬರುತ್ತಿದ್ದಾಳೆ.
ಹತಭಾಗ್ಯೆ, ತನ್ನ ಮಗನ ಬಗ್ಗೆ ಕೇಳಿರಬೇಕು.
(ತನ್ನ ಪರಿವಾರದೊಂದಿಗೆ ಯುರಿಡೀಸಿ ಪ್ರವೇಶ)

ಯುರಿಡೀಸಿ : ಹೌದು ಪ್ರಿಯಜನರೇ, ದೇವಿ ಪಲ್ಲಸಳ
ಆರಾಧನೆಗೆ ಹೋಗುತ್ತಿದ್ದೆ, ಬಾಗಿಲ ಬಳಿ ನಿಮ್ಮ ಮಾತು ಕಿವಿಗೆ
ಬಿತ್ತು.

ಬಾಗಿಲು ತೆರೆಯುವುದಕ್ಕೆ ಮುನ್ನ ನಿಮ್ಮ ರೋದನ ಕೇಳಿ
ಭೂಮಿಗಿಳಿದೆ. ದಿಗ್ಭ್ರಮೆಗೊಂಡ ನನ್ನ
ಸೇವಕಿಯರು ಎತ್ತಿ ನಿಲ್ಲಿಸಿದರು. ಎಷ್ಟು ಕಠೋರವಿದ್ದರೂ
ನನಗೆ ನೀವು ಚಾಚೂ ತಪ್ಪದೆ ಹೇಳಬೇಕು ;
ದುರಂತ ನನಗೆ ಹೊಸತಲ್ಲ.

ದೂತ : ನೆಚ್ಚಿನೊಡತಿ, ನಾನು ಅಲ್ಲಿದ್ದೆ.
ಇನ್ನೇನು ಗೊತ್ತಾಗುವ ಕಟುಸತ್ಯವನ್ನು ಮರೆಮಾಡಿ
ಉಪಯೋಗವೇನು ? ಎಲ್ಲವನ್ನೂ ವಿವರವಾಗಿ ಹೇಳುತ್ತೇನೆ ;
ನಿಜ ಹೇಳುವುದೇ ಸದಾ ಕ್ಷೇಮ.

ಪಾಲಿನೈಕಸ್ ದೇಹ ನಾಯಿಗಳಿಗೆ ತುತ್ತಾಗಿ
ಹರಿದು ಕರುಣಾಜನಕವಾಗಿ ಬಿದ್ದಿದ್ದ ಬೀಳಿಗೆ ನಾನು
ದೊರೆಯ ಜೊತೆಗೆ ಹೋದೆ. ಕೂಡುದಾರಿಯ ದೇವತೆ
ಮತ್ತು ಪ್ಲೂಟೋ ದೇವನ್ನ ಕುರಿತು ಕ್ಷಮೆ ಬೇಡಿ ಪ್ರಾರ್ಥಿಸಿದೆವು.
ಶವದ ಅವಶೇಷಗಳ ತೊಳೆದು ಪುಣ್ಯತೀರ್ಥ ಚಿಮುಕಿಸಿ
ಹೊಸ ಕೊಂಬೆಗಳ ಸಂಗ್ರಹಿಸಿ ಚಿತೆಮಾಡಿ ಹೆಣವ ಅರ್ಪಿಸಿದೆವು.
ಬೂದಿಯ ಮೇಲೆ ಅವನ ತಾಯ್ನೆಲದ ಮಣ್ಣಿಂದ ಸ್ಮಾರಕ
ಮಾಡಿದೆವು.

ಅಲ್ಲಿಂದ ಕಗ್ಗವಿಯಲ್ಲಿ
ಕಲ್ಲ ಹಾಸಿಗೆ ಮೇಲೆ ತನ್ನ ಮದುಮಗನನ್ನು—ಸಾವನ್ನು—
ಕಾಯುತ್ತಿದ್ದ ಕನ್ಯೆಯ ವಿಮೋಚನೆಗೆ ಹೊರಟೊಡನೆ
ನಮ್ಮೆಲ್ಲರ ಮುಂದಿನ ನಮ್ಮಲ್ಲೊಬ್ಬ
ಆ ಮನೆಯಿಂದ, ಆ ದುರಂತದ ಮದುಮನೆಯಿಂದ
ಭೀಕರ ಚೀತ್ಕಾರ ಮಾರುಧ್ವನಿಗೊಳ್ಳುವುದ ಕೇಳಿಸಿಕೊಂಡ.
ಆತ ಹಿಂದೆ ಬಂದು ದೊರೆ ಕ್ರೆಯಾನ್‌ಗೆ ಹೇಳಿದ ; ಆದರೆ
ಆಗಲೇ ದೊರೆಗೆ ಆ ಗೂಢ ಸದ್ದಿನ ಅರ್ಥ ತಿಳಿದಂತಿತ್ತು.

"ಓ ನಿಜವಾಯ್ತೆ ನನ್ನ ಕಳವಳ ? ನನಗೆ ನಡೆಯಲಾಗುತ್ತಿಲ್ಲ ;
ನನ್ನ ಮಗನ ಧ್ವನಿ ಕಿವಿಯ ಚುಚ್ಚುತ್ತಿದೆ, ಓಡಿ, ಓಡಿ
ಸೇವಕರೆ, ನೀವು ಇಣಿಕುತ್ತಿದ್ದ ಕಗ್ಗವಿಯೊಳಕ್ಕೆ ನೇರ ನೋಡಿ
ಅದು ಹಯ್‌ಮೋನನ ಧ್ವನಿಯೋ ಅಲ್ಲವೋ ಹೇಳಿ.
ಅಲ್ಲದಿದ್ದರೆ ಅದು ನನ್ನ ಮನಸ್ಸಿನೊಂದಿಗೆ ದೇವರ ಚೆಲ್ಲಾಟ,"
ಅಂದ. ದಣಿಯ ಮಾತಿನಂತೆ ಓಡಿ ನೋಡಿದರೆ
ಅಲ್ಲಿ ಗುಹೆಯ ಮೂಲೆಯಲ್ಲಿ ನೇತಾಡುತ್ತಿತ್ತು ಅವಳ ದೇಹ,
ನಾರಿನ ಹಗ್ಗದ ಕೊನೆಯಲ್ಲಿ. ಅವಳನ್ನ, ಸ್ವರ್ಗಕ್ಕೆ ತೆರಳಿದ
ಪ್ರೇಯಸಿಯ, ನಿರ್ಭಾಗ್ಯೆ ನಲ್ಲೆಯ ನಡುವನ್ನಪ್ಪಿ
ತಂದೆಯನ್ನು ಶಪಿಸುತ್ತ ಅಳುತ್ತಿದ್ದ.
        ಇದನ್ನು ಕಂಡೊಡನೆ ಕ್ರೆಯಾನ್
ದೊಡ್ಡದಾಗಿ ಅಳುತ್ತ ಎದೆಯೊಡೆಯುವಂತೆ ಬಿಕ್ಕಳಿಸುತ್ತ
ಗುಹೆಯನ್ನು ಹೊಕ್ಕು, "ಲೋಕವರಿಯದ ಕಂದ,
ಏನು ಮಾಡುತ್ತಿದ್ದೀ, ಇಲ್ಲಿ ? ಎಂಥ ಹುಚ್ಚು ನಿನ್ನ
ಈ ವಿನಾಶದತ್ತ ಕರೆತಂದದ್ದು ? ಬಾ—ನಿನ್ನನ್ನ ಹೆತ್ತವನು
ಬೇಡುತ್ತಿದ್ದೇನೆ—ಬಾ" ಅಂದ.
        ಆದರೆ ತರುಣ ತಂದೆಯತ್ತ ಕ್ರೋಧದಿಂದ ಬಿರಬಿರನೆ
ನೋಡಿ
ಉತ್ತರವಾಗಿ ಉಗಿದು ಖಡ್ಗವ ಹಿರಿದು
ತಂದೆಯತ್ತ ಜಿಗಿದೊಡನೆ, ದೊರೆ ಪಕ್ಕಕ್ಕೆ ಸರಿದ.
        ತರುವಾಯ ಮಗ ಹತಾಶನಾಗಿ
ತನ್ನ ಖಡ್ಗದ ಮೊನೆಗೆ ಮೈಯಿಟ್ಟು ನೂಕಿಕೊಂಡ
ಕತ್ತಿಯ ಅರ್ಧ ಒಳಸೇರುವವರೆಗೆ. ಪ್ರಜ್ಞೆ ಮಾಸುತ್ತಿರಲು
ಕ್ರಮೇಣ ಬಸವಳಿದು ಅಂತಿಗೊನೆಯನ್ನು ಆಲಂಗಿಸಿಕೊಂಡ.
—ಅವಳ ಮುಖದ ಮೇಲೆ ರಕ್ತ ಕೆಂಪುಮಳೆಯಾಗಿತ್ತು.
        ಪ್ರೇಮದಪ್ಪುಗೆಯ ಶವದೊಂದಿಗೆ
ಶವವಾಗಿದ್ದಾನೆ. ಬದುಕಿನಲ್ಲಿ ಆಗದ ಮದುವೆಯನ್ನು
ಯಮನ ಅರಮನೆಯಲ್ಲಿ ಆಗಿದ್ದಾನೆ. ಮೌಢ್ಯ
ತರುವ ಹಾವಳಿಗೆ ಉದಾಹರಣೆಯಾಗಿದ್ದಾನೆ.
        (ಯೂರಿಡೀಸಿ ವೇಗವಾಗಿ ಒಳಗೆ ಹೋಗುತ್ತಾಳೆ)

ಮೇಳನಾಯಕ : ಏನು ? ಆಕೆಯ ನಿರ್ಗಮನದ ಅರ್ಥವೇನು ?

ಮಹಾರಾಣಿ ತುಟಿ ಪಿಟಕ್ಕೆನ್ನದೆ ಧಾವಿಸಿದಳು.

ದೂತ : ಹೌದು, ವಿಲಕ್ಷಣವಾಗಿದೆ. ನಮ್ಮೆಲ್ಲರೆದುರು ದುಃಖ
ತೋರಲು ಇಚ್ಛಿಸದೆ ಪರಿಚಾರಿಕೆಯ ಹತ್ತಿರ ಹೋಗಿರಬಹುದು.
ತಿಳಿದವಳು ಮಹಾರಾಣಿ,
ಆತುರದಲ್ಲಿ ಕೆಟ್ಟದಕ್ಕೆ ಮನಸ್ಸು ಮಾಡಲಾರಳು.

ಮೇಳನಾಯಕ : ಇರಬಹುದು,
ಆದರೆ ಮಿತಿಮೀರಿದ ರೋದನದಂತೆ
ಮಿತಿಮೀರಿದ ಮೌನ ಕಳವಳ ಹುಟ್ಟಿಸುತ್ತದೆ.

ದೂತ : ನೀನೆನ್ನುವುದು ಸರಿ ;
ಈ ಬಗೆಯ ಮೌನ ಅಪಾಯಕರ. ಒಳಗೆ ಹೋಗಿ
ನೋಡುತ್ತೇನೆ—ಎಂಥ ದುಃಖ ಎಂದು.

(ಹೋಗುತ್ತಾನೆ. ಕ್ರಿಯಾನ್ ಮಗನ ಶವವನ್ನು ಮಿಕ್ಕವರೊಂದಿಗೆ ಹೊತ್ತು ನಿಧಾನಕ್ಕೆ ಪ್ರವೇಶಿಸುತ್ತಾನೆ)

ಮೇಳನಾಯಕ : ಅಗೋ, ದೊರೆ ಬರುತ್ತಿದ್ದಾನೆ ;
ಅನಿರ್ವಚನೀಯ ಗೊತ್ತಾಗುತ್ತದೆ.
ಆತ ಹೊತ್ತಿರುವ ಶವ
ಆತನ ಪಾಪಕೃತ್ಯಕ್ಕೆ ಸಾಕ್ಷಿಯಾಗಿದೆ.

ಕ್ರಿಯೂನ್ : ಮಹಾಪಾಪ ಎಳೆಯುವುದು ನಮ್ಮ ಬದುಕನ್ನ
ಮಹಾಪಾಪ ತಳ್ಳುವುದು ಜೀವಂತವಾದ್ದನ್ನ, ಮರಣದತ್ತ.
ಕೊಂದವನು ನಾನೆ, ತಂದೆ,
ಕೊಲೆಯಾದವನು ಕಂದ.
ಓ ಪುತ್ರ, ಓ ನನ್ನ ಸಾವನಪ್ಪಿದ ಪುತ್ರ.
ನಿನ್ನನ್ನ ಕೊಂದದ್ದು ಎಳೆವಯಸ್ಸಿನ ಅವಿವೇಕವಲ್ಲ ;
ನಾನೇ—ಮೂರ್ಖತೆಯ ಮೊತ್ತ.

ಮೇಳನಾಯಕ : ತಡವಾಗಿ, ತೀರ ತಡವಾಗಿ
ತಿಳಿದಿದೆ ನಿನಗೆ ಸತ್ಯ.

ಕ್ರಿಯಾನ್ : ಹೌದು, ದುರಂತದಿಂದ ಪಾಠ ಕಲಿತೆ ;
ಓ, ಪರಮಾತ್ಮ ಮಾಡಿದ್ದು ಮಾಟ ;
ಸಗ್ಗಿಗನು ಬಿಟ್ಟಿದ್ದಾನೆ ತನ್ನಯ ಬಾಣ,
ಈ ನನ್ನ ನೀಚತನ ದೇವತೆಗಳಾಟ.

ನನ್ನ ಕೊಚ್ಚಿದ್ದಾನೆ, ತುಳಿದಿದ್ದಾನೆ ನನ್ನ ನಲಿವನ್ನ,
ಓ ಮಾನವ ! ನೋವೆಷ್ಟು ತುಂಬಿಹುದು ನಿನ್ನ ಬದುಕ.

ದೂತ : ಪ್ರಭು, ನಿನ್ನ ದುಃಖಕ್ಕೆಲ್ಲ ನೀನೆ ಕಾರಣ,
ಅದರರ್ಧವಾಗಲೇ ಕೈಯಲ್ಲಿದೆ ;
ಇನ್ನೇನು ಕಾಣುವುದು ಇನ್ನರ್ಧ ಯಾತನೆ
ಅದು ಈ ಕ್ಷಣದಲ್ಲಿ ಮನೆಯಲ್ಲಿದೆ.

ಕ್ರೆಯಾನ್ : ಇದನ್ನು ಮೀರಿದ ಇನ್ನರ್ಧ ಕೇಡು ಯಾವುದು ?

ದೂತ : ಸತ್ತಿರುವ ಇವನನ್ನು ಹೆತ್ತಾಕೆ, ನಿನ್ನವಳು, ಸತ್ತಳು.
ಹತಭಾಗ್ಯೆ, ಅವಳೆದೆಯ ಗಾಯ ಹೊಚ್ಚಹೊಸತು.

ಕ್ರೆಯಾನ್ : ಓ, ಎಲ್ಲ ಕೊಳ್ಳುವ ಯಮಲೋಕ
ಕರುಣೆಯು ಸೆಲೆಯಿಲ್ಲ, ಅಲ್ಲವೆ !
ನೀನೆನಗೆ ತರಬೇಕಿತ್ತು
ನನ್ನ ಹತ್ತಿಕ್ಕಿ ಇಲ್ಲವಾಗಿಸುವುದ, ಅಲ್ಲವೆ ?
ಸತ್ತವನ ಮತ್ತೆ ಕೊಲೆ ಮಾಡಿದ್ದೀ,
ಹೆಣದ ಮೇಲೆ ಹೆಣದ ರಾಶಿಯೊಟ್ಟಿ
ಮಾಡಬೇಡವೊ ಮತ್ತೆ, ಮತ್ತೆ ರಾಶಿಯ ಬೆಳೆಸಿ
ಕಂದ, ಕೈಹಿಡಿದವಳ ತೊರೆದವನ ಕುಟ್ಟಿ.

ಮೇಳನಾಯಕ : ನೋಡಿ, ಬಾಗಿಲು ತೆರೆದುಕೊಳ್ಳುತ್ತಿದೆ—ನೋಡಿ.
(ಮಧ್ಯದ ಬಾಗಿಲು ತೆರೆಯುತ್ತದೆ. ಯುರಿಡೀಸೆಯ ದೇಹ ಗೋಚರವಾಗುತ್ತದೆ)

ಕ್ರೆಯಾನ್ : ಓ, ಓ, ಓ, ಎರಡನೆಯ ಮಾರಕ ಹೊಡೆತ.
ಓ ವಿಧಿ, ನನ್ನ ಶೋಕದ ಪಾತ್ರೆ
ಹಿಡಿಸಲಾರದು ಇನ್ನು—ಇಲ್ಲ ;
ಈ ಎರಡನೆಯ ನೋಟ
ತಂದಿಕ್ಕಿದೆ ಎನಗೆ ಅಗಾಧ ನೋವನ್ನ ;
ಸತ್ತ ಮಗ ಕೈಯಲ್ಲಿ—ಅಲ್ಲಿ
ನೋಡುತ್ತಿದ್ದೇನೆ ಅವನ ಹೆತ್ತವಳ ಸಾವನ್ನ.

ದೂತ : ಅವಳ ಎದೆ ಛಿದ್ರಗೊಂಡಿತ್ತು
ತೂರಿಸಿದ್ದಳು ಅಲ್ಲಿ ಮೊನಚು ಚೂರಿ.
ಪೀಠದ ಬಳಿಯ ಮಬ್ಬುಗತ್ತಲೆಯಲ್ಲಿ
ನೆಲಕ್ಕೊರಗಿದಳು ರಕ್ತ ಕಾರಿ.

ಅಗಾಧವೇದನೆ ನೇತ್ರಗಳ ತುಂಬಿತ್ತು
ಒಮ್ಮೆ ತೀರಿದ ಹಿರಿಯ ಮಗನ ನೆನೆದು.
ಈತ ಸತ್ತದ್ದನ್ನು ಉಚ್ಚರಿಸಿ, ಒಡನೆಯೆ
ನಿನ್ನ ಶಪಿಸುತ್ತಲೇ ಒರಗಿದಳು ಸತ್ತು.

ಕ್ರಿಯಾನ್ : ಭಯದಿಂದ ಗಿಡಿದಿದೆ ನನ್ನೆದೆ,
ಯಾರ ಭರ್ಚಿಯೂ ನನ್ನ
ರಕ್ತರಂಜಿತ ನೋವನ್ನ
ಹೊಕ್ಕು ಕೊನೆಗೊಳಿಸದೆ ?

ದೂತ ; ಅವಳಾಡಿದ್ದು ಸತ್ಯ,
ಜೀವವಿಲ್ಲದ ವಸ್ತು
ನಿನ್ನಿಂದ ಎಲ್ಲ ಹತ್ಯ.

ಕ್ರಿಯಾನ್ : ಹೇಳು, ಅವಳೆಂತು ಸತ್ತಳು ?

ದೂತ : ಕಂದನ ಮರಣ ಕಿವಿಯಲ್ಲಿ ಮೊಳಗಿರಲು
ತನ್ನೆದೆಯ ತಾನೇ ಇರಿದು ಒರಗಿದಳು.

ಕ್ರಿಯಾನ್ : ಪರಮಾತ್ಮ, ಈ ನನ್ನ ಪಾಪಕ್ಕೆ
ಖಂಡಿತ ಇಲ್ಲ ಕ್ಷಮೆ ;
ಅವಳ ಕೊಂದವ ನಾನೇ,
ನೆಪದ ಆಸರೆಯಿಲ್ಲ ನನಗೆ.
ನನ್ನ ಕೊಂಡೊಯ್ಯಿರಿ, ಸೇವಕರೆ,
ಕರೆದೊಯ್ಯಿರೆನ್ನ ತ್ವರೆಯಿಂದ ;
ನಾನು ಮರೆಯಾಗುವೆನು
ನಿಮ್ಮೆಲ್ಲರಿಂದ.

ಮೇಳನಾಯಕ : ಕೊನೆಗೂ ಸುಸಂಗತ ಮಾತು ;
ಈ ಕೇಡಿನಲ್ಲೂ ಅಂಥದಿದ್ದರೆ.
ಪಾಪವನ್ನು ಬೇಗ ತೊಡೆವುದಗತ್ಯ.

ಕ್ರಿಯಾನ್ : ನನ್ನ ಕಟ್ಟಕಡೆಯ ಘಳಿಗೆ,
ಕೊನೆಯ ಅತಿಸುಂದರ, ಅತ್ಯುತ್ತಮ ಘಳಿಗೆ ;
ಕುರುಡಾಗಲೆನ್ನ ಕಣ್ಣು ನಾಳೆ ಎಂಬುದಕ್ಕೆ,
ಹೋಗುವೆ, ನಾ ಹೋಗುವೆ.

ಮೇಳನಾಯಕ : ನಾಳೆ ಎಂಬುದು ನಾಳೆ,
ಇವತ್ತಿನಲ್ಲಿರುವವರು ನಾವು,

ನಾಳೆಯು ಗೊಡವೆ ವಿಧಿಗೆ.

ಕ್ರೆಯಾನ್ : ಮಗನನ್ನ ಕೊಂದವನ, ಹೆಂಡತಿಯ ತೊರೆದವನ
ಸೊಕ್ಕಿನ ಮೂರ್ಖ, ದುರ್ಬಲನನ್ನ,
ಎಲ್ಲಕ್ಕೆ ಅಂಧನಾದವನನ್ನ,
ನೋವು ತುಂಬಿದ ನನ್ನ
ಕರೆದೊಯ್ಯಿರಯ್ಯ, ನನ್ನಾಣೆ ;
ಮುಟ್ಟಿದ್ದೆಲ್ಲ ಮಣ್ಣಾದಂದು,
ಸಾವೆನ್ನ ಮೇಲೆರಗಿದಂದು
ಎತ್ತ ನೋಡಲಿ ನಾನು—
ಎಲ್ಲಿಹುದು ನನಗೆ ಆಸರೆಯ ಜೀವ ?

ಮೇಳನಾಯಕ : ಎಲ್ಲಿ ವಿವೇಕವಿದೆ ಅಲ್ಲಿ ಸೌಖ್ಯವಿದೆ,
ಭಯಭಕ್ತಿ ಅದರಲ್ಲಿ ಕಲೆತು ;
ಅಹಂಕಾರ, ವೈಭವದ ಮಾತು, ಕೃತಿ ಕೊನೆಗೊಮ್ಮೆ
ಕಾಲನೇಟಿಗೆ ಸಿಕ್ಕು ಬಗ್ಗಿ ಬಡವಾಗುವುವು
ಮುಪ್ಪಿನಲಿ ನಮ್ರತೆಯ ಪಾಠ ಕಲಿತು.

● ●

‘ಅಕ್ಷರ ಪ್ರಕಾಶನ’ದ
ನಾಟಕಗಳು

ಪಿ. ಲಂಕೇಶ್

7 ನಾಟಕಗಳು

ಚಂದ್ರಶೇಖರ ಕಂಬಾರ

ನಾರ್ಸಿಸಸ್

ಜಾಕೇಶ ಮತ್ತು ನಾರ್ಸಿಸಸ್

ಬಾದಲ್ ಸರ್ಕಾರ್

ಬಾಕಿ ಇತಿಹಾಸ

ಏವಂ ಇಂದ್ರಜಿತ್

ಚಂದ್ರಶೇಖರ ಪಾಟೀಲ

ಮೂರು ನಾಟಕಗಳು

ಶ್ರೀರಂಗ

ಅಪರಾಧಂಗಳ ಕ್ಷಮಿಸೋ

ಯು. ಆರ್. ಅನಂತಮೂರ್ತಿ

ಆವಾಹನೆ

ಬಿ. ವಿ. ಕಾರಂತ

ಪಂಜರ ಶಾಲೆ

ಕೆ. ವಿ. ಸುಬ್ಬಣ್ಣ

ಕಾಡಿನಲ್ಲಿ ಕಥೆಗಳು

ಚಂದ್ರಕಾಂತ ಕುಸನೂರ

ಮೂರು ಅಸಂಗತ ನಾಟಕಗಳು

ಪಿ. ಎಸ್. ರಾಮಪ್ಪ

ಅಂಬಪಾಲಿ

ಜೋಡಿಕೆ ಮುದ್ರಣ : ಲಿಪಿ, ಬೆಂಗಳೂರು-4.